
ಸಂಪುಟ 24 ಸಂಚಿಕೆ 37-38
ಸೆಪ್ಟೆಂಬರ್ 22, 2002 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಐಕ್ಯರಂಗ




ಕಾವೇರಿ ನೀರು

ಸಮಬಾಳು - ಸಮಪಾಲು

ಕಾಶ್ಮೀರ ಚುನಾವಣೆ


'ನೀತಿಬದ್ಧ ರಾಜಕೀಯಕ್ಕಾಗಿ ಹೋರಾಟ'


'ಕೇಬಲ್ ಟಿವಿ ಮಸೂದೆ' ಹಣ ಕೀಳುವ ಇರಾದೆ



ಶಾಸಕ ಯೂಸುಫ್ ತರಿಗಾಮಿಯೊಂದಿಗೆ ಸಂದರ್ಶನ

ರಂಗಭೂಮಿಯ ಸಂಚಲನ ಬಿ.ವಿ.ಕಾರಂತ ಇನ್ನಿಲ್ಲ






ದೇಶಪ್ರೇಮಿ ವೆಂಕಯ್ಯ ನಾಯ್ಡು ಬಡವರ ಭೂಮಿ ನುಂಗಿದ್ದು


ಅನ್ನದಾತರ ಸಂಕಷ್ಟಗಳನ್ನು ಆಳುವವರ ಮುಂದೆ ಮಂಡಿಸಿದ ರೈತರ ರ್‍ಯಾಲಿ

ಸೆಪ್ಟೆಂಬರ್ 2ರ ಬೆಳಗ್ಗೆ ಸಾವಿರಾರು ರೈತಾಪಿ ಜನತೆ ಬೆಂಗಳೂರಿನ ಚಿಕ್ಕಲಾಲ್‌ಬಾಗ್ ಸುತ್ತ ಕೆಂಬಾವುಟಗಳು, ವಿವಿಧ ರೀತಿಯ ಬ್ಯಾನರ್‌ಗಳೊತ್ತ ಜಮಾಯಿಸತೊಡಗಿದರು. ನೆತ್ತಿ ಮೇಲೆ ಸೂರ್ಯನ ತಾಪ ಹೆಚ್ಚಾಗುತ್ತಿದ್ದಂತೆ ನಿಧಾನವಾಗಿ ಸಾವಿರಾರು ರೈತರ ಮೆರವಣಿಗೆಯು ಪ್ರಾರಂಭವಾಯ್ತು. ತಲೆಮೇಲೆ ಹೊತ್ತು ತಂದಿದ್ದ ಗಂಟು ಭಾರವಾದಂತೆ, ಸುಂದರ ರಸ್ತೆ ಮೇಲೆ ಸೂರ್ಯನ ಬಿಸಿಲಿನ ಜಳ ಜಾತ್ರೆಯಾಗಿ ಕಾಲಿಗೆ ಚುರುಕು ಮುಟ್ಟುತ್ತಿದ್ದಂತೆ, ನೆಡೆಯುತ್ತಿದ್ದ ರೈತನ ಆಕ್ರೋಶವು ಘೋಷಣೆಗಳ ರೂಪದಲ್ಲಿ ಹೊರ ಹೊಮ್ಮತೊಡಗಿತು. ಸುಮಾರು ಐದಾರು ಸಾವಿರ ರೈತರ ಸಿಟ್ಟನ್ನು ನಿಬ್ಬೆರಗಾಗಿ ನೋಡ ತೊಡಗಿದ್ದರು ರಸ್ತೆ ಬದಿಯ ಜನ. ರೈತರ ಸಿಟ್ಟಿಗೆ ರೈಲ್ವೆ ನಿಲ್ದಾಣದ ರಸ್ತೆಗಳು, ಎ.ಹಚ್. ರಾಣಿ ಕಾಲೇಜಿನ ರಸ್ತೆಗಳಲ್ಲಿ ನಿರ್ಜನವಾಗಿ ನಿಂತು ದಾರಿ ಮಾಡಿಕೊಟ್ಟವು. ನೂರಾರು ವಾಹನಗಳು ಮೂಕ ಪ್ರೇಕ್ಷಕರಾಗಿ ಮೂಲೆ ಸರಿದಿದ್ದವು. ಸುಮಾರು ಒಂದು ಗಂಟೆಯ ಸಮಯ.



ಕರ್ನಾಟಕ ಪ್ರಾಂತ ರೈತ ಸಂಘ, ಹಾಲು ಉತ್ಪಾದಕರು ಮತ್ತು ಹಾಲು ಉತ್ಪಾದಕರ ಸೊಸೈಟಿಗಳ ನೌಕರರು, ರೇಷ್ಮೆ ಬೆಳೆಗಾರರು, ನೀರಾವರಿ ಪಂಪ್‌ಸೆಟ್ ಬಳಕೆದಾರ ರೈತರು, ಮತ್ತು ವಿದ್ಯುತ್ ಬಳಕೆದಾರರು ಸಂಘಗಳು ಸೆಪ್ಟೆಂಬರ್ 2 ರಂದು ಜಂಟಿಯಾಗಿ ಸಂಘಟಿಸಲಾಗಿದ್ದ "ಬೆಂಗಳೂರು ರ್‍ಯಾಲಿಯ ದೃಶ್ಯವಿದು.

'ಕೃಷಿಯನ್ನು ಉಳಿಸಿ, ರೈತರನ್ನು ಉಳಿಸಿ' ಎಂಬ ಮಹತ್ವದ ಘೋಷಣೆಯೊಂದಿಗೆ ರೈತರ ಬೇಡಿಕೆ ದಿನಾಚರಣೆ ಯನ್ನು ಬೃಹತ್ ರ್‍ಯಾಲಿ ಮತ್ತು ಸಮಾವೇಶ ಸಂಘಟಿಸುವುದರ ಮೂಲಕ ಕರ್ನಾಟಕ ಪ್ರಾಂತ ರೈತ ಸಂಘ 'ಅನ್ನದಾತ'ನ ಸಂಕಷ್ಟಗಳನ್ನು ಆಳುವವರ ಎದುರು ಮಂಡಿಸಿತ್ತು.



ಕರ್ನಾಟಕ 27 ಜಿಲ್ಲೆ ಗಳ ಪೈಕಿ -22 ಜಿಲ್ಲೆಗಳು ಹಿಂದೆಂದೂ ಕಂಡರಿಯದ ಭೀಕರ ಬರವನ್ನು ಎದುರಿಸುತ್ತಿವೆ. ಕಾಂಗ್ರೆಸ್ ಸರ್ಕಾರ ಇಂತಹ ಭಯಾನಕ ಬರ ಪರಿಸ್ಥಿತಿಯನ್ನು ನಿಭಾಯಿಸು ವಲ್ಲಿ ಸಂಪೂರ್ಣ ವಿಫಲವಾಗಿದೆ. ವಾಜಪೇಯಿ ನೇತೃತ್ವದ ಕೇಂದ್ರ ಸರ್ಕಾರ ರಾಜ್ಯಕ್ಕೂ ನೀಡಬೇಕಾದ ನೆರವನ್ನು ನೀಡದೇ ಕೇವಲ ಅಧ್ಯಯನ ತಂಡಗಳನ್ನು ಕಳುಹಿಸುವ ನಾಟಕವಾಡುತ್ತಿದೆ. ಇನ್ನೊಂದೆಡೆ ರಾಜ್ಯವು ತೀವ್ರ 'ವಿದ್ಯುತ್ತಿನ' ಬರ, ದರ ಏರಿಕೆಯಂತಹ ಬಹುಮುಖದ ಧಾಳಿಯ ಪರಿಸ್ಥಿತಿಯನ್ನು ಸರ್ಕಾರದ ಖಾಸಗೀಕರಣ ನೀತಿಯಿಂದ ಎದುರಿಸುವಂತಾಗಿದೆ. ವಿದ್ಯುತ್ ಉತ್ಪಾದನೆ ಸರಬರಾಜು ಮತ್ತು ವಿತರಣೆಗಳನ್ನು ವಿಶ್ವಬ್ಯಾಂಕ್



ಷರತ್ತುಗಳಿಗೆ ಶರಣಾಗಿ ಖಾಸಗೀಕರಣ ಮಾಡುತ್ತಿರುವುದರಿಂದ ರೈತ ಮತ್ತಷ್ಟು ಸಂಕಷ್ಟಕ್ಕೀಡಾಗಿದ್ದಾನೆ.

ಹೊರ ರಾಜ್ಯಗಳಿಂದ ಅಧಿಕ ಪ್ರಮಾಣದ ಹಾಲು ರಾಜ್ಯವನ್ನು ಪ್ರವೇಶಿಸುತ್ತಿದ್ದ ಅದರ ನಿಯಂತ್ರಣವನ್ನು ರಾಜ್ಯ ಸರ್ಕಾರ ಮಾಡುತ್ತಿಲ್ಲ. ಮುಕ್ತ ಆಮದು ಬೇರೆ. ಹೀಗಾಗಿ ಹಾಲು ಉತ್ಪಾದಕರು ಮತ್ತು ಸಂಘಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಹಾಲು ಉತ್ಪಾದಿಸುವ ಲಕ್ಷಾಂತರ ಕಂಪನಿಗಳು ಬೀದಿಪಾಲಾಗುವಂತಹ ಪರಿಸ್ಥಿತಿ ಬಂದೊದಗಿದೆ ಇದಲ್ಲದೆ ರೇಷ್ಮೆ ಬೆಳಗಾರರ ಪಾಡು ಹೇಳತೀರದು. ಇಂತಹ ಹತ್ತು ಹಲವು ಸಂಕಷ್ಟಗಳನ್ನು ಪರಿಹರಿಸಲು ಹಲವಾರು ರೀತಿಯ ಹೋರಾಟಗಳನ್ನು ರೈತರು ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರೂ ಕೇಂದ್ರ ರಾಜ್ಯ ಸರ್ಕಾರಗಳು ಕಣ್ಣು ಕಿವಿಗಳನ್ನು ಮುಚ್ಚಿಕೊಂಡು ರೈತರ ಶವಸಂಸ್ಕಾರಕ್ಕೆ ಸಿದ್ಧವಾಗುತ್ತಿದೆ. ಸರ್ಕಾರಗಳ ಈ ರೈತ ವಿರೋಧಿ ನೀತಿಗಳನ್ನು ಕೈ ಬಿಡದಿದ್ದರೆ, ಅಕ್ಟೋಬರ್ 9 ರಂದು ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಕೆಪಿಟಿಸಿ ಎಲ್ ಕಛೇರಿಗಳನ್ನು ಮುತ್ತಿಗೆ ಹಾಕಿ ನಿರಂತರ ಪ್ರತಿಭಟನೆಗಳನ್ನು ನಡೆಸುವುದಾಗಿ ಸಮಾವೇಶವು ಒಕ್ಕೂರಲಿನ ನಿರ್ಣಯ ಕೈಗೊಂಡಿತು.

ಇದಲ್ಲದೆ 'ಬರ' ಪರಿಸ್ಥಿತಿಯನ್ನು ಎದು ರಿಸದೇ 'ಆತ್ಮಹತ್ಯೆ' ದಾರಿ ತುಳಿದ ಹೊಸ ಕೋಟೆ ತಾಲ್ಲೂಕಿನ ರಾಮಪ್ಪನವರ ಕುಟುಂಬಕ್ಕೂ ಸರ್ಕಾರ 5 ಲಕ್ಷ ರೂಪಾಯಿಗಳ ಪರಿಹಾರವನ್ನು ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸಿತು. ಮತ್ತು ಅನ್ನದಾತನಿಗೆ ಎದುರಾಗಿರುವ ಈ ತೀವ್ರ ರೀತಿಯ ಸಂಕಷ್ಟಗಳಿಗೆ 'ಆತ್ಮಹತ್ಯೆ' ಪರಿಹಾರವಲ್ಲ ಸಂಘಟಿತ ಹೋರಾಟ ಮಾತ್ರವೇ ಇರುವ ಏಕೈಕ ದಾರಿ ಎಂದು ರ್‍ಯಾಲಿಯು ಆತ್ಮ ಸ್ಥೈರ್ಯವನ್ನು ಮೂಡಿಸಿತು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷ ಜಿ.ಎನ್. ನಾಗರಾಜ್, ಸಿಐಟಿಯು ರಾಜ್ಯ ಪ್ರಧಾನ ಕಾರ್ಯ ದರ್ಶಿ ವಿ.ಜೆ.ಕೆ. ನಾಯರ್, ಮಾಜಿ ಶಾಸಕ ರಾದ ಜಿ.ವಿ.ಶ್ರೀರಾಮ ರೆಡ್ಡಿ, ಮಾಜಿ ಕೇಂದ್ರ ಮಂತ್ರಿಗಳು ಹಾಗೂ ರೈತ ಮುಖಂಡರಾದ ಬಾಬು ಗೌಡ ಪಾಟೀಲ್, ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ. ಬಯ್ಯಾರೆಡ್ಡಿ ಹಾಲು ಉತ್ಪಾದಕರ ಸಂಘದ ಮುಖಂಡರು, ಎನ್.ವೆಂಕಟಾಚಲಯ್ಯ, ಮೊದಲಾದವರು ರ್‍ಯಾಲಿ ನಂತರ ನಡೆದ ಬಹಿರಂಗ ಸಭೆಯನ್ನು ದ್ದೇಶಿಸಿ ಮಾತನಾಡಿದರು. ಅಧ್ಯಕ್ಷತೆಯನ್ನು ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರು, ಮಾರುತಿ ಮಾನ್ಪಡೆ ವಹಿಸಿದ್ದರು. ಸಭೆಯು ನಡೆಯುವ ಸ್ಥಳಕ್ಕೆ ರಾಜ್ಯ ಸರ್ಕಾರದ ಪರವಾಗಿ ಆಗಮಿಸಿದ ಸಮಾಜ ಕಲ್ಯಾಣ ಸಚಿವ ಎ.ಕೃಷ್ಣಪ್ಪ ನವರಿಗೆ ಬೇಡಿಕೆಗಳ ಪಟ್ಟಿ ಸಲ್ಲಿಸಲಾಯಿತು.

ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಯು ಬಸವರಾಜ್ ಆರಂಭದಲ್ಲಿ ಸ್ವಾಗತಿಸಿ ದರು. ವಿ.ಪಿ. ಕುಲಕರ್ಣಿ ವಂದಿಸಿದರು.

ಅಕ್ಟೋಬರ್ 9ರಂದು ತಾಲ್ಲೂಕು ಕೇಂದ್ರಗಳಲ್ಲಿ ಹೋರಾಟಗಳನ್ನು ನಡೆಸುವ ಘೋಷಣೆ ಯೊಂದಿಗೆ ಸಭೆ ಮುಕ್ತಾಯವಾಯಿತು.



ಹೋರಾಟದ ಕರೆ

ರಾಜ್ಯ ಸರ್ಕಾರವು ಸಂಕಷ್ಟದಲ್ಲಿರುವ ರೈತನ ಜೀವ, ಜೀವನ ಮತ್ತು ಸ್ವಾಭಿಮಾನವನ್ನು ಉಳಿಸಲು ವೀರೇಶ್ ವರದಿಯಂತಹ ವರದಿಗಳನ್ನು ತಿರಸ್ಕರಿಸುವುದರ ಜೊತೆಗೆ, ತಮಗೆ ಸಂಬಂಧಪಟ್ಟ ಬೇಡಿಕೆಗಳನ್ನು ಈಡೇರಿಸಬೇಕು ಹಾಗೂ ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಡ ತರಬೇಕೆಂದು ಆಗ್ರಹಿಸಿತು. ಸೆಪ್ಟೆಂಬರ್ 23, 02ರಂದು ರಾಜ್ಯಾದ್ಯಂತ ಎಲ್ಲಾ ತಾಲೂಕು ಆಫೀಸ್‌ಗಳಿಗೆ ಮನವಿ ಸಲ್ಲಿಸಿ, ಕೆ.ಪಿ.ಟಿ.ಸಿ.ಎಲ್ ಕಛೇರಿಗಳನ್ನು ಮುತ್ತಿಗೆ ಹಾಕಬೇಕೆಂದು 'ರೈತರ ದಿನ'ದಂದು ಬೆಂಗಳೂರಿನಲ್ಲಿ ಸಮಾವೇಶಗೊಂಡಿದ್ದ ರೈತರ ಬೃಹತ್ ರ್‍ಯಾಲಿ ಕರೆ ನೀಡುತ್ತದೆ.

ಸೆಪ್ಟೆಂಬರ್ 20 ಬರಪರಿಹಾರದ ದಿನ, 21 ರಿಂದ 30 ಜೀಪ್-ಸೈಕಲ್‌ಜಾಥಾ - ಬಹಿರಂಗ ಸಭೆ- ಪ್ರಚಾರಾಂದೋಲನ

ಸೆಪ್ಟೆಂಬರ್ 20ರಂದು ಬರಪರಿಹಾರಕ್ಕಾಗಿ ಆಗ್ರಹಪಡಿಸುವ ದಿನವೆಂದು ರಾಜ್ಯದಾದ್ಯಂತ ಆಚರಿಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ (ಸಿಪಿಐ(ಎಂ)ದ ಕರ್ನಾಟಕ ರಾಜ್ಯ ಸಮಿತಿ ತೀರ್ಮಾನಿಸಿದೆ. ಅಂದು ತಾಲ್ಲೂಕು ಹಾಗೂ ಜಿಲ್ಲಾ ಕಛೇರಿಗಳನ್ನು ಬೆಂಗಳೂರಿನಲ್ಲಿ ರಾಜಭವನವನ್ನು ಪಿಕೆಟಿಂಗ್ ಮಾಡಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ನಿರ್ಲಕ್ಷ್ಯತನವನ್ನು ಪ್ರತಿಭಟಿಸಲಾಗುವುದು.

ಬರಗಾಲದ ಪೂರ್ವ ಮಾಹಿತಿಯನ್ನು ಉಪಗ್ರಹಗಳ ರಿಮೋಟ್ ಸೆನ್ಸಿಂಗ್ ಅಧ್ಯಯನದ ಮೂಲಕ ಕೇಂದ್ರ ಸರ್ಕಾರ ಪ್ರತಿದಿನವು ಪಡೆಯುತ್ತಿದ್ದರೂ ಕೂಡ ಬರ ಪರಿಸ್ಥಿತಿ ಆರಂಭವಾದ 3 ತಿಂಗಳ ನಂತರ ಅಧಿಕಾರಿಗಳ ತಂಡವನ್ನು ಕಳಿಸುವ ಮೂಲಕ ಕೇಂದ್ರ ಸರ್ಕಾರ ಕಾಲಹರಣ ಮಾಡಿದೆ. ಪರಿಹಾರ ಕಾಮಗಾರಿಗಳಿಗಾಗಿ ಇನ್ನೂ ಹಣ ಮತಿತು ಕೂಲಿಗಾಗಿ ಕಾಳು ಯೋಜನೆಯಲ್ಲಿ ಧಾನ್ಯ ಬಿಡುಗಡೆ ಮಾಡದೆ ಬರಗಾಲ ಪೀಡಿತ ಜನತೆಗೆ ವಂಚನೆ ಮಾಡಿವೆ. 35ರಿಂದ 40 ಸಾವಿರ ಕೋಟಿ ರೂಪಾಯಿ ಬೆಲೆಯ 6.5 ಕೋಟಿ ಟನ್ ಅಕ್ಕಿ ಮತ್ತು ಗೋಧಿ ಸರ್ಕಾರಿ ಗೋದಾಮುಗಳು ಕೊಳೆಯುತ್ತಿವೆ. ಸಗಟು ವ್ಯಾಪಾರದ ಕಂಪನಿಗಳಿಗೆ ಹಾಗೂ ವಿಂದೇಶಿ ರಫ್ತುದಾರರಿಗೆ ಕೆ.ಜಿಗೆ 4-50 ರೂಪಾಯಿಗಳಿಗೆ ಅಕ್ಕಿಯನ್ನು ಮಾರಾಟ ಮಾಡ ಹೊರಟಿರುವ ಕೇಂದ್ರ ಸರ್ಕಾರ ಬರಗಾಲ ಪೀಡಿತ ಜನರಿಗೆ 6-50 ರೂಪಾಯಿ ಬೆಲೆ ನಿಗಧಿ ಮಾಡಿರುವುದು, ಪರಿಹಾರ ಕಾರ್ಯಕ್ರಮಗಳ ಬಗ್ಗೆ ಹಾಗೂ ಬಡ ರೈತ ಕೂಲಿಕಾರರ ಬಗ್ಗೆ ಕೇಂದ್ರ ಬಿಜೆಪಿ ಸರ್ಕಾರಕ್ಕಿರುವ ನಿರ್ಲಕ್ಷತನವನ್ನು ಎತ್ತಿ ತೋರಿಸುತ್ತದೆ.

ಆದೇ ರೀತಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಮೇಲೆ ದೂರು ಹೊರಿಸುತ್ತಾ ಕೇವಲ ಮಾತುಗಳಲ್ಲಿ ಬರಗಾಲ ಪರಿಹಾರ ಕಾರ್ಯಕ್ರಮ ಕೈಗೊಂಡಿದೆ ಎಂದು ಸಿಪಿಐ(ಎಂ) ರಾಜ್ಯಸಮಿತಿ ಆರೋಪಿಸಿದೆ.

ಸೆಪ್ಟೆಂಬರ್ 30 ತ್ರಿಪುರಾ ಸೌಹಾರ್ದ ದಿನ

ಬರಗಾಲ ಪರಿಹಾರ ಕಾರ್ಯಕ್ರಮಗಳ ಜೊತೆಗೆ ಕೇಂದ್ರ ಸರ್ಕಾರದ ಭ್ರಷ್ಟಾಚಾರ ಹಾಗೂ ದೆಹಲಿಯ ಭೂ ಹಂಚಿಕೆ, ಬಿಜೆಪಿ ಅಧ್ಯಕ್ಷ ವೆಂಕಯ್ಯ ನಾಯ್ಡು ಭೂ ಕಬಳಿಕೆ ಹಗರಣಗಳ ವಿರುದ್ಧ, ಗುಜರಾತಿನಲ್ಲಿ ನರೇಂದ್ರ ಮೋದಿ ಸರ್ಕಾರ ವಜಾ ಮತ್ತು ರಾಷ್ಟ್ರಪತಿ ಆಡಳಿತಕ್ಕಾಗಿ ಜಮ್ಮು ಕಾಶ್ಮೀರವನ್ನು ಮೂರು ಭಾಗಗಳಾಗಿ ವಿಭಜಿಸುವ ಪ್ರಯತ್ನ, ಇರಾಕ್ ಮೇಲೆ ಅಮೇರಿಕದ ಯುದ್ಧ ತನ್ನಹ ಮತ್ತು ಭಾರತ ಸರ್ಕಾರದ ನಿಲುವು ಹಾಗೂ ತ್ರಿಪುರದಲ್ಲಿ ಭಯೋತ್ಪಾದನೆಯನ್ನು ದಮನಿಸದೆ ಕೇಂದ್ರ ಸರ್ಕಾಟಿ ಮಿಲಿಟರಿಯನ್ನು ಕಳುಹಿಸಲು ನಿರಾಕರಿಸಿರುವುದು, ಇವುಗಳ ಬಗ್ಗೆ ಸೆಪ್ಟೆಂಬರ್ 21ರಿಂದ 30ರವರೆಗೆ ಪಾದಯಾತ್ರೆ ಹಾಗೂ ಜೀಪ್, ಸೈಕಲ್ ಪ್ರಚಾರ ಜಾಥಾಗಳನ್ನು ಕೈಗೊಳ್ಳಬೇಕೆಂದು ರಾಜ್ಯ ಸಮಿತಿ ತೀರ್ಮಾನಿಸಿದೆ. 30ರಂದು ತ್ರಿಪುರದಲ್ಲಿ ಭಯೋತ್ಪಾದಕರ ಧಾಳಿ ಮತ್ತು ಇಂತಹ ಶಕ್ತಿಗಳೊಂದಿಗೆ ಕೈಜೋಡಿಸಿರುವ ಕಾಂಗ್ರೆಸ್ ನೀತಿ ವಿರುದ್ಧ ಹೋರಾಡುತ್ತಿರುವ ಎಡರಂಗ ಹಾಗೂ ಜನತೆಗೆ ಸೌಹಾರ್ದತೆ ವ್ಯಕ್ತಪಡಿಸಿ ತ್ರಿಪುರಾ ಸೌಹಾರ್ದ ದಿನವನ್ನು ಆಚರಿಸಲಾಗುವುದು.

ಕರ್ನಾಟಕ ಮತ್ತು ತಮಿಳುನಾಡುಗಳಲ್ಲಿ ತೀವ್ರಮಳೆಯ ಅಭಾವದಿಂದಾಗಿ ಕಾವೇರಿ ನೀರು ಹಂಚಿಕೆಯ ವಿವಾದ ಮತ್ತೊಮ್ಮೆ ಭುಗಿಲೆದ್ದಿದೆ. ದಿನಂಪ್ರತಿ 1.25 ಟಿಎಂಸಿ ನೀರನ್ನು ಅಕ್ಟೋಬರ್‌ವರೆಗೆ ಬಿಡಬೇಕೆಂಬ ಸುಪ್ರಿಂಕೋರ್ಟ್ ತೀರ್ಪಿನ ಬಳಿಕ ಕಾವೇರಿ ನದಿ ಪ್ರಾಧಿಕಾರದ ಹೊಸ ಆದೇಶವೂ ಹೊರಬಂದು ಕೋರ್ಟ್ ಆಜ್ಞೆ ರದ್ದಾಗಿದೆ. ನಂತರವೂ ಚಳುವಳಿ ಸಂಕಷ್ಟದ ಸ್ಥಿತಿಯಲ್ಲಿರುವ ಎರಡೂ ರಾಜ್ಯಗಳ ರೈತರ ಭವಿಷ್ಯತ್ತನ್ನು ತಕ್ಷಣದಲ್ಲಿ ಹಾಗೂ ದೀರ್ಘಕಾಲಿಕವಾಗಿ ಕಾಯುವ ಮಾರ್ಗವಾದರೂ ಏನಿದೆ?



ಕಾವೇರಿ ನೀರು ಹಂಚಿಕೆ

ಸರ್ವರಿಗೆ ಸಮಪಾಲು ಸರ್ವರಿಗೆ ಸಮಬಾಳು

ಜಿ.ಎಸ್.ನಾಗರಾಜ್

ಕಾವೇರಿ ನದಿಯ ನೀರು ಹಂಚಿಕೆ ನಿರಂತರವಾಗಿ ಕರ್ನಾಟಕ ಮತ್ತು ತಮಿಳುನಾಡು ರಾಜ್ಯ ಸರ್ಕಾರ ಹಾಗೂ ಜನಗಳ ನಡುವೆ ತಿಕ್ಕಾಟಕ್ಕೆ ಎಡೆಮಾಡಿದೆ. ಇದಕ್ಕೆ ಮುಖ್ಯ ಕಾರಣ ಎರಡೂ ರಾಜ್ಯಗಳ ಸರ್ಕಾರಗಳು ಒಟ್ಟು ರಾಷ್ಟ್ರದ ಹಿತದೃಷ್ಟಿ ಹಾಗೂ ಇಡೀ ಕಾವೇರಿ ಕಣಿವೆ ಪ್ರದೇಶದ ರೈತರ ಒಟ್ಟೂ ದೃಷ್ಟಿಯನ್ನು ಪರಿಗಣಿಸದೆ ಏಕಮುಖವಾಗಿ ತಮ್ಮ ತಮ್ಮ ರಾಜ್ಯಗಳ ಜನತೆಯ ಹಿತಗಳ ಬೇರೆ ರಾಜ್ಯದ ಹಿತಗಳ ಜನತೆಯ ಹಿತಗಳಿಗಿಂತ ಮೇಲುಗೈ ಪಡೆಯಬೇಕು. ಇದರಿಂದ ಇತರರಿಗೆ ಎಷ್ಟು ಸಂಕಟಗಳು ಉಂಟಾದರೂ ತಮಗೆ ಯಾವುದೇ ಅನಾನುಕೂಲವಾಗ ಬಾರದು ಎಂದು ಭಾವಿಸುವುದೇ ಈ ತಿಕ್ಕಾಟದ ಮೂಲವಾಗಿದೆ. ಇಂತಹ ತಿಕ್ಕಾಟವನ್ನು ಪರಿಹರಿಸಲೆಂದು ಸುಪ್ರೀಂ ಕೋರ್ಟಿನ



ಆಜ್ಞೆಯ ಮೇರೆಗೆ ಕಾವೇರಿ ಅಂತರರಾಜ್ಯ ನೀರು ಹಂಚಿಕೆ ನ್ಯಾಯಮಂಡಳಿ ಅಥವಾ ಟ್ರಿಬ್ಯುನಲ್ ಅನ್ನು ನೇಮಿಸಬೇಕೆಂದು ತೀರ್ಪು ನೀಡಿದೆ. ಈ ತೀರ್ಪಿನ ಅನ್ವಯ ನೇಮಕವಾದ ಕಾವೇರಿ ನ್ಯಾಯ ಮಂಡಳಿಯ ಒಂದು ವರ್ಷದಲ್ಲಿ ಕನಿಷ್ಠ 205 TMC ನೀರನ್ನು ತಮಿಳುನಾಡಿಗೆ ಬಿಡಬೇಕೆಂದು ನಿರ್ದೇಶಿಸಿತು. ಈ ನೀರಿನ ಈ ಬಿಡುಗಡೆ ಜೂನ್‌ನಿಂದ ಸೆಪ್ಟೆಂಬರ್ ಅವಧಿಯಲ್ಲಿ 137 TMC, ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ 56.59 TMC, ಜನವರಿಯಿಂದ ಮೇ ವರೆಗೆ 11.41 TMC ಆಗಿರಬೇಕೆಂದು ಆಜ್ಞೆ ಮಾಡಿತ್ತು. ಜೂನ್, ಜುಲೈ, ಅಗಸ್ಟ್‌ಗಳಲ್ಲಿ 107.24 TMC ಅಡಿ ನೀರು ತಮಿಳುನಾಡಿಗೆ ಹರಿಯಬೇಕು.

ಉಭಯ ರಾಜ್ಯಗಳ ಕರ್ತವ್ಯ

ಇದೇ ಕಾವೇರಿ ನ್ಯಾಯ ಮಂಡಳಿಯು ಕರ್ನಾಟಕ ಸರ್ಕಾರದ ಅಪೀಲು ಅರ್ಜಿಯ ಮೇಲೆ ವಿಚಾರಣೆ ನಡೆಸಿ, ಮಳೆ ಅಭಾವದ ಪರಿಸ್ಥಿತಿಯಲ್ಲಿ, ಅಭಾವದ ಪ್ರಮಾಣವನ್ನು ಎರಡೂ ರಾಜ್ಯಗಳು ತಮ್ಮ ನೀರಿನ ಉಪಯೋಗದ ಪ್ರಮಾಣಕ್ಕೆ ಅನುಗುಣವಾಗಿ ಹಂಚಿಕೊಳ್ಳಬೇಕೆಂದು ನಿರ್ದೇಶಿಸಿತು. ಈ ಆಜ್ಞೆಗೆ ಅನುಗುಣವಾಗಿ ನಡೆದುಕೊಳ್ಳಬೇಕಾದದ್ದು ಉಭಯ ರಾಜ್ಯಗಳ ಕರ್ತವ್ಯವಾಗಿತ್ತು.

ಸಂಕಷ್ಟ ಸ್ಥಿತಿ

2000ರಿಂದ 2003ನೇ ಅಂದರೆ ಈ ವರ್ಷದಲ್ಲಿ ದೇಶಾದ್ಯಂತ ವ್ಯಾಪಕ ಬರಗಾಲವನ್ನು ಎದುರಿಸುತ್ತಿದೆ. ಕಾವೇರಿ ಬಯಲಿನ ಅಣೆಕಟ್ಟಿನಲ್ಲಿ ಶೇಖರವಾದ ನೀರಿನ ಸಂಗ್ರಹದ ಪ್ರಮಾಣವಂತು, ಹಿಂದಿನ 12 ವರ್ಷಗಳಿಗೆ ಹೋಲಿಸಿದರೆ ಅತ್ಯಂತ ಕಡಿಮೆ ಪ್ರಮಾಣದ್ದು. ಇಂತಹ ಸಂಕಷ್ಟದ ಪರಿಸ್ಥಿತಿಯಲ್ಲಿಯೇ ಮಾನವೀಯತೆ, ನ್ಯಾಯ ದೃಷ್ಟಿಯ ಪರೀಕ್ಷಾ ಕಾಲ. 107 TMCಗಿಂತಲೂ ಹೆಚ್ಚು ನೀರು ತಮಿಳುನಾಡಿಗೆ ಬಿಡಬೇಕಾದ ಸಮಯದಲ್ಲಿ ಈ ವರ್ಷ ಕೇವಲ 29 TMC ನೀರನ್ನು ಮಾತ್ರ ಬಿಡಲಾಗಿದೆ. ಅಗಸ್ಟ್ ತಿಂಗಳಲ್ಲಿ ಬಂದ ಮಳೆಯ ಪರಿಣಾಮವಾಗಿ ನದಿಗೆ 86 TMC ನೀರಿಗಿಂತಲೂ ಅಧಿಕ ನೀರು ಹರಿದುಬಂದಿದೆ. ಅದರಲ್ಲಿ 71 TMC ನಿರಿನಲ್ಲಿ ಸ್ವಲ್ಪ ಪ್ರಮಾಣದ ನೀರನ್ನು ನೀರಾವರಿಗೆ ಒದಗಿಸಿದ ನಂತರ ಸೆಪ್ಟೆಂಬರ್ ವೇಳೆಗೆ ಒಂದಷ್ಟು ನೀರು ಶೇಖರವಾಗಿತ್ತು. ಅದರಲ್ಲಿ ಉಪಯೋಗಕ್ಕೆ ಸಿಗುವ ನೀರಿನ ಪ್ರಮಾಣ 60.26 TMC ನೀರು ಮಾತ್ರ ಶೇಖರವಾಗಿತ್ತು. ಇಂತಹ ಸನ್ನಿವೇಶದಲ್ಲಿ ನ್ಯಾಯ ಮಂಡಳಿಯ ಆಜ್ಞೆಯಂತೆ ನ್ಯಾಯಬದ್ಧವಾಗಿ ತಮಿಳುನಾಡಿಗೆ ಬಿಡಬೇಕಾದ 107 TMC ನೀರನ್ನು ನೀಡಲಾಗದಿದ್ದರೂ ಮಳೆ ಅಭಾವದ ಪ್ರಮಾಣಕ್ಕೆ ಅನುಗುಣವಾಗಿ, ನೀರಿನ ಬಿಡುಗಡೆಯಲ್ಲಿ ಖೋತಾ ಮಾಡಿದರೂ ಸಹ 26 TMC ಮಾತ್ರ ನೀರು ಬಿಟ್ಟಿ ರುವುದು ನ್ಯಾಯ ಸಮ್ಮತವಲ್ಲ.



ತಮಿಳುನಾಡು ರಾಜ್ಯ ಸರ್ಕಾರ ತಮ್ಮ ಜನತೆಗೆ ನ್ಯಾಯ ಒದಗಿಸಬೇಕೆಂದು ಸುಪ್ರೀಂ ಕೋರ್ಟಿಗೆ ಅರ್ಜಿ ಸಲ್ಲಿಸಿದಾಗ ಸುಪ್ರಿಂ ಕೋರ್ಟ್ ಕಾವೇರಿ ನದಿ ಪ್ರಾಧಿಕಾರದ ಸಭೆ ಸೇರಿ ಈ ವರ್ಷ ತಮಿಳುನಾಡಿಗೆ ಕರ್ನಾಟಕ ಬಿಡಬೇಕಾದ ನೀರನ್ನು ಅಭಾವದ ಪ್ರಮಾಣಕ್ಕೆ ಅನುಗುಣವಾಗಿ ಲೆಕ್ಕಿಸಿ, ನೀರನ್ನು ಬಿಡುಗಡೆ ಮಾಡಬೇಕೆಂದು ಸೆಪ್ಟೆಂಬರ್ 2ರಂದು ಈ ಬಗ್ಗೆ ಸುಪ್ರಿಂ ಕೋರ್ಟ್ ಮತ್ತೆ ಸೇರಿ ನೀರಿನ ಬಿಡುಗಡೆಯ ಬಗೆಗಿನ ನಿರ್ಧಾರವನ್ನು ಪರಿಶೀಲಿಸುತ್ತದೆಂದು ನಿರ್ದೇಶನ ನೀಡಿತ್ತು.


ಈ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರ 25 / 08 ರಂದು ಕರೆದ

ಪುಟ 4 ಕ್ಕೆ

ಪ್ರಧಾನ ಮಂತ್ರಿಗಳ ಹೇಳಿಕೆ ಟಿಪ್ಪಣಿ / ಆದೇಶ

ಕಾವೇರಿ ನದಿ ಪ್ರಾಧಿಕಾರದ ಸಭೆಯಲ್ಲಿ ಅಧ್ಯಕ್ಷರಾಗಿರುವ ಪ್ರಧಾನಮಂತ್ರಿ ವಾಜಪೇಯಿಯವರು ಹೊರಡಿಸಿದ ಆದೇಶದ ವಿವರ ಈ ಕೆಳಗಿನಂತಿವೆ.

ಕಾವೇರಿ ಕೊಳ್ಳದ ರಾಜ್ಯಗಳಾದ ಕರ್ನಾಟಕ, ತಮಿಳುನಾಡು, ಪಾಂಡಿಚೇರಿ ಮತ್ತು ಕೇರಳ ರಾಜ್ಯಗಳು ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಇಡೀ ಕೊಳ್ಳದಲ್ಲಿ ಪರಿಸ್ಥಿತಿ ಗಂಭೀರವಾಗಿದೆ. 2002'ರ ಮುಂಬರುವ 2 ತಿಂಗಳುಗಳಿಂದ ಸೆಪ್ಟೆಂಬರ್ ಮತ್ತು ಅಕ್ಟೋಬರ್‌ಗಳಲ್ಲಿ ತನ್ನ ಕನಿಷ್ಟ ಅವಶ್ಯಕತೆಯನ್ನು ಪ್ರತಿದಿನ 1.25 ಟಿ.ಎಮ್.ಸಿ ಎಂದು ತಿಳಿಸಿದೆ, ಆದರೆ ಕರ್ನಾಟಕ ಮೆಟ್ಟೂರು



ಜಲಾಶಯಕ್ಕೆ 8000 ಕ್ಯುಸೆಕ್ಸ್‌ಗಿಂತ ಹೆಚ್ಚು ನೀರು ಬಿಡಲು ಸಾಧ್ಯ ಎಲ್ಲವೆಂದು ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸಿದೆ. ಕರ್ನಾಟಕದ 4 ಜಲಾಶಯಗಳು ಮತ್ತು ಮೆಟ್ಟೂರಿನ ಜಲಾಶಯದಲ್ಲಿರುವ ನೀರಿನ ಸಂಗ್ರಹ, ಒಳಹರಿವು ಹೊರಹರಿವು ಮತ್ತು ಎರಡು ರಾಜ್ಯಗಳ ಅವಶ್ಯಕತೆಗಳನ್ನು ಗಮನದಲ್ಲಿರಿಸಿ (ಒತ್ತು ನಮ್ಮದು) ಸೆಪ್ಟೆಂಬರ್-, 2002 ನವದೆಹಲಿ ಕರ್ನಾಟಕವು ತನ್ನ ಜಲಾಶಯಗಳಿಂದ ಪ್ರತಿದಿನ 9000 ಕ್ಯೂಸೆಕ್ಸ್‌ನಂತೆ ದಿನಕ್ಕೆ 0.8 ಟಿ.ಎಮ್.ಸಿ ನೀರನ್ನು ಮೆಟ್ಟೂರು ಜಲಾಶಯಕ್ಕೆ ವಾರದ ಸರಾಸರಿಯಂತೆ 2002'ರ ಸೆಪ್ಟೆಂಬರ್ - ಅಕ್ಟೋಬರ್ ತಿಂಗಳಲ್ಲಿ ಬಿಡುಗಡೆ ಮಾಡಬೇಕು. ಪರಿಣಾಮವಾಗಿ ತಮಿಳುನಾಡು ಪಾಂಡಿಚೇರಿಗೆ ಸರಿಸಮಾನ ನೀರನ್ನು ಬಿಡುಗಡೆ ಮಾಡಬೇಕು. ಈ ವ್ಯವಸ್ಥೆಯು ಪ್ರಸಕ್ತ ಸಂಕಷ್ಟದಲ್ಲಿ ಪರಿಸ್ಥಿತಿಯಲ್ಲಿ ಕೊಳ್ಳದ ಎಲ್ಲಾ ರಾಜ್ಯಗಳ ಅವಶ್ಯಕತೆಯನ್ನು ಪೂರೈಸುತ್ತದೆ ಹಾಗೂ ಎಲ್ಲರಿಗೂ ನ್ಯಾಯಸಮ್ಮತವಾಗಿದೆ ಎಂದು ಭಾವಿಸುತ್ತೇನೆ.

ಇಂದಿನ ಉದ್ವಿಗ್ನ ಸ್ಥಿತಿಗೆ ಕಾಂಗ್ರೆಸ್ ಕಾರಣ

ಕಾವೇರಿ ನದಿ ಪ್ರಾಧಿಕಾರದ ಆಜ್ಞೆಯಿಂದಾಗಿ ದಿನವು 1.25 ಟಿ.ಎಂ.ಸಿ ನೀರು ಬಿಡಬೇಕೆಂದು ಸುಪ್ರಿಂ ಕೋರ್ಟ್‌ನ ನಿರ್ದೇಶನದಿಂದ ಬಿಡಿಸಿಕೊಳ್ಳಲು ಸಾಧ್ಯವಿದೆ. ಆ ಮೂಲಕ ಬಿಡುವ ನೀರಿನ ಪ್ರಮಾಣ ಕಡಿಮೆಯಾಗಿ ರಾಜ್ಯದ ರೈತರ ಹಿತ ಕಾಪಾಡಿದಂತಾಗಿದೆ.

28-8-2002ರಂದಿನ ಪ್ರಾಧಿಕಾರದ ಸಭೆಯಲ್ಲಿ ಕರ್ನಾಟಕ ಸರ್ಕಾರ ನೀರು ಬಿಡಲಾಗುವುದೇ ಇಲ್ಲ ಎಂಬ ಬಿಗು ನಿಲುವು ತೆಗೆದುಕೊಳ್ಳದಿದ್ದರೆ ಅಥವಾ ಪ್ರಾಧಿಕಾರದ ಅಧ್ಯಕ್ಷರಾದ ಪ್ರಧಾನಿ ವಾಜಪೇಯಿಯವರು ಕ್ರಿಯಾಶೀಲ ಪಾತ್ರ ವಹಿಸಿದ್ದರೆ, ಸುಪ್ರಿಂ ಕೋರ್ಟ್ ಆಜ್ಞೆಯು ಗದಾ ಪ್ರಹಾರಕ್ಕೆ ಒಳಗಾಗುವ ಪರಿಸ್ಥಿತಿ ಉದ್ಭವಿಸುತ್ತಿರಲಿಲ್ಲ. ಹೀಗಾಗಿ 8-9-2002ರ ಪ್ರಾಧಿಕಾರದ ಸಭೆ ಬಹಳ ಪ್ರಮುಖವಾಯಿತು. ಆದರೆ ಈಗಲೂ ಸಹ ಪ್ರಾಧಿಕಾರದ ಆಜ್ಞೆಯಂತೆ ತಮಿಳುನಾಡಿಗೆ ನೀರು ಬಿಡುವುದಿಲ್ಲ ಎಂಬ ಬಿಗಿ ನಿಲುವು ತಳೆದರೆ ದೀರ್ಘಕಾಲಿಕವಾಗಿ ಕರ್ನಾಟಕಕ್ಕೆ ನೀರಿನ ಹಂಚಿಕೆಯಲ್ಲಿ ಹಾನಿಯಾಗಬಹುದು. ಯಾಕೆಂದರೆ ಕಾವೇರಿ ನದಿ ನೀರಿನ ಹಂಚಿಕೆಯಲ್ಲಿ ಹಾನಿಯಾಗಬಹುದು. ಯಾಕೆಂದರೆ ಕಾವೇರಿ ನದಿ ನೀರಿನ ಹಂಚಿಕೆಯ ವಿವಾದ ಇನ್ನು ಇತ್ಯರ್ಥವಾಗದೆ 'ನ್ಯಾಯ ಮಂಡಳಿ' ಮುಂದಿದೆ. ಈ ಬಗ್ಗೆ ಎಚ್ಚರ ಅಗತ್ಯವಿದೆ.

ಸದ್ಯಕ್ಕೆ ನೀರಿನ ಒಳಹರಿವು ಹೆಚ್ಚುತ್ತಿದೆಯೆಂದು ಕರ್ನಾಟಕ ಸರ್ಕಾರ ಪ್ರತಿಪಾದಿಸುತ್ತಿದೆ. ಆದ್ದರಿಂದ ಒಂದು ವೇಳೆ ನೀರಿನ ಒಳಹರಿವು ಕಡಿಮೆಯಾಗಿ ಕರ್ನಾಟಕದ ರೈತರ ಹಿತಕ್ಕೆ ಧಕ್ಕೆ ತಗಲುವ ಹಂತ ಎದುರಾದರೆ, ನೀರು ಬಿಡಲಾಗದ ನಮ್ಮ ಪರಿಸ್ಥಿತಿಯನ್ನು ಮತ್ತೆ ಕಾವೇರಿ ನದಿ ಪ್ರಾಧಿಕಾರಕ್ಕೆ ಮನವಿ ಮಾಡುವ ಮೂಲಕ ಕರ್ನಾಟಕದ ಹಿತವನ್ನು ರಕ್ಷಿಸಿಕೊಳ್ಳಬೇಕೆಂದು ಸಿಪಿಐ(ಎಂ) ಅಭಿಪ್ರಾಯಪಟ್ಟಿದೆ. ಅಲ್ಲಿಯವರೆಗೂ ಪ್ರಾಧಿಕಾರದ ಆಜ್ಞೆಯನ್ನು ಪಾಲಿಸಲು ಇರುವ ವಾಸ್ತವ ಸ್ಥಿತಿಯನ್ನು ಪರಿಶೀಲಿಸುತ್ತಾ ಜಾರಿಗೊಳಿಸಬೇಕು.

ಈ ಹಿನ್ನಲೆಯಲ್ಲಿ ಕರ್ನಾಟಕದ ರೈತರ ದೀರ್ಘಕಾಲಿನ ಹಿತ ಕಾಪಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಜನತೆ ಶಾಂತಿ- ಸೌಹಾರ್ದತೆ ಕಾಪಾಡಿಕೊಂಡು ಬರಬೇಕಿದೆ

ದ್ವಿಮುಖ ನೀತಿಯ ಕಾಂಗ್ರೆಸ್:

ಕಾವೇರಿ ಹರಿವಿನ ಪ್ರದೇಶಗಳ ಜಿಲ್ಲೆಗಳಲ್ಲಿ ರೈತರ ಭಾವನೆಯ ಉದಿಗ್ನತೆಗೊಳ್ಳಲು ಆಡಳಿತ ಕಾಂಗ್ರೆಸ್ ಪಕ್ಷ ತೆಗೆದುಕೊಂಡ ನಿಲುವು ಮತ್ತು ಕಾಂಗ್ರೆಸ್ ಪಕ್ಷದ ನಾಯಕರ ಚಟುವಟಿಕೆಗಳು ಕಾರಣವಾಗಿವೆ. ಒಂದೆಡೆ ಕಾಂಗ್ರೆಸ್ ಸರ್ಕಾರ ಪ್ರಾಧಿಕಾರದ ಆಜ್ಞೆ ಜಾರಿಗೊಳಿಸಲಾಗುವದೆಂದು ಪ್ರತಿಪಾಲಿಸುತ್ತಾ, ಇನ್ನೊಂದೆಡೆ ಕಾಂಗ್ರೆಸ್ ನಾಯಕರು ಅದರ ವಿರುದ್ಧ ಚಳುವಳಿಗೆ ಇಳಿದಿದ್ದು ಇಂದಿನ ಉದಿಗ್ನತೆಗೆ ಕಾರಣ. ಈ ದ್ವಿಮುಖ ನೀತಿಯು ಖಂಡನೀಯ.

ಬಂದ್- ಶಾಂತಿ- ಸೌಹಾರ್ದತೆಗೆ ಮನವಿ

12ರಂದು ಕರೆ ನೀಡಿರುವ ಬೆಂಗಳೂರು ಬಂದ್‌ನಲ್ಲಿ ಸಿಪಿಐ(ಎಂ) ಭಾಗವಹಿಸಿಲ್ಲ. ಈ ಎಲ್ಲಾ ಸಂದರ್ಭಗಳಲ್ಲಿ ಶಾಂತಿ, ಸೌಹಾರ್ದತೆ ಕಾಪಾಡಿಕೊಳ್ಳಬೇಕೆಂದು ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದ ನೀಡಬಾರದು

11.9.2002ರಂದು ಮುಖ್ಯಮಂತ್ರಿಗಳು ಕರೆದಿದ್ದ ಸರ್ವಪಕ್ಷಗಳ ಸಭೆಯಲ್ಲಿ ಮೇಲಿನ ನಿಲುವನ್ನು ಪ್ರತಿಪಾದಿಸಲಾಯಿತು. ಈ ಸಭೆಯಲ್ಲಿ ಪಕ್ಷದ ರಾಜ್ಯಕಾರ್ಯದರ್ಶಿ ಜಿ.ಎನ್.ನಾಗರಾಜ್ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಸಿ.ಬಯ್ಯಾರೆಡ್ಡಿ, ಎಸ್.ವೈ.ಗುರುಶಾಂತ್ ಪಾಲ್ಗೊಂಡಿದ್ದರು.

ಕೇರಳ : ವಿದ್ಯುತ್ ದರ ವಿಪರೀತ ಏರಿಕೆ

ಓಣಂ ಹಬ್ಬದ ಉಡುಗೊರೆ

ಕೇರಳದ ಅಂತೋನಿಯವರ ನೇತೃತ್ವದ ಕಾಂಗ್ರೆಸ್ ಸರ್ಕಾರ ವಿದ್ಯುತ್ ದರಗಳನ್ನು ಮತ್ತೊಮ್ಮೆ ವಿಪರೀತವಾಗಿ ಹೆಚ್ಚಿಸಿದೆ. ವಿಶ್ವಬ್ಯಾಂಕ್‌ನ ನಿರ್ದೇಶನಗಳ ಜಾರಿಯಲ್ಲಿ ಬಿಜೆಪಿಗಿಂತ ತಾನೇನು ಕಮ್ಮಿಯಿಲ್ಲ ಎಂದು ಇತರೆ ಕಾಂಗ್ರೆಸ್ ಸರ್ಕಾರಗಳಂತೆ ತೋರಿಸಿದೆ...

ಕೇರಳದ ಯುಡಿಎಫ್ ಸರ್ಕಾರವು ಮತ್ತೊಮ್ಮೆ ಶೇ 100 ರಷ್ಟು ವಿದ್ಯುತ್ ದರ ಏರಿಸಿದೆ. ಅಧಿಕಾರಕ್ಕೆ ಬಂದ ಕಳೆದ 15 ತಿಂಗಳಿಂದೀಚೆಗೆ ಎರಡನೇ ಬಾರಿ ವಿದ್ಯುತ್ ದರ ಏರಿಸುವ ಮೂಲಕ ಜನರಿಗೆ ಭಾರಿ 'ಶಾಕ್' ನೀಡಿದ್ದಾರೆ. ದರ ಏರಿಕೆಯ ಜೊತೆಗೆ ಜನರ ಗಮನಕ್ಕೂ ತಾರದೆ ಮೀಟರ್ ಮೇಲೆ ಹೊಸ ದರವನ್ನು ನಿಗದಿಗೊಳಿಸಿದ್ದಾರೆ. ವಾಸ್ತವವಾಗಿ ಇದು ಮೂರನೇ ಬಾರಿ ವಿದ್ಯುತ್ ದರ ಏರಿಕೆಯಾಗುತ್ತಿರುವುದು. ಹೊಸದಾಗಿ ನಿಗದಿಗೊಳಿಸುವ ದರವು, ಗೃಹೋಪಯೋಗಿಗಳನ್ನು ಒಳಗೊಂಡಂತೆ, ಕೈಗಾರಿಕೆ, ವ್ಯಾಪಾರಸ್ಥರಿಗೂ ಬರಿಸಲಾರದ ಹೊರೆಯಾಗಿದೆ. ಈ ರೀತಿಯ ಬೆಲೆ ಏರಿಕೆ ಪ್ರಾಯಃಶ ಕೇರಳದ ಇತಿಹಾಸದಲ್ಲಿ ಹಿಂದೆಂದೂ ಕಂಡಿರಲಿಕ್ಕಿಲ್ಲ.



ಪ್ರತಿಭಟನಾಕಾರರ ಮೇಲೆ ಪೋಲೀಸರ ಧಾಳಿ

ಈಗಿನ ವಿದ್ಯುತ್ ದರದಿಂದ 71 ಕೋಟಿ ರೂ. ಆದಾಯ ನಿರೀಕ್ಷೆ ಕೇರಳದ ವಿದ್ಯುತ್ ಬೋರ್ಡ್‌ನದು. ಆದರೆ ಜನರ ಮೇಲೆ ಸುಮಾರು 150 ಕೋಟಿಗೂ ಅಧಿಕ ಹೊರೆ ಬೀಳುವುದು ಖಂಡಿತ. 500 ಯೂನಿಟ್‌ಗಳಿಗಿಂತ ಹೆಚ್ಚಾಗಿ ವಿದ್ಯುತ್ ಬಳಸುತ್ತಿರುವವರು ಒಂದು ಯೂನಿಟ್‌ಗೆ 4.45 ರೂ ತೆರಬೇಕಾಗಿದೆ. ಮೊದಲಿನಂತೆ 15 ಯೂನಿಟ್‌ಗಿಂತ ಕಡಿಮೆ ಬಳಸುವವರು ರಿಯಾಯಿತಿ ಪಡೆಯಲಿದ್ದಾರೆ. ಈಗಿನ ಹೊಸದರ ಮತ್ತು ಥರ್ಮಲ್ ಸರ್‌ಜಾರ್ಚ್‌ನಿಂದ ಗೃಹ ಬಳಕೆದಾರರಿಗೆ ಬಹುಪಾಲು ಹೊರೆಬೀಳುವುದು ಖಂಡಿತ. ಇನ್ನು ಮುಂದೆ ಗೃಹೋ ಪಯೋಗಿಗಳು ಪ್ರತಿವರ್ಷ 51 ಕೋಟಿ ರೂ. ಬರಿಸ ಬೇಕಾಗಿದೆ. ಗೃಹೋ ಪಯೋಗಿಗಳಿಗೆ ಒಮ್ಮೆಯೇ ಎರಡು ಶಾಕ್. ಒಂದು ವಿದ್ಯುತ್ ದರ ಏರಿಕೆ ಮತ್ತು ಥರ್ಮಲ್ ಸರ್‌ಚಾರ್ಜ್. ಹೇಗಿದೆ ಆಂಟೋನಿ ಮೋಡಿ, ಆಂಟೋನಿ ನೇತೃತ್ವದ ಸರ್ಕಾರ? ಈ ಮೊದಲು ಯಾವ ಸರ್ಕಾರವೂ ಥರ್ಮಲ್ ವಿದ್ಯುತ್ ಮೇಲೆ ಸರ್‌ಚಾರ್ಜ್ ವಿಧಿಸಿಲ್ಲ. ಈ ಎರಡು ರೀತಿಯ ದರ ಏರಿಕೆಯಿಂದ ಖಂಡಿತವಾಗಿಯೂ ಕೈಗಾರಿಕೆಗಳು ನಿಷ್ಕ್ರಿಯವಾಗಲಿದೆ.

ಆಂಟೋನಿ ಮತ್ತು ಸಹೋದ್ಯೋಗಿಗಳು ನಯವಾಗಿ ಜನವಿರೋಧಿ ನೀತಿಗಳನ್ನು ಒಂದೊಂದಾಗಿ ಜಾರಿಗೆತರುತ್ತಿದ್ದಾರೆ. ಅವರು ಹೇಳುವಂತೆ ಈ ಬಾರಿ ಕಡಿಮೆ ಮಳೆಯಾಗಿರುವುದರಿಂದ ಹೆಚ್ಚಾಗಿ ಥರ್ಮಲ್ ವಿದ್ಯುತ್ ಮೇಲೆ ಅವಲಂಬಿಸಬೇಕಾಗಿದೆ. ಆದ್ದರಿಂದ ಥರ್ಮಲ್ ವಿದ್ಯುತ್ ಮೇಲೆ ಸರ್ ಚಾರ್ಜ್ ವಿಧಿಸಬೇಕಾಗಿದೆ. ಸರ್ಕಾರ ಹೇಳುವಂತೆ ವಿದ್ಯುತ್ ಮಂಡಳಿಯ ಆದಾಯದಲ್ಲಿ ಗೃಹೋಪಯೋಗಿಗಳ ಆದಾಯ ಕೇವಲ ಶೇ. 21 ರಷ್ಟು ಮಾತ್ರ. ಆದ್ದರಿಂದ ಬೆಲೆ ಏರಿಸಬೇಕಾಗಿದೆ ಎಂದು ಅವರ ದರ ಏರಿಕೆಗೆ ಇದೊಂದೆ ಸಮರ್ಥನೆ. ಮುಖ್ಯಮಂತ್ರಿಗಳು ಹೇಳುವಂತೆ ಕೆ.ಎಸ್.ಇ.ಬಿ. ಮಾಸಿಕ 182 ಕೋಟಿ ನಷ್ಟ ಅನುಭವಿಸುತ್ತಿದೆ. ಈಗಿನ ದರ ಏರಿಕೆಯಿಂದ ಈ ನಷ್ಟವನ್ನು ಅರ್ಧವಾದರೂ ತಪ್ಪಿಸಬಹುದಾಗಿದೆ. ಇನ್ನುಳಿದ ಅರ್ಧನಷ್ಟವನ್ನು ತುಂಬಿಸಲು ಮತ್ತೊಂದು ಬೆಲೆ ಏರಿಸುವಿಕೆಯೇ ಎನ್ನುವ ಪ್ರಶ್ನೆಗೆ ತಿರಸ್ಕಾರದ ನಗುವಷ್ಟೇ ಅವರ ಉತ್ತರ. ಸಿ.ಪಿ.ಎಂ. ಪಕ್ಷದ ರಾಜ್ಯ ಕಾರ್ಯದರ್ಶಿ ಮತ್ತು ಪಾಲಿಟ್ ಬ್ಯೂರೋ ಸದಸ್ಯ ಪಿಣರಾಯಿ ವಿಜಯನ್, ವಿದ್ಯುತ್ ದರವನ್ನು ವಾಪಸ್ ಪಡೆಯದೆ ಹೋದರೆ ರಾಜ್ಯಾದ್ಯಂತ ಉಗ್ರ ಚಳವಳಿ ನಡೆಸುವುದಾಗಿ ಸರ್ಕಾರಕ್ಕೆ ಎಚ್ಚರಿಸಿದ್ದಾರೆ. ಯು.ಡಿ.ಎಫ್ ಸರ್ಕಾರವು ಜನ ವಿರೋಧಿ ನೀತಿಗಳನ್ನು ಅವ್ಯಾಹತವಾಗಿ ಜಾರಿಗೊಳಿಸುತ್ತಲೇ ಇದೆ. ಇದರ ವಿರುದ್ಧ ಸಿಪಿಎಂ ಪಕ್ಷವು ರಾಜ್ಯಾದ್ಯಂತ ಉಗ್ರಚಳುವಳಿ ನಡೆಸುತ್ತಿದೆ. ವಿರೋಧಿ ಪಕ್ಷದ ನಾಯಕ ವಿ.ಎಸ್. ಅಚ್ಯುತಾನಂದನ್ ಹಾಗೂ ಪಾರಾಯಿ ಮಹಮದ್‌ರವರು ದರ ಏರಿಕೆಯನ್ನು ಖಂಡಿಸಿದ್ದಾರೆ. ಕೇರಳ ಸರ್ಕಾರವು ಜನವಿರೋಧಿ ನೀತಿಯ ಹಾದಿಯಲ್ಲಿದೆ. ಆದ್ದರಿಂದ ಸೆಪ್ಟೆಂಬರ್ 2 ರಿಂದ 12 ರವರೆಗೆ ರಾಜ್ಯಾದ್ಯಂತ ಜನ ವಿರೋಧಿ ನೀತಿಗಳ ವಿರುದ್ಧ ಜನರನ್ನು ಹೋರಾಟಕ್ಕಿಳಿಸಲಾಗುವುದು. ಪಕ್ಷದ 3 ಲಕ್ಷ ಕಾರ್ಯಕರ್ತರು ಸ್ವಯಂ ಇಚ್ಛೆಯಿಂದ ಬಂಧನಕ್ಕೆ ಒಳಗಾಗಲಿದ್ದಾರೆ. ಎಂದು ಅಚ್ಯುತಾನಂದನ್ ಹೇಳಿದ್ದಾರೆ. ಮುಂಬರುವ ದಿನಗಳಲ್ಲಿ ಕೇರಳದಾದ್ಯಂತ ಜನವಿರೋಧಿ ನೀತಿಗಳ ವಿರುದ್ಧ ಉಗ್ರಸ್ವರೂಪದ ಹೋರಾಟಗಳು ನಡೆಯುವುದು ಖಂಡಿತ.

ಸರ್ವರಿಗೂ ಸಮಪಾಲು - ಸಮಬಾಳು....

ಪುಟ 3 ರಿಂದ

ಸರ್ವಪಕ್ಷಗಳ ಸಭೆಯಲ್ಲಿ CPM ಪಕ್ಷವು ಅಭಾವ ಸ್ಥಿತಿಯ ಪ್ರಮಾಣದಿಂದಾಗಿ ಖೋತಾ ಮಾಡಬೇಕಾದ ನೀರನ್ನು ಲೆಕ್ಕಿಸಿ, ಬಿಡುಗಡೆ ಮಾಡಬೇಕಾದ ನೀರನ್ನು, ತಮಿಳುನಾಡಿಗೆ ಬಿಡುಗಡೆ ಮಾಡಬೇಕೆಂದು ವಿನಂತಿಸಿತು. ಹಾಗೆಯೇ ಜನತಾದಳ(U) JDS, ಮೊದಲಾದ ವಿರೋಧ ಪಕ್ಷಗಳು ಅಭಿಪ್ರಾಯ ನೀಡಿದಂತೆ ಕರ್ನಾಟಕದಲ್ಲಿ ನೀರಿಲ್ಲ, ನೀರು ಬಿಡಲು ಸಾಧ್ಯವೇ ಇಲ್ಲ ಎಂಬ ಬಿಗಿನಿಲುವನ್ನು ತಳೆಯಬಾರದೆಂದು ಸೂಚಿಸಿತು. ಸುಪ್ರಿಂ ಕೋರ್ಟಿನ ಮುಂದೆ ಸೆಪ್ಟೆಂಬರ್ ಮತ್ತೆ ನೀರಿನ ಬಿಡುಗಡೆಯ ಬಗೆಗಿನ ಅರ್ಜಿ ಬಂದಾಗ ಸುಪ್ರಿಂ ಕೋರ್ಟ್ ಮಾಡಬಹುದಾದ ಗದಾ ಪ್ರಹಾರ ಕರ್ನಾಟಕದ ಜನತೆಗೆ ಮತ್ತಷ್ಟು ಹೆಚ್ಚು ಹಾನಿಯಾಗಬಹುದೆಂದು ಸಿಪಿಎಂ ಪಕ್ಷವು ಎಚ್ಚರಿಸಿತು.

ವಿಷಾದನೀಯ ಸಂಗತಿ ಏನೆಂದರೆ 28ರಂದು ಸೇರಿದ ಕಾವೇರಿ ಪ್ರಾಧಿಕಾರದ ಸಭೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಬಿಗಿ ನಿಲುವನ್ನು ತಳೆದುದರಿಂದ ಸುಪ್ರಿಂ ಕೋರ್ಟ್ ಅಂತಿಮವಾಗಿ ತಾನೇ ನಿರ್ದೇಶನ ನೀಡಬೇಕೆಂದು ಭಾವಿಸಿತು ಹಾಗೂ ದಿನ ಒಂದಕ್ಕೆ 1.25 TMC ನೀರನ್ನು ತಮಿಳುನಾಡಿಗೆ ಬಿಡಬೇಕೆಂದು ಸೂಚಿಸಿತು. ಕಾವೇರಿ ಪ್ರಾಧಿಕಾರವು ಸಭೆ ಸೇರಿ ಎಂದು ಈ ವರ್ಷದ ನದಿ ನೀರಿನ ಹಂಚಿಕೆಯ ಪ್ರಮಾಣವನ್ನು ಲೆಕ್ಕಿಸಿ ತೀರ್ಮಾನ ತೆಗೆದುಕೊಳ್ಳುವುದೂ ಅಂದೇ ಸುಪ್ರಿಂ ಕೋರ್ಟಿನ ಈ ಆಜ್ಞೆ ತನ್ನಿಂದ ತಾನೇ ನಿಷ್ಕ್ರಿಯವಾಗುತ್ತದೆಂದು ಆಜ್ಞೆ ನೀಡಿದೆ.

ನಮ್ಮ ಪಕ್ಷದ ಹಿತವಚನವನ್ನು ಲೆಕ್ಕಿಸದೇ ಕರ್ನಾಟಕ ರಾಜ್ಯ ಸರ್ಕಾರ ತನಗೆ ಹಾಗೂ ಕರ್ನಾಟಕ ಜನತೆಗೆ ಸಂಕಷ್ಟವನ್ನು ತಂದೊಡ್ಡಿದೆ. ಅದೇ ಸಮಯದಲ್ಲಿ ದೆಹಲಿಯಲ್ಲಿರುವ ಬಿಜೆಪಿ ಸರ್ಕಾರ AIADMIK ಪಕ್ಷದ ಬೆಂಬಲಕ್ಕಾಗಿ ರಾಜಕೀಯ ಚದುರಂಗವನ್ನಾಡುತ್ತಿದೆ. ಇದು ಕರ್ನಾಟಕ ರಾಜ್ಯದ ಜನತೆಯಲ್ಲಿ ಸುಪ್ರಿಂ ಕೋರ್ಟಿನ ತೀರ್ಪಿನ ವಿರುದ್ಧ ಭುಗಿಲೇಳುವಂತೆ ಮಾಡಿದೆ. 06 / 09 ರಂದು ಸೇರಿದ ಪಕ್ಷದ ರಾಜ್ಯಕಾರ್ಯದರ್ಶಿ ಮಂಡಳಿಯು ಪ್ರಧಾನ ಮಂತ್ರಿಗಳು ತಕ್ಷಣವೇ ಕಾವೇರಿ ಪ್ರಾಧಿಕಾರದ ಸಭೆ ಕರೆದು ನೀರಿನ ಹಂಚಿಕೆಯ ಸಮಸ್ಯೆಯನ್ನು ಬಗೆಹರಿಸಬೇಕೆಂದು, ಎರಡೂ ರಾಜ್ಯದ ಜನತೆಗೆ ಹಾಗೂ ರೈತ ಸಮುದಾಯಕ್ಕೆ ಅನ್ಯಾಯವಾಗದಂತೆ ಎಚ್ಚರವಹಿಸಬೇಕೆಂದು ಒತ್ತಾಯಿಸಿತ್ತು. ಪ್ರಾಧಿಕಾರವು ಆಜ್ಞೆ ಹೊರಡಿಸಿ 0.778 ಟಿಎಂಸಿ / 9000 ಕ್ಯೂಸೆಕ್ಸ್ ನೀರು ಬಿಡಲು ನಿರ್ದೇಶಿಸಿದೆ.



ಸೆಪ್ಟೆಂಬರ್ 27 ವಿದ್ಯಾರ್ಥಿಗಳ 'ವಿಧಾನಸೌಧ ಚಲೋ'

ಸರ್ಕಾರವು ಪದವಿ ಕಾಲೇಜ್ ಪದವಿಪೂರ್ವ ಹಾಗೂ ಸಂಜೆ ಕಾಲೇಜುಗಳ ಮುಚ್ಚುವಿಕೆ ಆದೇಶ ವಿರೋಧಿಸಿ, ಇಡೀ ರಾಜ್ಯ ಬರಗಾಲಕ್ಕೆ ಸಿಲುಕಿರುವುದರಿಂದ ವಿದ್ಯಾರ್ಥಿಗಳಿಗೆ ಶಿಕ್ಷಣ ಶುಲ್ಕ ವಿನಾಯತಿಗೆ ಆಗ್ರಹಿಸಿ, ಉನ್ನತ ಶಿಕ್ಷಣಕ್ಕೆ ಶೇಕಡ 15ರಷ್ಟು ಹಣಕಾಸು ಕಡಿತ ಮಾಡಿರುವ ರಾಜ್ಯ ಸರ್ಕಾರದ ಕ್ರಮ ಹಿಮ್ಮೆಟ್ಟಿಸಲು, ಬಿಸಿಎಂ ಹಾಸ್ಟೆಲ್‌ಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸಲು, ಜಿಲ್ಲಾ ಪಂಚಾಯತ್‌ಗಳಿಂದ ಹಣ ಬಿಡುಗಡೆಗೆ ಆಗ್ರಹಿಸಿ ಹಾಗೂ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಆಗ್ರಹಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (SFI) ನೇತೃತ್ವದಲ್ಲಿ ಸೆಪ್ಟೆಂಬರ್ 27ರಂದು ರಾಜ್ಯದ ವಿವಿಧ ಜಿಲ್ಲೆಗಳ ವಿದ್ಯಾರ್ಥಿಗಳು ಸೆಪ್ಟೆಂಬರ್ 27ರಂದು 'ವಿಧಾನಸೌಧ ಚಲೋ' ನಡೆಸಲಿದ್ದಾರೆ. ಸೆಪ್ಟೆಂಬರ್ 28 ರಂದು ಹಾಸ್ಟೆಲ್ ವಿದ್ಯಾರ್ಥಿಗಳ ಪ್ರತಿಭಟನೆ ಇದೆ.

ದೇಶಪ್ರೇಮಿ ವೆಂಕಯ್ಯನಾಯ್ಡು ಬಡವರ ಭೂಮಿ ನುಂಗಿದ್ದು....

ಪೆಟ್ರೋಲ್ ಪಂಪ್‌ನ ಭಾರೀ ಭ್ರಷ್ಟಾಚಾರದ ಹಗರಣದಲ್ಲಿ ಬಿಜೆಪಿ ಮುಳುಗೇಳುತ್ತಿರುವಾಗ, ಅದರ ರಾಷ್ಟ್ರೀಯ ಅಧ್ಯಕ್ಷ ವೆಂಕಯ್ಯನಾಯ್ಡು ಬಡವರ ಭೂಮಿ ನುಂಗಿದ ಪ್ರಕರಣ ಬಯಲಿಗೆ ಬಂದಿದೆ. ಈ 'ದೇಶಪ್ರೇಮಿ'ಯ 'ಸೇವೆ' ಎಂತಹದ್ದು ಇಲ್ಲಿದೆ ನೋಡಿ

ಬಿಜೆಪಿ ಅಧ್ಯಕ್ಷ ವೆಂಕಯ್ಯನಾಯ್ಡು ಆಂಧ್ರಪ್ರದೇಶದಲ್ಲಿ ಶಾಸಕರಾಗಿದ್ದ ಸಂದರ್ಭದಲ್ಲಿ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು 40.15 ಎಕ್ರೆ ಸರಕಾರಿ ಭೂಮಿಯನ್ನು 'ಗುಳುಂ' ಮಾಡಿದ್ದಾರೆಂಬುದು ಬೆಳಕಿಗೆ ಬಂದಿದೆ. ಸರಕಾರದ ಕಾನೂನಿನ ಪ್ರಕಾರ ಈ ಭೂಮಿಯು ಯಾವುದೇ ಆಸ್ತಿ ಇಲ್ಲದ ಬಡವರಿಗೆ, ದಲಿತರಿಗೆ, ಕೃಷಿ ಕೂಲಿಕಾರರಿಗೆ ಸೇರ ಬೇಕಾಗಿತ್ತು. ಆದರೆ ವೆಂಕಯ್ಯ ನಾಯ್ಡು ಭೂಮಿಯನ್ನು ಶಾಸಕರಾಗಿದ್ದಾಗ ತನ್ನ ಹುಟ್ಟೂರಾದ ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯಲ್ಲಿರುವ ತನ್ನ ಮತ್ತು ಕುಟುಂಬದವರ ಹೆಸರಿಗೆ ಮಾಡಿಕೊಂಡಿದ್ದಾರೆ ಎಂದು ವರದಿಯಾಗಿದೆ.

ಭಾರೀ ಹಗರಣಗಳು

'ವಿಭಿನ್ನ ರಾಜಕೀಯ ಪಕ್ಷ', 'ಶಿಸ್ತುಬದ್ಧ ಪಕ್ಷ' ಎಂದು ತನ್ನ ಎದೆಯನ್ನು ತಾನೇ ತಟ್ಟಿ ಕೊಳ್ಳುತ್ತಿರುವ ಬಿಜೆಪಿಯ ಅಧ್ಯಕ್ಷರ ಇನ್ನೊಂದು ಹಗರಣ ಬೆಳಕಿಗೆ ಬಂದಿದೆ. ಕಳೆದ ಒಂದೆರಡು ವಾರಗಳಲ್ಲಿ ತೀವ್ರ ಸುದ್ದಿಯಲ್ಲಿರುವ ಬಿಜೆಪಿ 'ಭಾರತೀಯ ಜನತಾ ಪೆಟ್ರೋಲ್ ಪಂಪ್ ಪಾರ್ಟಿ' ಎಂಬ ಕಳಂಕಕ್ಕೆ ತುತ್ತಾಯಿತು. ಅದರ ಪ್ರಮುಖ ಮಂತ್ರಿ ಪ್ರಮೋದ್ ಮಹಾಜನ್ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ವರದಿಗಾರ್ತಿ ಶಿವಾನಿ ಎಂಬ ಮಹಿಳೆಯ ಕೊಲೆಯಲ್ಲಿ ಕೈವಾಡ ಇದೆ ಎಂಬ ಆರೋಪವನ್ನು ಎದುರಿಸುತ್ತಿದ್ದಾರೆ. ಎನ್‌ಡಿಎ ಸರಕಾರದ ಮಂತ್ರಿಯಾಗಿದ್ದುಕೊಂಡು ಡಿಎನ್‌ಎ ಪರೀಕ್ಷೆಗೆ ಒಳಗಾಗಲು ತಯಾರು ಎಂದು ಹೇಳುತ್ತಿದ್ದಾರೆ. ನಗರಾಭಿವೃದ್ಧಿ ಸಚಿವ ರಾಗಿದ್ದ ಜಗಮೋಹನ್ ಮತ್ತು ಅನಂತ ಕುಮಾರ್ ಸಂಘ ಪರಿವಾರಕ್ಕೆ ಸೇರಿದ ಪ್ರಮುಖ ವ್ಯಕ್ತಿಗಳಿಗೆ, ಸಂಸ್ಥೆಗಳಿಗೆ ದೆಹಲಿಯ ಪ್ರಮುಖ ಬೀದಿಗಳಲ್ಲಿ ನಿವೇಶನ ಕೊಡಿಸಿದ್ದಾರೆ ಎಂಬ ಆರೋಪ ಇದೆ. ಈಗ ಅಧ್ಯಕ್ಷ ಮಹಾಶಯ ವೆಂಕಯ್ಯನಾಯ್ಡು ರವರು 40.15 ಎಕ್ರೆ ಜಮೀನನ್ನು ತನ್ನ ಕುಟುಂಬಕ್ಕೆ ಅಕ್ರಮವಾಗಿ ತೆಗೆದುಕೊಂಡಿರುವುದು ಬೆಳಕಿಗೆ ಬಂದಿದೆ.


ತೆಹಲ್ಕಾ ಹಗರಣದಲ್ಲಿ ಹಿಂದಿನ ಅಧ್ಯಕ್ಷ ಬಂಗಾರು ಲಕ್ಷ್ಮಣ್ ತನ್ನ ಸ್ಥಾನವನ್ನೇ ಕಳೆದು ಕೊಳ್ಳಬೇಕಾಯ್ತು. ಬಹುಶಃ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಲು ಇದು ಅರ್ಹತೆಯೇ ಇರಬೇಕು. ಈ ಹಗರಣದಲ್ಲಿ ತನ್ನ ಪಾಲು ಇದೆ ಎಂದು ಈಗಾಗಲೇ ಒಪ್ಪಿಕೊಂಡಿರುವ ವೆಂಕಯ್ಯನಾಯ್ಡು 4.95 ಎಕ್ರೆ ಜಮೀನನ್ನು ಸರಕಾರಕ್ಕೆ ವಾಪಾಸು ನೀಡಿದ್ದಾರೆ. 'ಉಳಿದ ಭೂಮಿ ತನ್ನ ಸಂಬಂಧಿಕರಲ್ಲಿ ಇರಬಹುದು' ಎಂಬುದನ್ನು ಕೂಡಾ ಹೇಳಿದ್ದಾರೆ. ಇದಕ್ಕಿಂತ ದೊಡ್ಡ ಪುರಾವೆ ಏನು ಬೇಕು?

ಕರ್ನಾಟಕದ ನಿವಾಸಿ ಎಂದು ಸುಳ್ಳು ವಿಳಾಸವನ್ನು ಕೊಟ್ಟು ಎಂ.ಪಿ.ಯಾಗಿರುವ ನಾಯ್ಡು ಹೀಗೆ ಹೇಳೋದು ಸಹಜ.

ಸುಳ್ಳುಗಾರ ನಾಯ್ಡು

ಅದೇ ಸಂದರ್ಭದಲ್ಲಿ ಹಗರಣದಿಂದ ಜಾರಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಈ ಭೂಮಿ ಯಾವಾಗ ಸಿಕ್ಕಿತೆಂದು ನೆನಪಿಲ್ಲ. ವಿದ್ಯಾರ್ಥಿಯಾಗಿದ್ದ ಸಂದರ್ಭದಲ್ಲಿ ನನ್ನ 'ಅಂಕಲ್' ನೀಡಿದರು" ಎಂದು ಹೇಳುತ್ತಾರೆ.

ಆದರೆ ಸರಕಾರಿ ದಾಖಲೆಗಳ ಪ್ರಕಾರ, ಭೂಮಿ ಇಲ್ಲದವರಿಗೆ ಭೂಮಿ ನೀಡಿದಾಗ ನೀಡುವ ಹಕ್ಕು ಪತ್ರ (ಆಂಧ್ರದಲ್ಲಿ-'ಡಿ' ಫಾರ್ಮ್ ಎಂದು ಹೇಳುತ್ತಾರೆ)ವನ್ನು ನವೆಂಬರ್ 20, 1978ರಂದು ನೀಡಲಾಗಿತ್ತು. ಫೈಲ್ ನಂ. ಎಫ್ ಡಿಐಎಸ್ 1598/88 ಆ ಸಂದರ್ದದಲ್ಲಿ ವೆಂಕಯ್ಯನಾಯ್ಡು ಆಂಧ್ರಪ್ರದೇಶದ ಎಂಎಲ್‌ಎ ಆಗಿದ್ದರು. ಅದೇ ದಿನ (ನವೆಂಬರ್ 20, 1978) ನೆಲ್ಲೂರು ಜಿಲ್ಲೆಯ 'ಕಾಸುಮುರು' ಗ್ರಾಮದಲ್ಲಿ ಒಟ್ಟು 565 'ಡಿ' ಫಾರ್ಮ್‌ನ ಪಟ್ಟೆ ನೀಡಲಾಗಿತ್ತು. ಅದರಲ್ಲಿ ನಾಯ್ಡು ಮತ್ತು ಕುಟುಂಬದವರು ಸೇರಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ 325 ಕುಟುಂಬಗಳಿಗೆ 1 ಎಕ್ರೆ ಗಿಂತಲೂ ಕಡಿಮೆ ಜಾಗ ನೀಡಿದ್ದಾರೆ. ನಾಯ್ಡು ಮತ್ತು ಕುಟುಂಬ ಹಾಗೂ ಇನ್ನಿತರರಿಗೆ ಸರಾಸರಿ 5 ಎಕ್ರೆ ಜಾಗ ನೀಡಲಾಗಿತ್ತು. ಆದರೆ ಆ ಹೊತ್ತಿಗಾಗಲೇ ವೆಂಕಯ್ಯ ನಾಯ್ಡು ಅವರ ಹೆಸರಿನಲ್ಲಿ ಅದೇ ಗ್ರಾಮದಲ್ಲಿ 3.28 ಎಕ್ರೆ ನೀರಾವರಿ ಭೂಮಿ ಇತ್ತು. ಅಲ್ಲಿನ ಸರಕಾರದ ಕಾನೂನಿನ ಪ್ರಕಾರ 5 ಎಕ್ರೆ ಒಣಭೂಮಿ ಅಥವಾ 2.5 ಎಕ್ರೆ ನೀರಾವರಿ ಭೂಮಿ ಹೊಂದಿರುವವರಿಗೆ 'ಡಿ ಫಾರ್ಮ್ ಪಟ್ಟಾ' ಹೊಂದಲು ಅವಕಾಶವಿಲ್ಲ.



ಸರ್ವೆ ನಂ	ಎಕರೆ
414/5	0-50
416/6	1-02
442/5	0-58
442/7	0-54
442/8	0-64
ಒಟ್ಟು	3-28

ವಿಭಿನ್ನ ರಾಜಕೀಯ ಪಕ್ಷ', 'ಶಿಸ್ತುಬದ್ಧ ಪಕ್ಷ' ಎಂದು ತನ್ನ ಎದೆಯನ್ನು ತಾನೇ ತಟ್ಟಿ ಕೊಳ್ಳುತ್ತಿರುವ ಬಿಜೆಪಿಯ ಅಧ್ಯಕ್ಷ ಮಹಾಶಯ ವೆಂಕಯ್ಯನಾಯ್ಡು ರವರು 40.15 ಎಕ್ರೆ ಜಮೀನನ್ನು ತನ್ನ ಕುಟುಂಬಕ್ಕೆ ಅಕ್ರಮವಾಗಿ ತೆಗೆದುಕೊಂಡಿರುವುದು ಬೆಳಕಿಗೆ ಬಂದಿದೆ.

ಅಂದರೆ ವೆಂಕಯ್ಯ ನಾಯ್ಡು ಅವರಿಗೆ ಸರಕಾರಿ ಭೂಮಿಹೊಂದಲು ಯಾವುದೇ ಅರ್ಹತೆ ಇರಲಿಲ್ಲ, ಕಾನೂನು ಬಾಹಿರವಾಗಿ ಪಡೆದು ಈಗ ಹಿಂದಿರುಗಿಸಿದ ಭೂಮಿಯ ವಿವರ

ಸರ್ವೆ	ಎಕರೆ
256/10	0-35
256/2ಬಿ	0-10
442/1	0-24
442/3	1-02
442/4	2-49
442/5	0-75
ಒಟ್ಟು	4-95

ಭೂಮಿ ಕಬಳಿಕೆಯ ಪ್ರಕರಣವನ್ನು ಆಂಧ್ರ ಪ್ರದೇಶದ ಸರ್ಕಾರ ತೀವ್ರ ತನಿಖೆಗೆ ಒಳಪಡಿಸಬೇಕು.

'ಶಿಸ್ತುಬದ್ಧ ಪಕ್ಷ'ದ ಮುಖಂಡರ ಹೂರಣ ದಿನಕ್ಕೊಂದರಂತೆ ಹೊರಬರುತ್ತಿದೆ. ಇನ್ನು ಎರಡು ವರ್ಷ ಅಧಿಕಾರದಲ್ಲಿರುವ ಈ ಮುಖಂಡರ ಇನ್ನೆಷ್ಟು ಹೂರಣಗಳು ಹೊರ ಬೀಳಲಿದೆ ಎಂದು ಊಹಿಸಲೂ ಅಸಾಧ್ಯ. ಆದ್ದರಿಂದ ಈ ಕೂಡಲೇ ಅಧಿಕಾರದಿಂದ ಇಳಿಸಬೇಕಾಗಿದೆ.

ಪೆಟ್ರೋಲ್ ಪಂಪ್ ಪಕ್ಷದ ನೈತಿಕತೆ ಬಲೂನು ಛಿದ್ರ

ಸರ್ವೋಚ್ಚ ನ್ಯಾಯಾಲಯವು ಪೆಟ್ರೋಲ್ ಪಂಪ್ ಹಗರಣದಲ್ಲಿ ವಾಜಪೇಯಿ ಮತ್ತವರ ಸರ್ಕಾರ ಸೃಷ್ಟಿಸಲು ಹೊರಟಿದ್ದ ನೈತಿಕತೆ ಬಲೂನನ್ನು ಛಿದ್ರಗೊಳಿಸಿದೆ. ನ್ಯಾಯಾಲಯವು ಈ ಮಹಾ ಹಗರಣವನ್ನು ಬಯಲು ಮಾಡುವ ಸಂದರ್ಭದಲ್ಲಿ ಪೆಟ್ರೋಲ್ ಪಂಪ್‌ಗಳು ಮತ್ತು ಅಖಿಲ ಡೀಲರ್‌ಶಿಪ್‌ಗಳನ್ನು ಹಾಗೆಯೇ ಉಳಿಸಲು ಆದೇಶಿಸಿದೆ. ಈ ರೀತಿ ಎಲ್ಲಾ ಮಂಜೂರಾತಿಗಳನ್ನು ಸಂಪೂರ್ಣವಾಗಿ ವಜಾ ಮಾಡುವುದು ಕಾನೂನಿನನ್ವಯ ಸರಿಯಾದುದಲ್ಲ ಎಂಬ ನಮ್ಮ ಅಭಿಪ್ರಾಯವನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ಇದರಿಂದ ವಿಚಲಿತಗೊಂಡು ನಡುಗಿ ಹೋದ ಸರ್ಕಾರ ತನ್ನ ತೀರ್ಮಾನಕ್ಕೆ ಒಂದು ಕಾನೂನಿನ ಬೆಂಬಲ ಒದಗಿಸಲು ಒಂದು ಆದೇಶ ಹೊರಡಿಸಿದೆ. ಆರ್‌ಎಸ್‌ಎಸ್ ಬಿಜೆಪಿಯಲ್ಲಿರುವ ಪ್ರಭಾವಿ ಶಕ್ತಿಗಳು ಪ್ರಧಾನಮಂತ್ರಿಯವರ ಕ್ರಮವನ್ನು ವಿರೋಧಿಸಿವೆ ಮತ್ತು ಪೆಟ್ರೋಲಿಯಂ ಮಂತ್ರಿಯನ್ನು ನಗ್ನವಾಗಿ ಸಮರ್ಥಿಸಿಕೊಂಡಿವೆ. ಇಂತಹ ಆಘಾತಕಾರಿ ಹಗರಣದಿಂದ ಬೆಚ್ಚಿ ಹೋದ ಜನರ ದೃಷ್ಟಿಯಲ್ಲಿ ಇವರು ಅತ್ಯಂತ ಕೆಳಮಟ್ಟದವರಾಗಿ ಕಾಣಿಸುತ್ತಿದ್ದಾರೆ. ಅದಕ್ಕೆ ಜನರು ಇವರು ಸರ್ಕಾರದಲ್ಲಿ ಉಳಿಯಲು ಇರುವುದಾದರೂ ಏನು? ಎಂದು ಕೇಳುತ್ತಿದ್ದಾರೆ. ಆರ್‌ಎಸ್‌ಎಸ್ ಬಿಜೆಪಿಗಳು ರಾಜಕೀಯ ನೈತಿಕತೆ ಎಷ್ಟು ಆಳಕ್ಕೆ ಮುಳುಗಿ ಹೋಗಲು ಸಾಧ್ಯವಿದೆಯೋ ಅದಕ್ಕೆ ಬೇಕಾದ ಎಲ್ಲಾ ಕೆಲಸಗಳನ್ನು ತಡೆಯಿಲ್ಲದಂತೆ ಮಾಡುತ್ತಿವೆ.

ಈ ವಿಷಯದಲ್ಲಿ ಮಾಡಬಹುದಾದ ಅತ್ಯುತ್ತಮ ಕೆಲಸವಾವುದು ಎನ್ನುವದರ ಬಗ್ಗೆ ನಾವು ಸಲಹೆ ನೀಡಿದ್ದೇವೆ. ಹಗರಣದ ವಿವರಗಳು ಒಮ್ಮೆ ಪೂರ್ಣವಾಗಿ ಗೊತ್ತಾದೊಡನೆ ಇದರ ಬಗ್ಗೆ ತನಿಖೆ ನಡೆಸಲು ಮತ್ತು ತಪ್ಪಿತಸ್ತರ ಮೇಲೆ ಕ್ರಮ ಜರುಗಿಸಲು ಒಂದು ತನಿಖಾ ಆಯೋಗವನ್ನು ನೇಮಿಸಿ ಅದಕ್ಕೆ ಅನುಕೂಲಕರ ಸಮಯಾವಕಾಶ ನೀಡಬೇಕು. ಈ ಅವಧಿಯಲ್ಲಿ ಪೆಟ್ರೋಲಿಯಂ ಮಂತ್ರಿಗಳನ್ನು ರಾಜಿನಾಮೆ ನೀಡಲು ಕೇಳಬೇಕು. ವಾಜಪೇಯಿ ಸರ್ಕಾರಕ್ಕೆ ಇನ್ನೂ ಏನಾದೂರ ಮರ್ಯಾದೆ ಉಳಿದಿದ್ದರೆ, ತಕ್ಷಣ ಕ್ರಮ ಕೈಗೊಳ್ಳಬೇಕು ಮತ್ತು ಪೆಟ್ರೋಲಿಯಂ ಮಂತ್ರಿಯನ್ನು ವಜಾಗೊಳಿಸಬೇಕು.

ವಾಜಪೇಯಿ ಸರ್ಕಾರ ಮತ್ತೊಂದು ಪ್ರಹಸನ ಕ್ರಮವನ್ನು ಆಳವಡಿಸಿಕೊಂಡಂತೆ ಕಾಣುತ್ತಿದೆ. ಸುಪ್ರೀಂಕೋರ್ಟ್‌ನ ತೀರ್ಮಾನದ ಆಧಾರದಲ್ಲಿ ಇದು ಅಸಹಾಯಕವಾಗಿ ಕಾಣುತ್ತಿದೆ. ನಾವೀಗಾಗಲೇ ಹೇಳಿರುವಂತೆ, ಪ್ರಧಾನ ಮಂತ್ರಿಗಳು ಪೆಟ್ರೋಲ್ ಪಂಪು ಮತ್ತು ಡೀಲರ್ ಶಿಪ್‌ಗಳನ್ನು ವಜಾಗೊಳಿಸುವುದು ಅವರ ಉದ್ದೇಶದ ಘೋಷಣೆಯಾಗಿದೆ. ಇದಕ್ಕಿಂತ ಹೊಲಸುತನ ಮತ್ತೊಂದಿಲ್ಲ. ವಾಜಪೇಯಿ ಸರ್ಕಾರಕ್ಕೆ ಭ್ರಷ್ಟಾಚಾರವನ್ನು ತಡೆಯುವ ಮತ್ತು ತಪ್ಪಿತಸ್ಥರನ್ನು ಶಿಕ್ಷಿಸುವ ನಿಜವಾದ ಉದ್ದೇಶವಿದ್ದರೆ ತತ್‌ಕ್ಷಣವೇ ವಿರೋಧಪಕ್ಷಗಳ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕು ಮತ್ತು ತನಿಖೆಗೆ ಆದೇಶಿಸಬೇಕು.

ಆದರೆ ಅವರು ಇದನ್ನು ಮಾಡಲಿಲ್ಲ. ಏಕೆಂದರೆ ಈ ಮಹಾ ಹಗರಣಗಳ ಮೂಲಕ ಲಾಭ ಪಡೆಯುತ್ತಿರುವವರನ್ನು ರಕ್ಷಿಸುವುದು ಅವರ ಉದ್ದೇಶವಾಗಿದೆ. ಕೋರ್ಟ್ ತೀರ್ಮಾನವನ್ನು ಬಳಸಿಕೊಂಡು ಹಗರಣಕೋರರನ್ನು ರಕ್ಷಿಸಲು ಮತ್ತು ಅವರಿಗೆ ರಕ್ಷಣೆ ಒದಗಿಸಲು ಸಾಧ್ಯವಿಲ್ಲ. ಇವರನ್ನು ತನಿಖೆಗೆ ಮತ್ತು ತಪ್ಪಿತಸ್ತರಿಗೆ ಶಿಕ್ಷೆ ನೀಡಲು ಒತ್ತಾಯಿಸಲೇಬೇಕಾಗಿದೆ.

ಹಗರಣಗಳ ತವರಾದ ಈ ಸರ್ಕಾರದ ವಿರುದ್ಧ ಇರುವ ಜನರ ಆಕ್ರೋಶವನ್ನು ಈ ಸರ್ಕಾರವನ್ನು ತೊಲಗಿಸಲು ಸಾಮೂಹಿಕ ಚಳುವಳಿಯಾಗಿ ಬೆಳಸಬೇಕಾಗಿದೆ. ಜನರ ಹಿತಾಸಕ್ತಿಗಳನ್ನು ರಕ್ಷಿಸಲು ಮತ್ತು ಭಾರತವನ್ನು ಉಳಿಸಲು ಉಳಿದಿರುವ ದಾರಿ ಇದೊಂದೆ.



ನೀತಿಬದ್ಧ ರಾಜಕೀಯ ಹಾಗೂ; ಜನರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟ



ಮಹಮದ್ ಯುಸೂಫ್ ತರಿಗಾಮಿ

ಪ್ರಶ್ನೆ : ಜಮ್ಮು-ಕಾಶ್ಮೀರ ರಾಜ್ಯ ವಿಧಾನಸಭೆ ಚುನಾವಣೆಗಳು ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ನಾಲ್ಕು ಘಟ್ಟಗಳಲ್ಲಿ ನಡೆಯಲಿದೆ. ನಿಮ್ಮ ಅಭಿಪ್ರಾಯದಲ್ಲಿ ಜನತೆ ಹೇಗೆ ಪ್ರತಿಕ್ರಿಯಿಸಲಿದ್ದಾರೆ?

● ರಾಜ್ಯದ ಜನತೆ ಉಗ್ರಗಾಮಿತನದಿಂದ ಬೇಸತ್ತಿದ್ದಾರೆ ಎಂಬುದರಲ್ಲಿ ಸಂದೇಶವಿಲ್ಲ. ಅದು ಅವರ ಇಡೀ ಜೀವನವನ್ನೇ ಹಾಳುಗೆಡವಿದೆ. ಒಂದೂವರೆ ದಶಕದ ಉಗ್ರಗಾಮಿತನದ ಅವಧಿಯಲ್ಲಿ ಅವರ ಆರ್ಥಿಕತೆ ಕುಸಿದಿದೆ. ಪ್ರವಾಸೋದ್ಯಮ ಅಸ್ತವ್ಯಸ್ತಗೊಂಡಿದೆ. ಅದು ಸಾವಿರಾರು ಜನರಿಗೆ ನೇರವಾಗಿ ಹಾಗೂ ಪರೋಕ್ಷವಾಗಿ ಉದ್ಯೋಗ ಒದಗಿಸುತ್ತಿತ್ತು. ವಿದ್ಯಾರ್ಥಿಗಳನ್ನು ಇದು ತಟ್ಟಿದೆ. ಹಲವಾರು ಅಮೂಲ್ಯ ವರ್ಷಗಳನ್ನು ಕಳಕೊಂಡು ಅವರ ಭವಿಷ್ಯ ಮಂಕಾಗಿದೆ. ಇನ್ನೂ ಹಲವಾರು ವಿಧಗಳಲ್ಲಿ ಉಗ್ರಗಾಮಿತನದ ದುಷ್ಪರಿಣಾಮಗಳು ಜನರನ್ನು ತಟ್ಟಿವೆ. ಸಹಜವಾಗಿಯೇ, ಶಾಂತಿಯ ಆಕಾಂಕ್ಷೆ ಹೆಚ್ಚಿದೆ. ಇದರೊಂದಿಗೆ 'ಕಾಶ್ಮೀರ ಸಮಸ್ಯೆ' ಎಂದು ಏನನ್ನೂ ಕರೆಯುತ್ತಾರೋ ಆ ಬಗ್ಗೆ ಮಾತುಕತೆಯಿಂದ ಇತ್ಯರ್ಥವಾಗಬೇಕು ಎಂಬ ಆಕಾಂಕ್ಷೆಯೂ ಹೆಚ್ಚಿದೆ ಇಲ್ಲಿ ಮಾತುಕತೆಯ ಮೂಲಕ ಇತ್ಯರ್ಥ ಎಂದರೆ ಎರಡೂ ಅರ್ಥ - ಭಾರತ ಮತ್ತು ಪಾಕಿಸ್ತಾನಗಳ ನಡುವೆ ಮತ್ತು ಭಾರತ ಸರ್ಕಾರ ಹಾಗೂ ರಾಜ್ಯದೊಳಗೆ ಕೆಲಸ ಮಾಡುವ ಅಖಿಲ ಪಕ್ಷ ಹುರಿಯತ್ ಕಾನ್ಫರೆನ್ಸ್ ಮುಂತಾದ ಸಂಘಟನೆಗಳ ನಡುವೆ. ಈ ಆಕಾಂಕ್ಷೆ ದಿನೇ ದಿನೇ ಬಲವಾಗುತ್ತಿದೆ.

ಆದರೆ ಇದರರ್ಥ ಜನಗಳು ಬಹಳ ಉತ್ಸುಕರಾಗಿದ್ದಾರೆ, ಆಶಾವಾದಿಗಳಾಗಿದ್ದಾರೆ ಎಂದಲ್ಲ. ನವದೆಹಲಿಯಲ್ಲಿ ಆಳುತ್ತಿರುವವರ ಬಗ್ಗೆ ಅವರಿಗೆ ನಂಬಿಕೆಯಿಲ್ಲ. ಏಕೆಂದರೆ ಮತ್ತೆ-ಮತ್ತೆ ಕೇಂದ್ರದ ಸರ್ಕಾರಗಳು ಅವರನ್ನು ವಂಚಿಸಿವೆ. ಭಾರತೀಯ ಸಂವಿಧಾನದ 370ನೇ ಕಲಮಿನಡಿ ಇದ್ದ ಸ್ವಾಯತ್ತತೆಯನ್ನು ಸತತವಾಗಿ ಮೊಟಕು ಮಾಡಿವೆ.


ಪ್ರಶ್ನೆ: ಆದರೆ 370ನೇ ಕಲಮು ಇನ್ನೂ ಇದೆಯಲ್ಲ...

● ಹೌದು, ಆದರೆ ಅದೀಗ ಅವರ ಮೂಲ ಸ್ವರೂಪದ ಒಂದು ನೆರಳಾಗಿ ಮಾತ್ರ ಇದೆ. ಆದ್ದರಿಂದ ಜನಗಳಿಗೆ ಉಗ್ರಗಾಮಿತನದಿಂದ ಬೇಸರವಾಗಿದ್ದರೂ ಅವರು ಕೇಂದ್ರ ಸರ್ಕಾರದಲ್ಲಿ ನಂಬಿಕೆಯಿಡುವ ಸ್ಥಿತಿಯಲ್ಲಿಲ್ಲ. ಅವರಲ್ಲಿ ಅನ್ಯ ಭಾವನೆ ಎಂತಹ ಮಟ್ಟದಲ್ಲಿದೆಯೆಂದರೆ ಹೊರಗಿನವರಿಗೆ ಅದರ ತೀವ್ರತೆಯನ್ನು ಅಳೆಯಲು ಸಾಧ್ಯವಿಲ್ಲ. ಅಲ್ಲದೆ ಬಿಜೆಪಿ ಸರಕಾರ ಪ್ರಕಟಣೆಗಳ ಬಗ್ಗೆಯೂ ಅವರು ಬಹಳ ಆಶಾವಾದಿಗಳೇನೂ ಆಗಿಲ್ಲ. ಒಮ್ಮೆ ಈ ಸರಕಾರ ಕೆ.ಸಿ. ಪಂತ್‌ರನ್ನು ಸಂವಾದಕರಾಗಿ ಕಳಿಸಿತು. ಆದರೆ ಅವರೇನು ಮಾಡಿದರು, ಯಾರನ್ನು ಭೇಟಿಯಾದರು ಎಂದು ಪೂರ್ಣವಾಗಿ ಯಾರಿಗೂ ಗೊತ್ತಿಲ್ಲ. ಈಗ ಅವರು ಇನ್ನೊಬ್ಬ ಸಂವಾದಕರನ್ನು ನೇಮಿಸಿದೆ. ಆದರೆ ಆತನಿಗೆ ಸರಕಾರದಲ್ಲಿ ಯಾವುದೇ ಅಧಿಕೃತ ಸ್ಥಾನಮಾನವಿಲ್ಲ. ನಿಜವಾಗಿ ಈ ಮನುಷ್ಯ, ಅರುಣ್ ಜೆಟ್ಲಿ ಬಿಜೆಪಿಯ ವಕ್ತಾರ. ಈ ಬಿಜೆಪಿ ಎಂತದ್ದು? ಕಾಶ್ಮೀರಿ ಆಕಾಂಕ್ಷೆಗಳಿಗೆ, ಸಂಸ್ಕೃತಿಗೆ, ಅನನ್ಯತೆಗೆ, ರಾಜ್ಯದ ಸ್ವಾಯತ್ತತೆಗೆ, 370ನೇ ಕಲಮಿಗೆ, ಅದು ಪ್ರತೀಕವಾಗಿರುವ ಎಲ್ಲದಕ್ಕೂ ಸದಾ ವಿರುದ್ಧವಾಗಿದ್ದ ಪಕ್ಷ. ಆತನನ್ನು ಸಂವಾದಕನಾಗಿ ನೇಮಿಸುವಾಗಲೇ ಆತ ಸ್ವಾಯತ್ತತೆಯ ಪ್ರಶ್ನೆಯನ್ನು ಚರ್ಚಿಸುವುದಿಲ್ಲ, ವಿಕೇಂದ್ರೀಕರಣದ ಪ್ರಶ್ನೆಯನ್ನಷ್ಟೇ ಚರ್ಚಿಸುವುದಾಗಿ ಸರಕಾರ ಸ್ಪಷ್ಟಗೊಳಿಸಿತ್ತು. ಇದರಲ್ಲಿ ಆಶ್ಚರ್ಯವೇನಿಲ್ಲ. ಅವರು ಈಗಾಗಲೇ ಸ್ವಾಯತ್ತತೆಯ ಬಗ್ಗೆ ರಾಜ್ಯ ಸಭೆಯ ನಿರ್ಣಯವನ್ನು ಸಾರಾಸಗಟಾಗಿ ತಿರಸ್ಕರಿಸಿದ್ದಾರೆ. ಈ ಬಗ್ಗೆ ಯೋಚಿಸದೆಯೇ, ರಾಜ್ಯ ಸರ್ಕಾರದೊಡನೆ ಅಥವಾ ಸರ್ವಪಕ್ಷ ಸಭೆಯಲ್ಲಿ ಚರ್ಚಿಸದೇನೇ ಅದನ್ನು ತಿರಸ್ಕರಿಸಿದೆ.

> ಜಮ್ಮು - ಕಾಶ್ಮೀರ ಇಂದು ವಿಶ್ವದ ಗಮನವನ್ನು ಸೆಳೆದಿದೆ. ಅಲ್ಲೀಗ ಅನೇಕ ಕೊಲೆ ಬೆದರಿಕೆಗಳ ನಡುವೆಯೂ ಚುನಾವಣಾ ಪ್ರಕ್ರಿಯೆ ನಡೆದಿದೆ. ಅಲ್ಲಿಯ ವಾಸ್ತವ ಸನ್ನಿವೇಶವೇನು? ಇದನ್ನು ತಿಳಿಯಲು ಸಿಪಿಐ(ಎಂ) ನ ಜಮ್ಮು-ಕಾಶ್ಮೀರ ರಾಜ್ಯ ಕಾರ್ಯದರ್ಶಿ, ಶಾಸಕ **ಯೂಸುಫ್ ತರಿಗಾಮಿ** ಅವರೊಡನೆ ನಡೆಸಿದ ಮಾತುಕತೆಯ ಕೆಲವು ಅಂಶಗಳು ಇಲ್ಲಿವೆ.

ಪ್ರಶ್ನೆ: ಆದರೆ ಈ ಚುನಾವಣೆ ಗಳು ನಿರ್ಣಾಯಕವಾಗಲಿವೆ ಎಂಬ ಒಮ್ಮತದ ಅಭಿಪ್ರಾಯವಿದೆಯಲ್ಲ. ರಾಜ್ಯದ ಜನತೆ ಚುನಾವಣೆಗಳಲ್ಲಿ ಭಾಗವಹಿಸಲು ಮುಂದೆ ಬರದಿದ್ದರೆ ಏನಾಗುತ್ತದೆ?

● ಹೌದು, ಈ ಚುನಾವಣೆಗಳು ನಿರ್ಣಾಯಕ. ಅದರ ಬಗ್ಗೆ ಸಂಶಯವಿಲ್ಲ. ಅದೂ ಇಡೀ ಅಂತರ್ರಾಷ್ಟ್ರೀಯ ಸಮುದಾಯ ಇದನ್ನು ಕುತೂಹಲದಿಂದ ಕಾದು ನೋಡುತ್ತಿ ರುವಾಗ. ನಾನು ಆಗಲೇ ಹೇಳಿದ ಹಾಗೆ ಶ್ರೀನಗರದಲ್ಲಿ ಒಂದು ಜನಪ್ರಿಯ ಸರಕಾರ ಇರುವುದು ಯಾವುದೇ ರೀತಿಯಲ್ಲಿ ಅರಾಜಕತೆಗಿಂತ ಹೆಚ್ಚು ಅಪೇಕ್ಷಣೀಯ. ಆದ್ದರಿಂದ ಜನಗಳು ಚುನಾವಣಾ ಪ್ರಕ್ರಿಯೆ ಯಲ್ಲಿ ಭಾಗವಹಿಸುವ ಮನೋಭಾವ ಹೊಂದಿ ದಂತಿದೆ. ಒಂದೇ ವಿಷಯ ವೆಂದರೆ ಭಯೋತ್ಪಾದಕರ ಬೆದರಿಕೆ ಅವರಲ್ಲಿ ಸಾಕಷ್ಟು ಜನರು ಚುನಾವಣೆಯ ದಿನ ಮನೆಯಿಂದ ಹೊರಬರದಂತೆ ತಡೆಯಬಹುದು.



ಫಾರೂಕ್ ಅಬ್ದುಲ್ಲಾ


ಪ್ರಶ್ನೆ: ಹಾಗಾದರೆ ದಾರಿಯೇನು?

● ಮೊದಲ ವಿಷಯವೆಂದರೆ ರಾಜ್ಯದಲ್ಲಿ ಭದ್ರತೆಯನ್ನು ಬಿಗಿಗೊಳಿಸುವುದು. ಹೀಗೆ ಹೇಳಲು ಸಾಕಷ್ಟು ಕಾರಣಗಳಿವೆ. ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕೆಂಬ ಮನೋಭಾವ ಜನಗಳಲ್ಲಿ ಎಷ್ಟು ಬಲವಾಗಿದೆಯೆಂದರೆ ಹುರಿಯತ್ ಕಾನ್ಫರೆನ್ಸ್‌ನ ಕೆಲವು ಘಟಕಗಳ ಮೇಲೂ ಒತ್ತಡ ಬಂದಿದೆ. ಅದರೊಳಗೆ ಚರ್ಚೆ ನಡೆಯುತ್ತಿದ್ದು, ಕೆಲವು ಘಟಕಗಳು ಚುನಾವಣೆಗಳಲ್ಲಿ ಭಾಗವಹಿಸುವ ಪರವಾಗಿ ಇವೆ. ಕೆಲವು ಕೇಂದ್ರದೊಂದಿಗೆ ಮಾತುಕತೆ ಆರಂಭಿಸುವ ಪರವಾಗಿವೆ. ಇವೆಲ್ಲಾ ಸಹಜವಾಗಿಯೇ ಪ್ರತ್ಯೇಕತಾವಾದಿಗಳಿಗೆ, ಅವರ ಗುರುಗಳಿಗೆ ಹತಾಶೆಯುಂಟು ಮಾಡಿರುವುದರಿಂದ ಅವರು ಈ ರಾಜಕೀಯ ಪ್ರಕ್ರಿಯೆ ನಡೆಯದಂತೆ ತಡೆಯಲು ಸರ್ವಪ್ರಯತ್ನ ನಡೆಸುತ್ತಾರೆ. ಇತ್ತೀಚೆಗೆ ಅಬ್ದುಲ್ ಗನಿ ಲೋನರ ಹತ್ಯೆ, ಅಮರನಾಥ ಯಾತ್ರಿಗಳ ಮೇಲೆ ದಾಳಿ ಮಾಡಿ 9ಜನರ ಹತ್ಯೆ, ಹಲವರಿಗೆ ಗಾಯಗಳಾದ ಘಟನೆ ಈ ಶಕ್ತಿಗಳಿಂದ ಒಂದು ರೀತಿಯ ಎಚ್ಚರಿಕೆ, ಲೋನ್‌ರ ಅಂತಿಮ ಕ್ರಿಯೆಯಲ್ಲಿ ಸೇರಿದ್ದ ಅಪಾರ ಜನಸಂದಣಿ ಯಾವುದೇ ಭಯೋತ್ಪಾದಕ ಸಂಘಟನೆಯ ನಿರೀಕ್ಷೆಗೆ ಮೀರಿದ್ದು ಎಂಬುದು ಬೇರೆ ಸಂಗತಿ. ಲೋನ್‌ರನ್ನು ಕೊಲೆ ಮಾಡಿ ಜನಗಳನ್ನು ಬೆದರಿಸಿಬಿಡಬಹುದೆಂಬ ಅವರ ಯೋಚನೆ ವಿಫಲವಾಗಿರುವುದು ಸ್ವಯಂವೇದ್ಯ.

ಆದರೆ ಭದ್ರತೆಯನ್ನು ಬಿಗಿಗೊಳಿಸುವುದಲ್ಲದೆ, ಸರಕಾರ ಜನಗಳನ್ನು ಗೆಲ್ಲಲು ರಾಜಕೀಯ ಪ್ರಕ್ರಿಯೆಯ ಆರಂಭಕ್ಕೆ ಕ್ರಮ ಕೈಗೊಳ್ಳುವುದು ಹೆಚ್ಚು ಮಹತ್ವದ್ದು. ನಾನು ಈಗಾಗಲೇ ಹೇಳಿದಂತೆ, ಕೇಂದ್ರದ ಸರಕಾರಗಳು ರಾಜ್ಯದ ಜನಗಳಲ್ಲಿ ಅನ್ಯ ಭಾವನೆಯನ್ನೇ ಹೆಚ್ಚಿಸಿವೆ. ಅವರನ್ನು ದೂರ ಮಾಡುವ ಕೃತ್ಯಗಳನ್ನೇ ಎಸಗಿದೆ. ಈ ಪ್ರಕ್ರಿಯೆಯನ್ನು ಬದಲಿಸಲೇಬೇಕು...


ಪ್ರಶ್ನೆ: ಆದರೆ ಈಗ ಚುನಾವಣಾ ವೇಳಾ ಪಟ್ಟಿ ಪ್ರಕಟವಾಗಿದೆಯಲ್ಲ...

● ಹೌದು, ಹೌದು. ಸಮಸ್ಯೆ ನಮಗೆ ಅರ್ಥವಾಗುತ್ತದೆ. ಚುನಾವಣಾ ವೇಳಾಪಟ್ಟಿ ಪ್ರಕಟವಾಗಿಯಾಗಿದೆ. ಕೇಂದ್ರ ಅಥವಾ ರಾಜ್ಯ ಸರ್ಕಾರ ಯಾವುದೇ ಧೋರಣಾ ಪ್ರಕಟಣೆ ಅಥವಾ ಅಭಿವೃದ್ಧಿ ಚಟುವಟಿಕೆಯನ್ನು ಆರಂಭಿಸುವಂತಿಲ್ಲ. ಅದು ನಿಜ ಹಾಗೂ ತಾರ್ಕಿಕ ಕೂಡಾ. ಆದರೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕಾಶ್ಮೀರಿ ಸಮಸ್ಯೆಯನ್ನು ಬಗೆಹರಿಸಲು, ಅವರ ಜೀವನವನ್ನು ಎದುರಿಸುವ ಜ್ವಲಂತ ಪ್ರಶ್ನೆಗಳನ್ನು ಎದುರಿಸಲು ಅವರ ಜೀವನವನ್ನು ಉತ್ತಮಪಡಿಸಲು ಪ್ರಾಮಾಣಿಕ ಪ್ರಯತ್ನ ನಡೆಸುತ್ತವೆ ಎಂಬ ಭಾವನೆಯನ್ನು ಜಮ್ಮು ಮತ್ತು ಕಾಶ್ಮೀರದ ಜನತೆಯಲ್ಲಿ ಮೂಡಿಸಲು ಹಲವು ದಾರಿ ಗಳಿವೆ. ಅಂದರೆ ರಾಜ್ಯವನ್ನು ಕೋಮು ಆಧಾರದಲ್ಲಿ ಮೂರು ವಿಭಾಗಗಳಾಗಿ ಮಾಡುವ, ಮತ್ತು ಇಂತಹ ಇತರ ಅತ್ಯಂತ ಬೇಜವಾಬ್ದಾರಿ ಮಾತುಗಳನ್ನು ತಕ್ಷಣ ನಿಲ್ಲಿಸಬೇಕೆಂಬುದೂ ಕೂಡಾ ಇದರ ಅರ್ಥ. ಇದು ಕಷ್ಟದ ಕೆಲಸ. ಜನ ಆಳುವವರ ಪ್ರಾಮಾಣಿಕತೆ ಯನ್ನು ನಂಬುವಂತೆ ಮಾಡುವುದು ಕಷ್ಟದ ಕೆಲಸ. ಆದರೆ ಬೇರೆ ದಾರಿಯಿಲ್ಲ. ಹಾಗೆ ಮಾಡದಿದ್ದರೆ ಭಯೋತ್ಪಾದಕರ ಹುಚ್ಚಾಟಕ್ಕೆ ಒಂದು ಅವಕಾಶ ಕೊಟ್ಟಂತೆ.



ಪ್ರಶ್ನೆ: ರಾಜ್ಯವನ್ನಾಳುತ್ತಿರುವ ನ್ಯಾಶನಲ್ ಕಾನ್ಫರೆನ್ಸ್ ಬಗ್ಗೆ ಏನು? ಸದ್ಯಕ್ಕೆ ಅದಕ್ಕೆ ಪರ್ಯಾಯ ಇದ್ದಂತೆ ಕಾಣುವುದಿಲ್ಲ...

● ನಾವೀಗ ನೋಡುತ್ತಿರುವ ನ್ಯಾಶನಲ್ ಕಾನ್ಫರೆನ್ಸ್, 1930 ರ, 1940 ರ ದಶಕದಲ್ಲಿ ನಿರಂಕುಶ ರಾಜಪ್ರಭುತ್ವದ ವಿರುದ್ಧ ಜನಗಳಿಗೆ ನೇತೃತ್ವ ನೀಡಿದ ನ್ಯಾಶನಲ್ ಕಾನ್ಫರೆನ್ಸ್ ಅಲ್ಲ; ಪಾಕಿಸ್ತಾನ ಕಳಿಸಿದ ಬುಡಕಟ್ಟು ಧಾಳಿಕೋರರ ವಿರುದ್ಧ ಸಶಸ್ತ್ರ ಹೋರಾಟಕ್ಕೆ ನೇತೃತ್ವ ನೀಡಿದ, ಮಹಾರಾಜ ಧರ್ಮನಿರಪೇಕ್ಷ ಭಾರತವನ್ನು ಸೇರುವಂತೆ ಬಲವಂತ ಮಾಡಿದ ನ್ಯಾಶನಲ್ ಕಾನ್ಫರೆನ್ಸ್ ಅಲ್ಲ; ಸ್ವತಂತ್ರ ಭಾರತದಲ್ಲಿಯೇ ಅತ್ಯಂತ ತೀವ್ರಗಾಮಿ ಭೂಸುಧಾರಣೆ ತಂದ, ಪರಿಹಾರವಿಲ್ಲದೆ ಭೂಮಾಲಿಕತ್ವ ವನ್ನು ಅಂತ್ಯಗೊಳಿಸಿದ, ಅದು ಕೂಡಾ ಇತರ ರಾಜ್ಯಗಳು ಬಹಳಷ್ಟು ತೂತುಗಳಿದ್ದ ಜಮೀನ್ದಾರಿ -ವಿರೋಧಿ ಶಾಸನಗಳನ್ನು ತರುವ ಎಷ್ಟೋ ಮೊದಲು, ಸರಕಾರವನ್ನು ನಿ[illegible] ನ್ಯಾಶನಲ್ ಕಾನ್ಫರೆನ್ಸ್ ಅಲ್ಲ. ಈಗಿನ ನ್ಯಾಶನಲ್ ಕಾನ್ಫರೆನ್ಸ್ ತನ್ನ ಆದರ್ಶಗಳಿಂದ ಬಹಳ ಬಹಳ ದೂರದಲ್ಲಿದೆ.



ಕೊಲೆಗೀಡಾದ ಅಬ್ದುಲ್ ಗನಿ ಲೋನ್

ಒಂದು ಉದಾಹರಣೆ ಕೊಡುತ್ತೇನೆ. ಜನಸಂಘ, ನಂತರ ಬಿಜೆಪಿ 370ನೇ ಕಲಮಿನ ವಿರುದ್ಧ ಕೆಂಡಕಾರುತ್ತಿತ್ತು. ಆ ರಾಜ್ಯ ಕಳಕೊಂಡ ಸ್ವಾಯುತ್ತತೆಯನ್ನು ಸಾಧ್ಯವಾದಷ್ಟು ಗರಿಷ್ಟ ಮಟ್ಟಿಗೆ ಮರು ಸ್ಥಾಪಿಸಬೇಕೆಂಬ ಮಾತು ಬಿಡಿ, ಅಳಿದುಳಿದ ಸ್ವಾಯತತ್ತೆಯನ್ನು ಕೂಡಾ ಕಿತ್ತುಕೊಳ್ಳಬೇಕು ಎಂದು ಒತ್ತಾಯಿಸುತ್ತಿದ್ದ ಪಕ್ಷ. ಅಷ್ಟೇ ಅಲ್ಲ. ಜಮ್ಮುವಿನಲ್ಲಿ ನ್ಯಾಶನಲ್ ಕಾನ್ಫರೆನ್ಸಿನ ಕಾರ್ಯಕರ್ತರು ಹಿಂದುತ್ವ ಶಕ್ತಿಗಳು ಆರಂಭಿಸಿದ ದೈಹಿಕ ಹಲ್ಲೆಗಳಿಗೆ ಬಲಿಯಾಗಿದ್ದರು. ಆದರೆ ಅದೇ ನ್ಯಾಶನಲ್ ಕಾನ್ಫರೆನ್ಸ್ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರವನ್ನು ಸೇರಲು ಹಿಂಜರಿಯಲಿಲ್ಲ. ಪರಿಸ್ಥಿತಿಯಲ್ಲಿ ಏನು ಬದಲಾವಣೆಯಾಗಿದೆಯೆಂದು ಈ ಕ್ರಮವನ್ನು ಸಮರ್ಥಿಸಿಕೊಳ್ಳಲು ಸಾಧ್ಯ? ಆರ್‌ಎಸ್‌ಎಸ್ ಮತ್ತು ಬಿಜೆಪಿ ಬದಲಾಗಿಲ್ಲ, 370ನೇ ಕಲಮಿನ ಮೇಲೆ ಸ್ವಾಯತ್ತತೆಯ ಕುರಿತ ತಮ್ಮ ನಿಲುವಿನ ಕೈ ಬಿಟ್ಟಿಲ್ಲ. ಬಿಜೆಪಿಯೊಂದಿಗೆ ಕೈ ಮಿಲಾಯಿಸಿ ಜನಗಳಿಗೆ ವಿಶ್ವಾಸಘಾತ ಬಗೆದದ್ದು ನ್ಯಾಶನಲ್ ಕಾನ್ಫರೆನ್ಸ್!

ನ್ಯಾಶನಲ್ ಕಾನ್ಫರೆನ್ಸ್ ಸರಕಾರದ ಭ್ರಷ್ಟಾಚಾರ, ದುರಾಡಳಿತ ಮತ್ತು ರಾಜ್ಯ ದಲ್ಲಿ ಯಾವುದೇ ಹೇಳಿಕೊಳ್ಳ ಲಾಗದ ಅಭಿವೃದ್ಧಿ ಇಲ್ಲದಿರು ವುದು ಆ ಪಕ್ಷಕ್ಕೆ, ಅದರ ಸರಕಾರಕ್ಕೆ ಕೆಟ್ಟ ಹೆಸರು ತಂದಿದೆ.

ಆದರೆ, ನಿಜ ನೀವು ಹೇಳಿದಂತೆ ಸದ್ಯಕ್ಕೆ ನ್ಯಾಶನಲ್ ಕಾನ್ಫರೆನ್ಸ್‌ಗೆ ಒಂದು ಪರ್ಯಾಯ ಶಕ್ತಿ ಕಾಣುತ್ತಿಲ್ಲ. ಅದಕ್ಕೆ ಹಲವು ಕಾರಣಗಳಿವೆ. ಒಂದೆಂದರೆ, ನ್ಯಾಶನಲ್ ಕಾನ್ಫರೆನ್ಸಿನ ಸಂಘಟನಾ



ರಚನೆ ಸುಮಾರಾಗಿ ಹಾಗೆಯೇ ಇದೆ. ಎರಡನೆಯದಾಗಿ, ರಾಜ್ಯ ದಲ್ಲಿನ ರಾಜಕೀಯ ಸನ್ನಿವೇಶದಿಂದಾಗಿ ಉಳಿದ ಪಕ್ಷಗಳು ಸರಿಯಾಗಿ ಕೆಲಸ ಮಾಡಲಾಗಿಲ್ಲ. ಒಂದು ಉದಾಹರಣೆ ಕೊಡುತ್ತೇನೆ. 1999 ರ ಲೋಕಸಭಾ ಚುನಾವಣೆಗಳಲ್ಲಿ ನಮ್ಮ ಒಬ್ಬ ಅಭ್ಯರ್ಥಿಗೆ ಇಬ್ಬರು ಭದ್ರತಾ ಸಿಬ್ಬಂದಿಯನ್ನು ಒದಗಿಸಲಾಗಿತ್ತು. ಒಬ್ಬನನ್ನು ಹಿಂತೆಗೆದುಕೊಳ್ಳ ಲಾಯಿತು. ನಾವು ಪ್ರತಿಭಟಿಸಿದ ನಂತರ ಇನ್ನೊಬ್ಬನನ್ನೂ ಹಿಂತೆಗೆದುಕೊಳ್ಳ ಲಾಯಿತು. ಅದು ಕೂಡಾ ಕಾಶ್ಮೀರ ಕಣಿವೆಯ ದಕ್ಷಿಣ ಭಾಗದಲ್ಲಿ, ನಮ್ಮ ಪ್ರಭಾವ ಸಾಕಷ್ಟು ಇರುವಲ್ಲಿ ಹಾಗೂ ಅತಿ ಹೆಚ್ಚು ಭಯೋತ್ಪಾದನೆಗೆ ಗುರಿಯಾದ ಒಂದು ಪ್ರದೇಶದಲ್ಲಿ. ಬೇರೆ ಕೆಲವು ಪಕ್ಷಗಳು ಕೂಡಾ ಇಂತಹುದೇ ಸನ್ನಿವೇಶ ಎದುರಿಸುತ್ತಿವೆ. ಇಂತಹ ಸನ್ನಿವೇಶದಲ್ಲಿ ನ್ಯಾಶನಲ್ ಕಾನ್ಫರೆನ್ಸ್‌ಗೆ ಒಂದು ಪರ್ಯಾಯಕಾಣಿಸಿಕೊಳ್ಳುವುದು ಹೇಗೆ?

ಪ್ರಶ್ನೆ: ಫಾರುಕ್ ಸರಕಾರವೇ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರುವಂತೆ ಕೇಳಬೇಕು

ಪುಟ 10 ನೋಡಿ

ಕಾಶ್ಮೀರ ವಿಭಜನೆಗೆ ಆರ್‌ಎಸ್‌ಎಸ್ ಯತ್ನ

ಹರ್ಕಿಶನ್‌ಸಿಂಗ್ ಸುರ್ಜಿತ್

ನಮ್ಮ ದೇಶದ ಐಕ್ಯತೆ, ಪ್ರಾದೇಶಿಕ ಸಮಗ್ರತೆ ಈಗ ಒಂದು ವಿಪತ್ಕಾರಿ ಸನ್ನಿವೇಶವನ್ನು ಎದುರಿಸುತ್ತಿದೆ. ಕಾಶ್ಮೀರ ನಮ್ಮ ರಾಷ್ಟ್ರೀಯ ಐಕ್ಯತೆಯ ಒಂದು ಅತ್ಯಂತ ಮಹತ್ವದ ಪ್ರತೀಕಗಳಲ್ಲಿ ಒಂದು. ಅದರ ವಿರುದ್ಧ ಈಗ ಒಂದಲ್ಲ, ಮೂರು ಶಕ್ತಿಗಳು ಪಿತೂರಿ ನಡೆಸಿವೆ -

ಅಮೆರಿಕನ್ ಸಾಮ್ರಾಜ್ಯಶಾಹಿಗಳು, ಪಾಕಿಸ್ತಾನದ ಆಳರಸರು ಮತ್ತು ನೀವು ನಂಬುತ್ತೀರೋ ಇಲ್ಲವೋ, ಮೂರನೇ ಶಕ್ತಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಅಥವಾ ಆರ್‌ಎಸ್‌ಎಸ್) ಇವೆಲ್ಲಾ ಸೇರಿ ಕಾಶ್ಮೀರ ಜನಗಳ ಅನನ್ಯತೆಯನ್ನು ಒಂದಿಲ್ಲೊಂದು ರೀತಿಯಲ್ಲಿ ಗೊತ್ತಿದ್ದೋ, ಗೊತ್ತಿಲ್ಲದೆಯೋ ಕೊಲ್ಲುತ್ತಿವೆ. ಪರಸ್ಪರರ ಹುನ್ನಾರಗಳನ್ನು ಬಲಗೊಳಿಸುತ್ತಿವೆ.

ಇದೊಂದು ಅತ್ಯಂತ ಅನಿಷ್ಟಕಾರದ ದುಷ್ಟ ತಂತ್ರಗಳ ವಿರುದ್ಧ ದೇಶದ ಧರ್ಮನಿರಪೇಕ್ಷ, ಪ್ರಜಾಪ್ರಭುತ್ವವಾದಿ ಮತ್ತು ದೇಶಪ್ರೇಮಿ ಶಕ್ತಿಗಳು ಎಚ್ಚರದಿಂದಿರಬೇಕು-ವಿಶೇಷವಾಗಿ ಮುಂದೆ ಕೆಲವು ತಿಂಗಳಲ್ಲಿ ಜಮ್ಮು-ಕಾಶ್ಮೀರ ವಿಧಾನ ಸಭಾ ಚುನಾವಣೆಗಳು ನಡೆಯಲಿರುವ ಸಂದರ್ಭದಲ್ಲಿ.



ಪಾಕಿಸ್ತಾನದ ಪಾತ್ರ

ಕಾಶ್ಮೀರಕ್ಕೆ ಸಂಬಂಧಪಟ್ಟಂತೆ

ಪಾಕಿಸ್ತಾನದ ಪಾತ್ರ ಅರ್ಥವಾಗುವಂತದ್ದು. ಅದರ 'ಎರಡು ರಾಷ್ಟ್ರ ಸಿದ್ಧಾಂತ'ದ ಪ್ರಕಾರ ಅದು ಕಾಶ್ಮೀರ ತನ್ನದೆಂದು ಹೇಳಿ ಸ್ವಾತಂತ್ರ್ಯ ಸಿಕ್ಕ ಆರಂಭದಲ್ಲೇ ಸಶಸ್ತ್ರ ಧಾಳಿಕೋರರನ್ನು ಕಾಶ್ಮೀರ ಕಣಿವೆಯೊಳಗೆ ಕಳಿಸಿತು. ನಂತರದ ಘಟನೆಗಳೆಲ್ಲಾ ಈಗ ಇತಿಹಾಸದ ಭಾಗ. ಜನರಲ್ ಮುಷರ್ರಫ್ ಕೂಡಾ ಈ ನಿಲುವನ್ನು ತ್ಯಜಿಸಿಲ್ಲ, ಬದಲಿಗೆ ಇನ್ನಷ್ಟು ತೀವ್ರವಾಗಿ ಅದನ್ನೇ ಅನುಸರಿಸುತ್ತಿದ್ದಾರೆ.

ಅಮೆರಿಕಾದ ಆಟ

ಅಮೆರಿಕನ್ ಸಾಮ್ರಾಜ್ಯಶಾಹಿಗಳು ಕಾಶ್ಮೀರಕ್ಕೆ ಸಂಬಂಧಪಟ್ಟಂತೆ ಆಡುತ್ತಿರುವ ಆಟಗಳು ಮುಷರ್ರಫ್‌ರ ಆಟಕ್ಕೆ ಶಕ್ತಿ ನೀಡುತ್ತಿವೆ. ಅಮೆರಿಕಾ ಬಹಳ ವರ್ಷಗಳಿಂದ ಕಾಶ್ಮೀರದ ಮೇಲೆ ಕಣ್ಣು ಹಾಕಿಟ್ಟಿದೆ ಎಂಬುದು ಎಲ್ಲರಿಗೂ ಗೊತ್ತು. ಕಾಶ್ಮೀರದ ಭೌಗೋಳಿಕ ಸ್ಥಾನದಿಂದಾಗಿ ಅಮೆರಿಕನ್ ರಾಜಕೀಯ ತಂತ್ರಗಳಲ್ಲಿ ಅದು ಮಹತ್ವದ ಸ್ಥಾನ ಪಡೆದಿದೆ. ಈ ಹಿಂದೆ ಪಾಕಿಸ್ತಾನವು ಅಮೆರಿಕ- ಪ್ರಾಯೋಜಿತ ಸೀಟೋ (SEATO-ದಕ್ಷಿಣ ಪೂರ್ವ ಏಶ್ಯಾ ಸಂಧಿ ಸಂಘಟನೆ) ಎಂಬ ಮಿಲಿಟರಿ ಬಣದ ಸದಸ್ಯನಾಗಿತ್ತು, ಆಗ ಪಾಕ್-ಆಕ್ರಮಿತ ಕಾಶ್ಮೀರದ ಗಿಲ್ಗಿಟ್‌ನಲ್ಲಿ ಒಂದು ಮಿಲಿಟರಿ ನೆಲೆ ಕಟ್ಟಲು ಅಮೆರಿಕಾ ಯೋಜನೆ ಹಾಕಿತ್ತು. ಆದರೆ ಮುಖ್ಯವಾಗಿ ಚೀನಾದ ವಿರೋಧದಿಂದಾಗಿ ಅದು ಸಾಧ್ಯವಾಗಿರಲಿಲ್ಲ. ಆದರೆ ಸಾಧ್ಯವಿದ್ದಲ್ಲಿ ಕಾಶ್ಮೀರವನ್ನು ಸ್ವತಂತ್ರ ರಾಷ್ಟ್ರವಾಗಿ ಮಾಡಲು ತನ್ನ ಆಟವನ್ನು ಅದಿನ್ನೂ ಕೈಬಿಟ್ಟಿಲ್ಲ. ಇತ್ತೀಚೆಗೆ ಭಾರತವನ್ನು ಸುಪ್ರೀತಗೊಳಿಸಲು ಕೆಲವು ಹೇಳಿಕೆಗಳನ್ನು ನೀಡಿದರೂ, ಪ್ರತಿ ಬಾರಿಯೂ ತನ್ನ ಪಾಕಿಸ್ತಾನ-ಪರ ಒಲವನ್ನು ಅದು ಸದಾ ಸ್ಪಷ್ಟವಾಗಿಯೇ ಸಾರಿಕೊಂಡು ಬಂದಿದೆ.

ಅಮೆರಿಕನ್ ಪಂಡಿತರು ಕಾಶ್ಮೀರವನ್ನು ಸ್ವತಂತ್ರ ದೇಶವಾಗಿ ಮಾಡಿ, ಬಹುಶಃ ಅಲ್ಲಿ ಒಂದು ಕೈಗೊಂಬೆ ಸರ್ಕಾರವನ್ನು ಕೂರಿಸುವ ಯೋಜನೆ ಯಿಟ್ಟುಕೊಂಡಿದ್ದಾರೆ. ಆದರೆ ಹೀಗೆ ಮಾಡುತ್ತಿರುವಾಗಲೇ ಕಾಶ್ಮೀರ ಒಂದು ದ್ವಿಪಕ್ಷೀಯ ಪ್ರಶ್ನೆ, ತನಗೆ ಅದರಲ್ಲಿ ಮಧ್ಯ ಪ್ರವೇಶಿಸುವ ಆಸಕ್ತಿಯಿಲ್ಲ ಎಂಬುದು ಭಾರತವನ್ನು ಸಮಾಧಾನ ಮಾಡಲು ಅದು ಪ್ರಯತ್ನಿಸುತ್ತಿದೆ.




ಕಾವಿ ಪ್ರಯತ್ನ

ಇಂತಹ ಸನ್ನಿವೇಶದಲ್ಲಿ ಆರ್‌ಎಸ್‌ಎಸ್ ಉದ್ದೇಶಪೂರ್ವಕವಾಗಿ ಅಲ್ಲದಿದ್ದರೂ ತಮಗೆ ಗೊತ್ತಿಲ್ಲದೆಯೇ ಅಮೆರಿಕನ್ ಸಾಮ್ರಾಜ್ಯಶಾಹಿಗಳ ಮತ್ತು ಪಾಕಿಸ್ತಾನದ ಮಿಲಿಟರಿ ಆಳರಸರ ಬಲೆಗೆ ಬೀಳುತ್ತಿದೆ.

ಕಾಶ್ಮೀರದ ಬಗ್ಗೆ ಆರ್‌ಎಸ್‌ಎಸ್ ನ ನಿಲುವಿನ ಬಗ್ಗೆ ಆಶ್ಚರ್ಯ ಪಡುವಂತದ್ದೇನಿಲ್ಲ. ಸ್ವಾತಂತ್ರ್ಯದ ಮೊದಲು ಅದು 'ಪ್ರಜಾಪರಿಷದ್' ಎಂಬ ಹೆಸರಿನಲ್ಲಿ ಜನಗಳ ನೈಜ ಆಕಾಂಕ್ಷೆಗಳನ್ನು ದಮನ ಮಾಡುವ ಅಲ್ಲಿಯ ಮಹಾರಾಜನ ಪ್ರಯತ್ನಗಳಿಗೆ ಸಂಪೂರ್ಣ ಬೆಂಬಲ ನೀಡಿತ್ತು. ಕಾಶ್ಮೀರವನ್ನು ಭಾರತದೊಡನೆ ವಿಲೀನಗೊಳಿಸಲು ಹೋರಾಡು ತ್ತಿದ್ದ ಕಾಶ್ಮೀರ ಜನತೆಯ ಮುಖಂಡರನ್ನು ದೈಹಿಕವಾಗಿ ಮುಗಿಸಿಬಿಡಲೂ ಕೂಡಾ ಆ ಪರಿಷದ್ ಪ್ರಯತ್ನಿಸಿತ್ತು. ಮಹಾರಾಜ ಭಾರತದೊಡನೆ ಕಾಶ್ಮೀರವನ್ನು ವಿಲೀನಗೊಳಿಸದೆ ಮೌಂಟ್ ಬ್ಯಾಟನ್ ಯೋಜನೆಯಲ್ಲಿ ಸ್ವತಂತ್ರವಾಗಿರಲು ಪ್ರಯತ್ನಿಸಿದಾಗ ಆತನಿಗೆ ಇದೇ ಪ್ರಜಾಪರಿಷದ್‌ನ ಪೂರ್ಣಬೆಂಬಲ ದೊರೆತಿತ್ತು. ಇಂತಹ ರಾಷ್ಟ್ರ-ವಿರೋಧಿ ಆರ್‌ಎಸ್‌ಎಸ್ ಇತರರಿಗೆ ಸದಾ ದೇಶಪ್ರೇಮದ ಉಪದೇಶ ನೀಡುತ್ತಿರುತ್ತದೆ!

ಕಶ್ಮೀರಿ ಸಂಸ್ಕೃತಿ

ಕಶ್ಮೀರಿಯತ್ ಎಂದರೆ ಕಾಶ್ಮೀರಿ ಜನಗಳ ಸ್ವಂತಿಕೆ ಮತ್ತು ಸಂಸ್ಕೃತಿ ಆರ್‌ಎಸ್‌ಎಸ್‌ಗೆ ಹಿಡಿಸುವುದಿಲ್ಲ ಎಂಬುದು ಗುಟ್ಟೇನಲ್ಲ. ಈ 'ಕಶ್ಮೀರಿಯತ್' ಅಂದರೆ ಕಾಶ್ಮೀರಿ ಅನನ್ಯತೆಯಿಂದಾಗಿ ಬಹುಪಾಲು ಮುಸ್ಲಿಮರೇ ಇರುವ ಕಾಶ್ಮೀರಿ ಜನತೆ ಕೈಗಳಲ್ಲಿ ಬಂದೂಕು ಹಿಡಿದು ಪಾಕ್-ಪ್ರಾಯೋಜಿತ ಧಾಳಿಕೋರರನ್ನು ಎದುರಿಸಿದರು ಹಾಗೂ ಮಹಾರಾಜ ಭಾರತವನ್ನು ಸೇರುವಂತೆ ಮಾಡಿದರು. ಏಕೆಂದರೆ ತಮ್ಮ ಸಮಿಶ್ರ ಸಂಸ್ಕೃತಿಯ ಬಗ್ಗೆ ಹೆಮ್ಮೆಪಡುವ ಈ ಜನ ತಮ್ಮ ಭವಿಷ್ಯವಿರುವುದು ಒಂದು ಧರ್ಮನಿರಪೇಕ್ಷ ಭಾರತದೊಡನೆಯೇ ಹೊರತು ಮತೀಯ ಪ್ರಭುತ್ವವಾದ ಪಾಕಿಸ್ತಾನದೊಂದಿಗಲ್ಲ ಎಂದು ಅರಿತರು. ಈ ರೀತಿ ಅವರು ಹಿಂದೂಗಳು, ಮುಸಲ್ಮಾನರು ಎರಡು ಪ್ರತ್ಯೇಕ ದೇಶಗಳು ಎಂಬ ಮುಸ್ಲಿಂ ಲೀಗಿನ ಎರಡು ರಾಷ್ಟ್ರ ಸಿದ್ಧಾಂತವನ್ನು ಧಿಕ್ಕರಿಸಿದರು. ನಿಜ ಈ ಸಿದ್ಧಾಂತ ಮುಸ್ಲಿಂ ಲೀಗಿನ ಮೂಲ ಕೊಡುಗೆಯೇನಲ್ಲ. ನಿಜವಾಗಿ ಅವರು ಅದನ್ನು ಕಾವಿಪಡೆಗಳ ಆರಾಧ್ಯದೈವ ವಿ.ಡಿ.ಸಾವರ್ಕರ್‌ರಿಂದ ಸಾಲ ಪಡೆದಿದ್ದರು. ಮುಸ್ಲಿಂ ಲೀಗ್ ಈ ಸಿದ್ಧಾಂತದ ಆಧಾರದ ಮೇಲೆ ಪಾಕಿಸ್ತಾನದ ಬೇಡಿಕೆಯಿಡುವ 25 ವರ್ಷಗಳ ಹಿಂದೆ ಆತ ಈ ಸಿದ್ಧಾಂತವನ್ನು ಪ್ರತಿಪಾದಿಸಿದರು.



ಹಳೆಯ ತಂತ್ರ

ಈಗ ಆರ್‌ಎಸ್‌ಎಸ್ ಮಾನ್ಯತೆ ಕಳಕೊಂಡ ಆ ಸಿದ್ಧಾಂತವನ್ನು ಪುನರುಜ್ಜೀವನಗೊಳಿಸ ಬಯಸುತ್ತದೆ. ಇತ್ತೀಚಿನ ಒಂದು ನಿರ್ಣಯದಲ್ಲಿ ಅದು ಜಮ್ಮು-ಕಾಶ್ಮೀರವನ್ನು ಮೂರು ಭಾಗಗಳಾಗಿ ತುಂಡರಿಸುವ ಬೇಡಿಕೆಯಿಟ್ಟಿದೆ.

ಗೃಹಮಂತ್ರಿಯೂ ಆಗಿರುವ ಉಪಪ್ರಧಾನ ಮಂತ್ರಿ ಎಲ್.ಕೆ.ಅಡ್ವಾಣಿ ಅದಕ್ಕೆ ನಕಾರ ಸೂಚಿಸಿದ್ದಾರಂತೆ. ಯಾವುದೇ ಆರ್‌ಎಸ್‌ಎಸ್ ಕಾರ್ಯಕರ್ತ ಮುಖಂಡತ್ವಕ್ಕೆ ನಕಾರ ಸೂಚಿಸಲು ಸಾಧ್ಯವೇ ಎಂಬುದು ಇಲ್ಲಿ ಯೋಜಿಸಬೇಕಾದ ಪ್ರಶ್ನೆ. ಇದರರ್ಥ ಸ್ಪಷ್ಟ- ಅಡ್ವಾಣಿಯವರ ನಕಾರ ಸಾರ್ವಜನಿಕವಾಗಿ ಮಾತ್ರ. ಇದು ಆರ್‌ಎಸ್‌ಎಸ್ ನೇತೃತ್ವದ ಪಡೆಗಳ ಹಳೆಯ ತಂತ್ರ.

ಕಾಶ್ಮೀರ ಒಂದೊಮ್ಮೆ ಸಂವಿಧಾನದ 370ನೇ ಕಲಮಿನ ಪ್ರಕಾರ ಹೊಂದಿದ್ದ ಸ್ವಾಯತ್ತತೆಯನ್ನು ಮತ್ತೆ ಕೊಡುವುದಕ್ಕೂ ಆರ್‌ಎಸ್‌ಎಸ್‌ನ ಬದ್ಧ ವಿರೋಧವಿದೆ. ಅದರ ವಿರೋಧದ ಬಗ್ಗೆ ಬಹಳಷ್ಟು ಹೇಳಿದ್ದೇವೆ. ಈಗ ಇಲ್ಲಿ ಇಷ್ಟನ್ನೇ ಹೇಳಬಹುದು - ಆ ರಾಜ್ಯಕ್ಕೆ ಗರಿಷ್ಟ ಸ್ವಾಯತ್ತತೆ ನೀಡದೆ, ಕಾಶ್ಮೀರಿ ಜನತೆಯ ಅನನ್ಯತೆ ಮತ್ತು ಸಂಸ್ಕೃತಿಯನ್ನು ರಕ್ಷಿಸದೆ ಅವರ ಪರಕೀಯ ಭಾವನೆಯನ್ನು ಹೋಗ ಲಾಡಿಸಲು ಸಾಧ್ಯವಿಲ್ಲ. ಅಲ್ಲದೆ ಅಮೆರಿಕಾ- ಪಾಕಿಸ್ತಾನದ ಆಟಗಳನ್ನು ತೋರಿಸಲು ಸಾಧ್ಯವಿಲ್ಲ.

ಕೇಡಿನ ಸಂಕೇತ

ಈಗ ಆರ್‌ಎಸ್‌ಎಸ್ ಮುಖಂಡ ಎಂ.ಜಿ.ವೈದ್ಯರಿಂದ ಇನ್ನೊಂದು ಹೇಳಿಕೆ ಬಂದಿದೆ. ಆರ್‌ಎಸ್‌ಎಸ್ ಜಮ್ಮು-ಕಾಶ್ಮೀರ ಚುನಾವಣೆಗಳಲ್ಲಿ ಸ್ಪರ್ಧಿಸುತ್ತದಂತೆ! ಇದನ್ನು ಗಮನಿಸಿ!

ಇದೊಂದು ಕೇಡಿನ ಸಂಕೇತ. ಏಕೆಂದರೆ ಮುಂಬರುವ ವಿಧಾನಸಭಾ ಚುನವಾಣೆಗಳಿಗೆ ಕೋಮುಬಣ್ಣ ಕೊಡುವ ಯಾವುದೇ ಪ್ರಯತ್ನ ಈ ಸಮಸ್ಯೆಯನ್ನು ಬಹುಪಾಲು ಕ್ಲಿಷ್ಟಗೊಳಿಸುತ್ತದೆ. ಕೇಂದ್ರದ ಬಿಜೆಪಿ ನೇತೃತ್ವದ ಸಕಾರದ ಕೃಪೆಯಿಂದ ಕಾಶ್ಮೀರದ ಪ್ರಶ್ನೆಯನ್ನು ಅಂತರ‍್ರಾಷ್ಟ್ರೀಯ ಗೊಳಿಸಲಾಗಿದೆ ಮತ್ತು ಕಾಶ್ಮೀರ ಭಾರತದಿಂದ ಪ್ರತ್ಯೇಕವಾಗುವ ಅಪಾಯ ಕೊಟ್ಟಿದೆ. ಈಗ ಕಾಶ್ಮೀರದ ಬಗ್ಗೆ ಆರ್‌ಎಸ್‌ಎಸ್ ಮುಂದೊತ್ತುತ್ತಿರುವ ರೀತಿಯು ಪ್ರಜಾಪ್ರಭುತ್ವವಾದಿ ಮತ್ತು ದರ್ಮನಿರಪೇಕ್ಷ ಶಕ್ತಿಗಳು ತಡೆಯದಿದ್ದರೆ ಅದು ಭಾರತವನ್ನು ಅಮೆರಿಕಾ ಮತ್ತು ಪಾಕಿಸ್ತಾನಿ ಆಳರಸರ ಬಲೆಗೆ ಸಿಲುಕಿಸುವ ಒಂದು ಹಂತಕ್ಕೆ ಒಯ್ಯಬಹುದು. ಆರ್‌ಎಸ್‌ಎಸ್ ನಿಲುವಿನ ಬಗ್ಗೆ ಉದಾರತೆ ತೋರಿದರೆ ಅದು ನಮ್ಮ ರಾಷ್ಟ್ರೀಯ ಐಕ್ಯತೆಯನ್ನು ಅಪಾಯಕ್ಕೆ ಸಿಲುಗಿಸಬಹುದಷ್ಟೆ ಅಲ್ಲ, ನಮ್ಮ ಪ್ರಾದೇಶಿಕ ಸಮಗ್ರತೆಗೂ ಸಂಚಕಾರ ತರಬಹುದು.

ಅನು : ಕೆ.ವಿ.

ಎನ್.ಡಿ.ಎ ಸರ್ಕಾರ ಕೇಬಲ್ ಟಿವಿ ಮಸೂದೆ (ತಿದ್ದುಪಡಿ) 2002ನ್ನು ಮಂಡಿಸಿ ಕಳೆದ ಪಾರ್ಲಿಮೆಂಟಿನ ಅಧಿವೇಶನದಲ್ಲಿ ಪಾಸು ಮಾಡುವ ತರಾತುರಿಯಲ್ಲಿತ್ತು. ಕೇಬಲ್ ಟಿವಿ ವಿತರಕರ ಸಂಘ ಈ ಮಸೂದೆ ಪಾಸಾಗದಿದ್ದರೆ ನೆಟ್ಟಗಾಗಲಿಕ್ಕಿಲ್ಲ ಎಂದು ಪಾರ್ಲಿಮೆಂಟು ಸದಸ್ಯರುಗಳನ್ನೇ ಬೆದರಿಸಿತ್ತು. ಏತಕ್ಕಾಗಿ ಈ ಮಸೂದೆ? ಕೇಬಲ್ ಟಿವಿ ಬಳಕೆದಾರನಿಗಾಗಿಯೇ? ಅಥವಾ ಕೇಬಲ್ ಟಿವಿ ವಿತರಕ ಚಾನೆಲ್ ಮೂಲಕ ಜಾಹಿರಾತುದಾರರಿಗಾಗಿಯೇ? ಸರ್ಕಾರ ಈ ಮೂವರಲ್ಲಿ ಯಾರ ಹಿತ ಕಾಪಾಡಲು ಹೊರಟಿದೆ. ಬಳಕೆದಾರನದ್ದಂತೂ ಅಲ್ಲ. ಬಳಕೆದಾರನಿಗೆ ಟೋಪಿ ಹಾಕಿ, ಇತರ ಎಲ್ಲರೂ ಪರಿಸ್ಥಿತಿ ಲಾಭ ಪಡೆಯಲು ಹೊರಟಿದ್ದಾರೆ. ಖಾಸಗೀಕರಣ, ನಿರ್ಬಂಧ ರಹಿತ ಆರ್ಥಿಕತೆ ಬಗ್ಗೆ ಭಾಷಣ ಮಾಡುವ ಈ ತ್ರಿವಳಿಗಳು ಕೇಬಲ್ ಟಿವಿ 'ಸೆಟ್ ಆಫ್ ಬಾಕ್ಸ್' ಕಾನೂನು ಮೂಲಕ ಕಡ್ಡಾಯ ಮಾಡಲು ಹೊರಟಿರುವುದು ಸಾಧ್ಯವೇ?

ಕೇಬಲ್ ಟಿ.ವಿ. ಮಸೂದೆ

ಯಾರು ಹಿತವರು ನಿನಗೆ ಈ ಮೂವರೊಳಗೆ?

ಶರತ್‌ಚಂದ್ರ

ಕೇಬಲ್ ಟಿ.ವಿ ಮಸೂದೆ (ತಿದ್ದುಪಡಿ) 2002ಯನ್ನು ತರಾತುರಿಯಲ್ಲಿ ಪಾಸು ಮಾಡಲು ಎನ್.ಡಿ.ಎ ಸರ್ಕಾರದ ಇಂಗಿತವಿತ್ತು. ಆದರೆ ಹಲವು ಸದಸ್ಯರ ವಿರೋಧ ಮತ್ತು ಪೆಟ್ರೋಲ್‌ಪಂಪು ಹಗರಣದ ಗದ್ದಲದಲ್ಲಿ ಸಾಧ್ಯವಾಗಲಿಲ್ಲ. ಮಾಧ್ಯಮಗಳ ಮಂತ್ರಿ ಸುಷ್ಮಾ ಸ್ವರಾಜ್ ಎನ್.ಡಿ.ಎ. ಘಟಕ ಪಕ್ಷಗಳನ್ನು ಈ ಮಸೂದೆಗೆ ಒಪ್ಪಿಸಿದ್ದರು ಆದರೆ ವಿರೋಧಿ ಪಕ್ಷಗಳನ್ನು ಜಗ್ಗಿಸಲು ಸಾಧ್ಯವಾಗಿರಲಿಲ್ಲ.

ಕಡ್ಡಾಯ ಸೆಟ್-ಆಫ್ ಬಾಕ್ಸ್

ಈ ಮಸೂದೆ ಪ್ರಕಾರ ಪ್ರತಿ ಕೇಬಲ್ ಟಿವಿ ವಿತರಕ ಪ್ರತಿ ಬಳಕೆದಾರನ ಮನೆಯಲ್ಲಿ 'ಸೆಟ್ ಅಪ್ ಬಾಕ್ಸ್' ಒದಗಿಸುವುದು ಕಡ್ಡಾಯವಾಗುತ್ತಿತ್ತು. ಈ ಬಾಕ್ಸ್ ಮೂಲಕ ಬಳಕೆದಾರನ ಆಯ್ಕೆ ಯ ಚಾನೆಲ್ ಮಾತ್ರ ಒದಗಿಸುವ, ಮತ್ತು ಅವುಗಳಿಗೆ ಮಾತ್ರ ಆತ ಹಣ ಪಾವತಿ ಮಾಡುವುದು ಸಾಧ್ಯವಾಗುತ್ತದೆ. ಇದು ಒಳ್ಳೆಯದೇ ಅಲ್ಲವೇ? ಹಾಗಾದರೆ ಇದಕ್ಕೆ ವಿರೋಧ ಯಾಕೆ?

'ಸೆಟ್ ಅಪ್ ಬಾಕ್ಸ್' ನಿಂದ ಬಳಕೆದಾರನಿಗೆ ಆಯ್ಕೆ ಸಿಗುತ್ತದೆ. ಆತ ನೋಡುವ ಚಾನೆಲ್‌ಗಳಿಗೆ ಮಾತ್ರ ಹಣ ಕೊಟ್ಟರಾಯಿತು. ಕೇಬಲ್ ವಿತರಕ ಮತ್ತು ಕೇಬಲ್ ಟಿವಿ ಚಾನೆಲ್ ಮಾಲಿಕರಿಗೂ ಈ ಚಾರ್ಟ್ ಉಪಯೋಗಿ. ಎಷ್ಟು ಜನರು ಚಾನೆಲ್ ನೋಡುತ್ತಾರೆ ಎಂಬುದರ ಆಧಾರದ ಮೇಲೆ ಅವರು ತಮ್ಮೊಳಗೆ ವ್ಯವಹಾರ ನಡೆಸಬಹುದು. ಟಿವಿ ಜಾಹೀರಾತು ಕೊಡುವ ಕಂಪನಿಗಳಿಗೂ ಯಾವ ಚಾನೆಲ್ ಯಾವ ಹೊತ್ತಿನಲ್ಲಿ ಜನ ನೋಡುತ್ತಾರೆ ಎಂದು ಈ ವ್ಯವಸ್ಥೆಯಿಂದ ತಿಳಿಯುತ್ತದೆ. ಹಾಗಾದರೆ ಯಾರಾದರೂ ಇದನ್ನು



ಯಾಕೆ ವಿರೋಧಿಸಬೇಕು? ಕೇಬಲ್ ಟಿವಿ ವಿತರಕರು ಮುಷ್ಕರ, ವಿರೋಧಿ ಪಕ್ಷಗಳ ಎಂ.ಪಿ.ಗಳು ಕೇಬಲ್ ಕಟ್ ಮಾಡುವ ಬೆದರಿಕೆ ಇತ್ಯಾದಿ ಎಲ್ಲಾ ಯಾಕೆ?

ಈ ಕಚಡಾ ಚಾನೆಲ್‌ಗಳು ಬೇಡಯ್ಯಾ ನಮಗೆ

ಈ ವಿಷಯದ ಆಳಕ್ಕೆ ಇಳಿದರೆ, ಇದು ಅಷ್ಟು ನೇರ ಸರಳ ಇಲ್ಲ ಎಂದು ತಿಳಿಯುತ್ತದೆ. 'ಸೆಟ್ ಆಫ್ ಬಾಕ್ಸ್' ಇಲ್ಲದೆ ಈಗಿನ ಕೇಬಲ್ ಟಿವಿ ವ್ಯವಸ್ಥೆ ಹೇಗೆ ನಡೀತಿದೆ? ಆದರಲ್ಲಿ ಏನು ಸಮಸ್ಯೆ ಇದೆ? ಇದನ್ನು ತಿಳಿಯಬೇಕು. ಉಪಗ್ರಹ ಟಿವಿ ಚಾನೆಲ್‌ಗಳು ಹಲವು ವಹಿವಾಟು ಮಾದರಿ ಅನುಸರಿಸುತ್ತವೆ. ಉಪಗ್ರಹ ಟಿವಿ ಚಾನೆಲ್ ತಂತ್ರಜ್ಞಾನದಲ್ಲಿ ಹಲವು ವಿಧಗಳಿವೆ. ಉಪಗ್ರಹ ಟಿವಿ ಚಾನೆಲ್‌ನ್ನು ಎಲ್ಲರಿಗೂ ಸಿಗುವಂತೆ ಪ್ರಸಾರ ಮಾಡಬಹುದು. ಇಲ್ಲವೆ 'ಸೆಟ್ -ಆಫ್ ಬಾಕ್ಸ್' ಇದ್ದರೆ ಮಾತ್ರ ಸಿಗುವಂತೆ ಪ್ರಸಾರ ಮಾಡಬಹುದು.ಇದಕ್ಕೆ ಅನುಕ್ರಮವಾಗಿ 'ಉಚಿತ' ಮತ್ತು 'ವಂತಿಗೆ ಚಾನೆಲ್‌ಗಳು ಎನ್ನುತ್ತಾರೆ. ಈಗ ಎರಡೂ ರೀತಿಯ ಚಾನೆಲ್‌ಗಳನ್ನು ಕೇಬಲ್ ವಿತರಕರು ವಿತರಣೆ ಮಾಡುತ್ತಾರೆ. ಕೇಬಲ್ ವಿತರಕರು ಅಗತ್ಯವಾದ ಆಂಟೆನಾವನ್ನು ಮತ್ತು ಸೆಟ್-ಆಫ್ ಬಾಕ್ಸ್‌ಗಳನ್ನು ಇಟ್ಟುಕೊಂಡಿರುತ್ತಾರೆ. ಅವರು ತಾವು ವಿತರಿಸುವ ವ್ಯಾಪ್ತಿಯಲ್ಲಿರುವ 200-300 ಬಳಕೆದಾರರಿಗೆ ಎಲ್ಲಾ ಚಾನೆಲ್‌ಗಳನ್ನು ಕೊಟ್ಟು ನಿಗದಿತ ತಿಂಗಳ ವಂತಿಗೆ(ರೂ100-175 ರೂ.) ವಸೂಲಿ ಮಾಡುತ್ತಾರೆ. ವಂತಿಗೆ ಚಾನೆಲ್‌ಗಳಿಗೆ ಕೇಬಲ್ ವಿತರಕರು ಎಷ್ಟು ಜನ ಈ ಚಾನೆಗಳನ್ನು ನೋಡುತ್ತಾರೆ ಎಂಬ ಒಂದು ನಿಗದಿತ ಸಂಖ್ಯೆಯ ಆಧಾರದ ಮೇಲೆ 'ವಂತಿಗೆ' ಕೊಡುತ್ತಾರೆ. ವಿವಾದಗಳು ಬಂದಿರುವುದು ಈ ಸಂಖ್ಯೆ ಮೇಲೆ 'ವಂತಿಗೆ' ಚಾನೆಲ್ ಮಾಲಿಕರು ಕೇಬಲ್ ವಿತರಕರ ಬಳಕೆದಾರ ಸಂಖ್ಯೆಯಷ್ಟು (ಸುಮಾರು 200-300) ಪೂರ್ತಿ 'ವಂತಿಗೆ' ಕೊಡಬೇಕೆನ್ನುತ್ತಾರೆ. ಯಾವುದೇ ನಿರ್ದಿಷ್ಟ 'ವಂತಿಗೆ' ಚಾನೆಲ್ ನೋಡುವವರು ಸಾಮಾನ್ಯವಾಗಿ ಬಳಕೆದಾರರ ಒಂದು ಭಾಗ ಮಾತ್ರ. ಉದಾಹರಣೆಗೆ ಈಗ 'ಸ್ಟಾರ್ ನ್ಯೂಸ್' ಒಂದು ವಂತಿಗೆ ಚಾನೆಲ್. ಒಂದು ವಠಾರದಲ್ಲಿ ಕಾಲುಭಾಗ 'ಸ್ಟಾರ್ ನ್ಯೂಸ್' ನೋಡಬಹುದು ಅಷ್ಟೇ. ಒಟ್ಟಾರೆಯಾಗಿ ಇಂಗ್ಲೀಷ್ ಚಾನೆಲ್‌ಗಿಂತ ಭಾರತೀಯ ಭಾಷೆ ನೋಡುವುದು ಹೆಚ್ಚು. ಈ ವಂತಿಗೆ ಚಾನೆಲ್‌ಗಳು ಕೇಬಲ್ ವಿತರಕರಿಗೂ ಬಳಕೆದಾರರ ನಡುವೆ ಸಹ ವಿವಾದಕ್ಕೆ ಕಾರಣ ವಾಗಿದೆ. ವಂತಿಗೆ ಚಾನೆಲ್ ಹೆಸರಲ್ಲಿ ಕೇಬಲ್ ವಿತರಕರು ಬಳಕೆದಾರನ ತಿಂಗಳ ವಂತಿಗೆ ಮನಸ್ಸು ಬಂದಂತೆ ಹೆಚ್ಚಿಸುತ್ತಾ ಬಂದಿದ್ದಾರೆ. '50 ಚಾನೆಲ್ ಕೊಡ್ತಾ ಇದ್ದೇವೆ ಸಾರ್, ಆದರಲ್ಲಿ 20 ವಂತಿಗೆ ಚಾನೆಲ್‌ಗಳು. ನಮಗೇನು ಗಿಟ್ತಾ ಇಲ್ಲಾ ಸಾರ್' ಕೇಬಲ್ ವಿತರಕನ ವಾದ. ನಾವು 5-6 ಚಾನೆಲ್ ಮಾತ್ರ ನೋಡುವುದು. ಉಳಿದದ್ದೆಲ್ಲಾ ಕಚಡಾ ಚಾನೆಲ್ ಗಳು ಬೇಡಯ್ಯಾ ನಮಗೆ, ಕಿತ್ತುಹಾಕಿಬಿಡು. ನಿನ್ನ ವಂತಿಗೆ ಚಾನೆಲ್‌ಗಳು ನಮಗೆ ಬೇಕಾಗಿಲ್ಲ. ಇದು ಬಳಕೆದಾರನ ವಾದ.


ವಿತರಕ ಚಾನೆಲ್ ಜಾಹಿರಾತುದಾರ ಹಿತಾಸಕ್ತಿಗಳು

ಸದ್ಯಕ್ಕೆ ಕೇಬಲ್ ಚಾನೆಲ್‌ಗಳಲ್ಲಿ ಉಚಿತ ಚಾನೆಲ್‌ಗಳು ಹೆಚ್ಚು, ಆದರೆ ಕ್ರಮೇಣ ವಂತಿಗೆ ಚಾನೆಲ್‌ಗಳು ಹೆಚ್ಚಾಗುತ್ತಾ ಹೋದ ಹಾಗೆ ಕೇಬಲ್ ವಿತರಕನ ವಹಿವಾಟು ಏರು ಪೇರು ಆಗಬಹುದು. ಈಗ ಕೇಬಲ್ ವಿತರಕನ ಮುಖ್ಯ ಖರ್ಚು ಆಂಟೆನಾ, ಕೇಬಲ್, ಸಿಬ್ಬಂದಿ ವೆಚ್ಚ. ಆದರೆ ವಂತಿಗೆ ಚಾನೆಲ್‌ಗಳು ಹೆಚ್ಚಾದಂತೆ 'ಸೆಟ್-ಅಪ್ ಬಾಕ್ಸ್' ಗಳು ಮತ್ತು ವಂತಿಗೆ ಆತನ ವೆಚ್ಚದ ಮುಖ್ಯ ಭಾಗವಾಗಬಹುದು. ಸದ್ಯಕ್ಕೆ ಈ ಖರ್ಚನ್ನು ಆತ ಬಳಕೆದಾರನಿಗೆ ವರ್ಗಾಯಿಸುತ್ತಿದ್ದಾನೆ. ಆದರೆ ಬಳಕೆದಾರನ ತಿಂಗಳ ವಂತಿಗೆ ಹೆಚ್ಚಿಸುವುದಕ್ಕೆ ಮಿತಿಗಳಿವೆ. ನಾವು ನೋಡದ ಚಾನೆಲ್‌ಗಳಿಗೆ ನಾವು ಯಾಕೆ ದುಡ್ಡು ಕೊಡಬೇಕು ಅಂತ ವಿರೋಧ ಬೀಳತಾ ಇದೆ.



ಈ ಕೇಬಲ್ ನಾಟಕದಲ್ಲಿ ಇನ್ನೊಬ್ಬ ಪಾತ್ರಧಾರಿ ಉಪಗ್ರಹ ಟಿವಿ ಚಾನೆಲ್‌ಗಳಿಗೆ ಜಾಹಿರಾತು ಕೊಡುವ ಕಂಪನಿಗಳು. ಜಾಹಿರಾತುದಾರ ಕಂಪನಿಗಳು ಚಾನೆಲ್‌ಗಳಿಗೆ (ಉಚಿತ ಅಥವಾ ವಂತಿಗೆ ಚಾನೆಲ್ ಇವೆರಡಕ್ಕೂ) ಜಾಹಿರಾತು ಕೊಡುವಾಗ ಚಾನೆಲ್‌ನ ನೋಡುಗರೆಷ್ಟು ಎಂಬುದು ಮುಖ್ಯ ಅಂಶ. ಜಾಹಿರಾತು ದರಗಳು ನೋಡುಗರ ಸಂಖ್ಯೆಗೆ ನೇರವಾಗಿ ಸಂಬಂಧಿಸಿರುತ್ತವೆ. ಆದರೆ ಈಗ 'ಉಚಿತ' ಅಥವಾ 'ವಂತಿಗೆ' ಎರಡೂ ಚಾನೆಲ್‌ಗಳ ಜಾಹಿರಾತು ದಾರರಿಗೆ ನೋಡುಗರ ಸಂಖ್ಯೆ ನಿರ್ಧರಿಸುವ ಒಂದೇ ದಾರಿಯೆಂದರೆ 'ನೋಡುಗರ ಸರ್ವೆ'ಗಳು. ಈ ನೋಡುಗರ ಸರ್ವೆಗಳನ್ನು ಸ್ವತಂತ್ರ ಏಜೆನ್ಸಿಗಳು ನಡೆಸುತ್ತವೆ. ಚಾನೆಲ್ ಹಲವು ಪ್ರಮುಖ ಕಾರ್ಯಕ್ರಮಗಳ ನೋಡುಗರೆಷ್ಟು ಎಂದು ಅದು ನಿರ್ಧರಿಸಲು ಪ್ರಯತ್ನಿಸುತ್ತದೆ. ಆದರೆ ಈ ಅಂಕಿ-ಸಂಖ್ಯೆಗಳು ಇನ್ನೂ ನಂಬಲರ್ಹ ಸಂಖ್ಯೆಗಳಲ್ಲ, ಸರ್ವೆ ವಿಧಾನವೂ ಅಷ್ಟು ನಿಖರವಾಗಿರುವುದಿಲ್ಲ. ಅದರ ಮೇಲೆ ಚಾನೆಲ್ ಗಳು ಹಿಂಬಾಗಿಲಿಂದ ಈ ಸರ್ವೆ ವರದಿಗಳನ್ನು ತಮ್ಮ ಅನುಕೂಲಕ್ಕೆ ಸರಿಯಾಗಿ ಬರುವಂತೆ ಪ್ರಭಾವ ಬೀರುತ್ತವೆ ಎಂಬ ಹಲವು ಹಗರಣಗಳು ಈಗಾಗಲೇ ಬಯಲಿಗೆ ಬಂದಿವೆ.

ಬಳಕೆದಾರ- ಕೇಬಲ್ ವಿತರಕ - ಟಿವಿ ಚಾನೆಲ್‌ಗಳು - ಜಾಹೀರಾತುದಾರ - ಈ ಎಲ್ಲರ ಹಿತಾಸಕ್ತಿಗಳಿಗೆ 'ಸೆಟ್-ಅಪ್- ಬಾಕ್ಸ್' ಉತ್ತಮ ಉತ್ತರ ಎಂದು ಬಿಂಬಿಸಲು ಸರ್ಕಾರ ಪ್ರಯತ್ನಿಸುತ್ತಿದೆ. ಆದರೆ ಇದು ನಿಜವಲ್ಲ. ಈ ವ್ಯವಸ್ಥೆಯಲ್ಲಿ ಹಲವು ಹುಳುಕುಗಳಿವೆ. ಇವು ಈ ಎಲ್ಲಾ 'ಪಕ್ಷ'ಗಳಿಗೆ ಸಮಾನ ಅನುಕೂಲ ಕೊಡುವುದಿಲ್ಲ. ಕೆಲವರಿಗೆ ಹೆಚ್ಚು ಅನುಕೂಲಗಳನ್ನು ಕೊಡುತ್ತವೆ. ಕೆಲವರಿಗೆ ಪ್ರತಿಕೂಲವಾಗಿವೆ.



ಬಳಕೆದಾರನಿಗೆ ನಾಮ!

'ಸೆಟ್-ಅಪ್-ಬಾಕ್ಸ್‌ಗಳು ಜಾರಿಯಾದ ನಂತರವೂ ಬಳಕೆದಾರ ಕೊಡಬೇಕಾದ ತಿಂಗಳ ವೆಚ್ಚ ಏರುತ್ತಲೇ ಹೋಗುವ ಸಾಧ್ಯತೆ ಹೆಚ್ಚು. ಬಳಕೆದಾರ ತನಗೆ ಬೇಕಾದ ಚಾನೆಲ್‌ಗಳನ್ನು ಮಾತ್ರ ಆಯ್ಕೆ ಮಾಡಬಹುದು ಎಂಬುದು ಹೆಚ್ಚಿನ ಮಟ್ಟಿಗೆ ನಿಜವಲ್ಲ. ಇದಕ್ಕೆ ಮುಖ್ಯ ಕಾರಣ ಚಾನೆಲ್‌ಗಳ 'ಗುಚ್ಛ'. ಉದಾಹರಣೆಗೆ ಸ್ಟಾರ್ ಟಿವಿ ಗುಂಪಿನ ಎಲ್ಲಾ ಚಾನೆಲ್‌ಗಳು ಒಂದೆ 'ಗುಚ್ಛ' ದಲ್ಲಿ ಬರುತ್ತವೆ. ಸ್ಟಾರ್ ನ್ಯೂಸ್, ಸ್ಟಾರ್ ಸ್ಪೋರ್ಟ್ಸ್, ಸ್ಟಾರ್ ವರ್ಲ್ಡ್- ಇವುಗಳಿಗೆ ಪ್ರತ್ಯೇಕ ವಂತಿಗೆಗಳಿಲ್ಲ. ಬಳಕೆದಾರ ಇಡೀ 'ಗುಚ್ಛ' ತೆಗೆದುಕೊಳ್ಳಬೇಕು. ಇದೇ ರೀತಿ ಝೀ ಟೀವಿಯದ್ದು ಇನ್ನೊಂದು ಗುಚ್ಛ. ಝಿ ಮುಖ್ಯ ಚಾನೆಲ್ ಮಾತ್ರ ಬೇಕು. ಝಿ ಮ್ಯೂಸಿಕ್, MGM, ಝಿ ನ್ಯೂಸ್ - ಇವೆಲ್ಲಾ ಬೇಡ ಎನ್ನುವಂತಿಲ್ಲ. ಸಾಮಾನ್ಯವಾಗಿ ಒಬ್ಬ ನಿರ್ದಿಷ್ಟ ಬಳಕೆದಾರ ಈ ಗುಚ್ಛದಲ್ಲಿ ಒಂದು ಅಥವಾ ಎರಡು ಚಾನೆಲ್ ಮಾತ್ರ ನೋಡುತ್ತಾನೆ. ಟಿವಿ ಚಾನೆಲ್ ಕಂಪನಿಗಳು ಜನಪ್ರಿಯ ಮತ್ತು ಅಷ್ಟೇನೂ ಜನಪ್ರಿಯವಲ್ಲದ ಚಾನೆಲ್‌ಗಳ ಗುಚ್ಛ ತಯಾರಿಸುತ್ತವೆ. ಅಲ್ಲದೆ 'ಸೆಟ್-ಅಪ್-ಬಾಕ್ಸ್'ಗಳು ಸಾರ್ವತ್ರಿಕವಾದರೆ ಈಗ ಇರುವ ಮೊತ್ತ ಚಾನೆಲ್‌ಗಳು 'ವಂತಿಗೆ' ಚಾನೆಲ್‌ಗಳಾಗಿ ಬದಲಾಯಿಸಲು ಆಸಕ್ತಿ ತೋರಿಸಬಹುದು. ಅಮೇರಿಕಾ, ಯುರೋಪುಗಳಲ್ಲಿ ಹೀಗೆ ಆಗಿದೆ. ಈಗ ಅಲ್ಲಿ ಹೆಚ್ಚು ಕಡಿಮೆ ಉಪಗ್ರಹ ಟಿವಿ ಉಚಿತ ಚಾನೆಲ್‌ಗಳು ಇಲ್ಲವೇ ಇಲ್ಲ.

ಸತತ ಬೆಲೆ ಏರಿಕೆಗೆ ನಾಂದಿ

ಅಲ್ಲದೆ ಸೆಟ್-ಅಪ್-ಬಾಕ್ಸ್, ವೆಚ್ಚ ನಾಲ್ಕು ಸಾವಿರದಿಂದ ಹತ್ತು ಸಾವಿರದವರೆಗೆ ಇರುತ್ತದೆ. ಇದು ಹೆಚ್ಚಿನ ಮನೆಗಳಲ್ಲಿರುವ ಟಿವಿಗಳಿಗಿಂತ ಹೆಚ್ಚು! ಕೇಬಲ್ ವಿತರಕ ಇದನ್ನು ಬಳಕೆದಾರನಿಗೆ ಸರಬರಾಜು ಮಾಡಿ, ಅದರ ಮೇಲೆ ತಿಂಗಳ ಬಾಡಿಗೆ ಹಾಕಬಹುದು (ಟೆಲಿಫೋನ್ ಇದ್ದಂಗೆ). ಕೇಬಲ್ ವಿತರಕನಿಗೆ ಬೆಲೆ ಹೆಚ್ಚಿಸಲು ಇನ್ನೊಂದು ನೆಪ. ಈಗ ಸೆಟ್-ಅಪ್ ಬಾಕ್ಸ್‌ಗಳಿಗೆ ಈಗ ನಿಗದಿತ ಒಂದೆ ಸ್ಟಾಂಡರ್ಡ್ ಇಲ್ಲ. ಬೇರೆ ಬೇರೆ ಚಾನೆಲ್ ಗುಚ್ಛಗಳಿಗೆ ಬೇರೆ ಬೇರೆ ಸೆಟ್-ಅಪ್ ಬಾಕ್ಸ್ ಅಗತ್ಯ ಬೀಳುವ ಸಾಧ್ಯತೆ ಇದೆ. ಇವು ಪ್ರದೇಶದಿಂದ ಪ್ರದೇಶಕ್ಕೂ ಬೇರೆಯಾಗಬಹುದು. ತಂತ್ರಜ್ಞಾನ ಉತ್ತಮವಾದಂತೆ ಬದಲಾಗುತ್ತಾ ಹೋಗಬಹುದು. ಅಮೇರಿಕಾ-ಯುರೋಪುಗಳಲ್ಲಿ ಈಗಾಗಲೇ ಇರುವ ಪ್ರತಿ ಚಾನೆಲ್ ಯಾವ ಅವಧಿಯಲ್ಲಿ ಎಷ್ಟು ಅವಧಿ ಚಾನೆಲ್ ನೋಡಿದರು ಎಂದು ಮೀಟರ್ ಮಾಡುವ ಸೆಟ್-ಅಪ್ ಬಾಕ್ಸ್‌ಗಳು ಬರಬಹುದು. ಸೆಟ್-ಅಪ್-ಬಾಕ್ಸ್‌ಗಳ ಬಾಡಿಗೆ ಕೇಬಲ್ ವಿತರಕರಿಗೆ ಒಂದು ಶಾಶ್ವತ ಆದಾಯದ ಮೂಲವಾಗಬಹುದು. ವಂತಿಗೆ ಚಾನೆಲ್‌ಗಳ ವಂತಿಗೆ ಚಾನೆಲ್ ಮತ್ತು ಕೇಬಲ್ ವಿತರಕರ ಗ್ಯಾಂಗ್ ನಿರ್ಧರಿಸುತ್ತದೆ. ಅದನ್ನು ಏರಿಸುತ್ತಾ ಹೋಗುವ (ಬೇರೆ ಬೇರೆ ನೆಪಗಳು ಆಧಾರದಲ್ಲಿ - ಚಾನೆಲ್‌ಗೆ ಈಗ ಲಾಭವಿಲ್ಲ. ಜಾಹೀರಾತು ಬರುತ್ತಿಲ್ಲ, ತಂತ್ರಜ್ಞಾನ ಉತ್ತಮಪಡಿಸಿದ್ದೇವೆ. - ಇತ್ಯಾದಿ) ಸಾಧ್ಯತೆ ಹೆಚ್ಚು ಈಗಲೂ ಬಳಕೆದಾರನಿಗೆ ಕೇಬಲ್ ತಿಂಗಳ ವಂತಿಗೆ ನಿರ್ಧಾರದಲ್ಲಿ ಪಾತ್ರವಿಲ್ಲ. ಆ ವಠಾರದಲ್ಲಿ ಎಷ್ಟಿದೆಯೋ ಅಷ್ಟು ಕೊಡಬೇಕು. ದೈತ್ಯ ಬಲವಿರುವ ಚಾನೆಲ್ ಕಂಪನಿಗಳ ಪಾತ್ರ ಇದರಲ್ಲಿ ಹೆಚ್ಚಿರುವ ಸಾಧ್ಯತೆ ಹೆಚ್ಚು.

ಉಳಿದ ಮೂವರಿಗೆ - ಕೇಬಲ್ ವಿತರಕ, ಚಾನೆಲ್‌ಗಳು, ಜಾಹೀರಾತುದಾರನಿಗೆ ಅನುಕೂಲವಾಗುವ ಸಂಭವ ಹೆಚ್ಚು. ಹಲವು ಚಾನೆಲ್ ಕಂಪನಿಗಳು ಕೇಬಲ್-ವಿತರಕ ವಹಿವಾಟಿನಲ್ಲಿ ಇವೆ. ಉದಾಹರಣೆಗೆ ಝಿ ಟಿವಿ ಸಿಟಿ-ಕೇಬಲ್ ಮೂಲಕ ಕೇಬಲ್ ವಿತರಕವೂ ಆಗಿದೆ. ಇವು ಸೆಟ್-ಆಫ್-ಬಾಕ್ಸ್' ಗಳಸಿ ಇಂಟರ್‌ನೆಟ್, ಫೋನು, ಮತ್ತು ವಿಡಿಯೋ ಸೇವೆ ವಂತಿಗೆ ಆಧಾರದ ಮೇಲೆ ವಹಿವಾಟಿಗೆ ಇಳಿಯಬಹುದು. ಇದರಲ್ಲೆಲ್ಲ ನಿಜವಾದ ಅನುಕೂಲ ಪಡೆಯುವುದು ಎಂದರೆ ಜಾಹೀರಾತುದಾರರು. ಅವರಿಗೆ ಚಾನೆಲ್ (ಕನಿಷ್ಟ ಚಾನೆಲ್ ಗುಚ್ಛದ) ನಿಜವಾದ ನೋಡುಗರ ಸಂಖ್ಯೆ

ಸಿಗುತ್ತದೆ. ಅದಕ್ಕೆ ಸರಿಯಾಗಿ ಅವರು ಜಾಹೀರಾತು ವೆಚ್ಚ ನಿರ್ಧರಿಸಬಹುದು. ದೇಶ-ವಿದೇಶಗಳ ಎಲ್ಲಾ ಪ್ರಮುಖ ಪ್ರಭಲ ಕಂಪನಿಗಳು ಜಾಹೀರಾತುದಾರರು. ಅವರು ಹೆಚ್ಚು ಹೆಚ್ಚು ಮಾಹಿತಿ ಕೊಡಲು 'ಸೆಟ್-ಅಫ್-ಬಾಕ್ಸ್'ಗೆ ಒತ್ತಡ ಹೇರಬಹುದು. ಅವರ ಜಾಹೀರಾತು ವೆಚ್ಚ ಕಡಿಮೆಯಾಗಿ, ಅವರಿಗೆ ಬೇಕಾದ 'ನೋಡುಗರನ್ನು' ಒದಗಿಸುವ ಸಾಧ್ಯತೆ ಒದಗಿಸುತ್ತದೆ.

ಕಾನೂನು ಯಾಕೆ ಬೇಕು?

ಇವೆಲ್ಲಾ ಸರಿ, ಆದರೆ ಇದಕ್ಕಾಗಿ ಕಾನೂನು ಯಾಕೆ ಬೇಕು? ಎಂದು ಯಾರೋ ಕೇಳದ ಉತ್ತರಿಸದ ಪ್ರಶ್ನೆ. ಇದು ಕೇಬಲ್ ವಿತರಕ-ಚಾನೆಲ್‌ಗಳಿಗೆ ಬೇಕಾದರೆ ಅವರು ಚರ್ಚೆ ಮಾಡಿ 'ಸೆಟ್-ಅಫ್-ಬಾಕ್ಸ್'ಗಳನ್ನು ಜಾರಿಗೆ ತರಬಹುದಲ್ಲ. 'ಸೆಟ್-ಅಫ್-ಬಾಕ್ಸ್' ಹಾಕಬಾರದು ಅಂತ ಏನೂ ಕಾನೂನು ಇಲ್ಲವಲ್ಲ! ಸರ್ಕಾರ ಆರ್ಥಿಕ-ವಾಣಿಜ್ಯ ವಹಿವಾಟಿನಲ್ಲಿ ತಲೆಹಾಕಬಾರದು. ಈಗ ಇರುವಲ್ಲಿ ಕಾಲ್ತೆಗೆಯಬೇಕು ಎಂದು 'ಮುಕ್ತ-ಮಾರು ಕಟ್ಟೆ' ಭಾಷಣ ಬಿಗಿಯುವ ಈ ಕಂಪನಿಗಳು ಕೇಬಲ್ ಮಸೂದೆ ತರಬೇಕು ಎಂದು ಸರ್ಕಾರದ ಹಿಂದೆ ಯಾಕೆ ಬಿದ್ದಿವೆ.' ಮೊದಲ ನೋಟಕ್ಕೆ ಕೇಬಲ್ ವಿತರಕರು ಈ ಬಗ್ಗೆ ಒತ್ತಡ ಹೇರುವಂತೆ ಕಂಡರೂ, ಪರದೆಯ ಹಿಂದೆ ಚಾನೆಲ್ ಮತ್ತು ಜಾಹೀರಾತು ಕಂಪನಿಗಳ ಕೂಟಕ್ಕೆ ಕೆಲಸ ಮಾಡುತ್ತಿವೆ. ಅದಕ್ಕೆ ಎನ್.ಡಿ.ಎ ಸರ್ಕಾರಕ್ಕೆ ಈ ಮಸೂದೆ ಪಾಸು ಮಾಡಲು ಇದ್ದ ತರಾತುರಿ. ಈ ಮೂವರು ಸೇರಿ ಬಳಕೆದಾರನಿಂದ ಹೆಚ್ಚೆಚ್ಚು ದುಡ್ಡು ವಸೂಲಿ ಮಾಡುವುದು ನಿಜವಾದ ಉದ್ದೇಶ. ಆದರೆ ಇದನ್ನು ಬಳಕೆದಾರನಿಗೆ ಹೇಳುವುದು ಹೇಗೆ? ಅಲ್ಲದೆ ಈ ತ್ರಿವಳಿಗಳ ನಡುವೆ ಬಳಕೆದಾರನ ಲೂಟಿ ಮಾಡಿ ಸಾಮಾನ್ಯ ಆಸಕ್ತಿ ಇದ್ದ ಹಾಗೆ, ಪರಸ್ಪರ ಹಿತಾಸಕ್ತಿಗಳ ಘರ್ಷಣೆಯೂ ಇದೆ. ಆದ್ದರಿಂದ ಸರ್ಕಾರ ಈ 'ಮಧ್ಯವರ್ತಿ' ಪಾತ್ರ ವಹಿಸಬೇಕು. ಬಳಕೆದಾರ ಈ ವ್ಯವಸ್ಥೆ ವಿರುದ್ಧ ಸಿಡಿದೇಳಬಹುದು ಎಂಬ ಭಯವೂ ಇದೆ. ಆದ್ದರಿಂದ ಸರ್ಕಾರ, ಕಾನೂನು ತಮ್ಮ ಬೆಂಬಲಕ್ಕಿದ್ದರೆ ಹೆಚ್ಚು ಅನುಕೂಲ. 'ಕಾನೂನುಬದ್ಧ ಲೂಟಿ' ಒಳ್ಳೆಯದಲ್ಲವೆ?' ಎನ್‌ಡಿಎ ಸರ್ಕಾರ ಈ ತ್ರಿವಳಿಗಳ (ಅದರಲ್ಲೂ ದೊಡ್ಡ ಕಂಪನಿಗಳ) ಹಿತಾಸಕ್ತಿ ಕಾಪಾಡಲು ಹೊರಟಿದೆ. ಬಳಕೆದಾರನ ಹಿತಾಸಕ್ತಿ ಬಗ್ಗೆ ಅದಕ್ಕೆ ಕಾಳಜಿ ಇಲ್ಲ ಎಂದು ಮಸೂದೆ ಸ್ಪಷ್ಟಪಡಿಸುತ್ತದೆ. ಸೆಟ್-ಅಫ್-ಬಾಕ್ಸ್ ಸ್ಟ್ಯಾಂಡರ್ಡ್ ಆಗಲಿ, ಬಳಕೆದಾರನ ವೆಚ್ಚದ ಬಗ್ಗೆ ನಿರ್ಬಂಧವಾಗಲಿ ಮಸೂದೆಯಲ್ಲಿ ಚಕಾರವಿಲ್ಲ. ಇದು ಮಾತ್ರವಲ್ಲ ಕೇಬಲ್ ವಿತರಕ-ಚಾನೆಲ್ ಲಾಬಿ ವಿರೋಧ ಪಕ್ಷ-ಹಾಗೂ ಪಾರ್ಲಿಮೆಂಟುಗಳಿಗೆ ಬೆದರಿಕೆ ಹಾಕುವಂತೆ ಪ್ರಚೋದಿಸಿದ್ದು ಸರ್ಕಾರವೇ. ಈ ಬಗ್ಗೆ ಬಳಕೆದಾರನ ಹಿತಾಸಕ್ತಿ ಬಗ್ಗೆ ಚರ್ಚೆ ನಡೆಸುವುದು ಸರ್ಕಾರಕ್ಕೆ ಬೇಕಿರಲಿಲ್ಲ. ○

ಅಂತು ಇಂತು ದುಡಿವ ಜನಕ್ಕೇ ಜಯ

ನೂರಾರು ಜನರನ್ನು ಹೊತ್ತಿದ್ದ ಲಾರಿ. ಅದರ ಹಿಂದೆ ಸಚಿವ ಮಲ್ಲಿಕಾರ್ಜುನ ನಾಗಪ್ಪನವರ ಕಾರು. ಸಚಿವರ ಹಿಂದೆ ಅವರ ಹಿಂಬಾಲಕರು, ಅಧಿಕಾರಿಗಳು ಮತ್ತು ಪೋಲೀಸರ ದಂಡು. ಗಂಗಾವತಿಯ ಸಿಂಗನಾಳ ಗ್ರಾಮದ ಹತ್ತಿರ ಸಚಿವರ ಮುಂದಿದ್ದ ಲಾರಿ ಗಕ್ಕನೆ ನಿಂತಿತು. ಒಮ್ಮೆಗೇ ಗೌಜು-ಗದ್ದಲ, ಘೋಷಣೆಗಳು ಮೊಳಗಿದವು. ಗಲಿಬಿಲಿಗೊಂಡ ಸಚಿವರು ಕಾರಿನಿಂದ ಕೆಳಗೆ ಇಳಿದರು. ರಸ್ತೆಯ ಮೇಲೆ ನೂರಾರು ಜನ ಕೃಷಿಕೂಲಿಕಾರರು. ಅವರದೆಲ್ಲಾ ಒಂದೇ ಪಟ್ಟು, ಸಚಿವರು ತಮ್ಮ ಕಾರ್ಯಕ್ರಮಕ್ಕೆ ಮೊದಲು ಬರಬೇಕು ಎಂಬುದು. ರಸ್ತೆಯಿಂದ ಕದಲದೆ ಅಡ್ಡ ನಿಂತ ಕೂಲಿಕಾರರ ಒತ್ತಡಕ್ಕೆ ಸಚಿವರು ತಲೆಬಾಗಲೇ ಬೇಕಾಯಿತು. ಕೃಷಿಕೂಲಿಕಾರರ ಹಿಂದೆ ಸಚಿವ ಮಲ್ಲಿಕಾರ್ಜುನ ನಾಗಪ್ಪ ಮತ್ತವರ ದಂಡು ಹೊರಟಿತು ಕೃಷಿಕೂಲಿಕಾರರ ನಿವೇಶನಗಳ ಹಕ್ಕು ಪತ್ರ ವಿತರಿಸುವ ಸಮಾರಂಭಕ್ಕೆ...

ಘಟನೆಯ ಹಿನ್ನೆಲೆ

ರಾಜ್ಯ ಕಂದಾಯ ಸಚಿವ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಮಂತ್ರಿಯಾದ ಮಲ್ಲಿಕಾರ್ಜುನ ನಾಗಪ್ಪನವರು ಸಿಂಗನಾಳ ಗ್ರಾಮದಲ್ಲಿ ಪಶುವೈದ್ಯ ಆಸ್ಪತ್ರೆ, ಯುವಕ ಮಂಡಳ, ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ಆಗಸ್ಟ್ 28 ರಂದು ಉದ್ಘಾಟನೆ ಮಾಡುವ ಕಾರ್ಯಕ್ರಮವಿತ್ತು. ಇದೇ ಕಾರ್ಯಕ್ರಮದಲ್ಲಿ ಕೃಷಿಕೂಲಿಕಾರರಿಗೆ ನಿವೇಶನಗಳ ಹಕ್ಕು ಪತ್ರ ನೀಡುವುದೂ ಇತ್ತು. ಈ ಸಮಾರಂಭವನ್ನು ಗ್ರಾಮದ ಶ್ರೀಮಂತ ಭೂಮಾಲೀಕರು ಸಂಘಟಿಸಿದ್ದರು.

ಆದರೆ ಭೂಮಾಲೀಕರಿಂದ ದಮನಕ್ಕೊಳಗಾಗಿದ್ದ ಕೃಷಿಕೂಲಿಕಾರರು ಅವರ ವಿರುದ್ಧ ಸೆಟೆದು ನಿಂತು ದಶಕಗಳಿಗೂ ಹೆಚ್ಚು ಕಾಲದಿಂದ ಹೋರಾಟ ನಡೆಸಿ ಪಡೆದ ಸೌಲಭ್ಯವನ್ನು ಅವರ ಕೈಕೆಳಗಿನ ಕಾರ್ಯಕ್ರಮದಲ್ಲಿ ಸ್ವೀಕರಿಸಲು ಇಚ್ಛಿಸಲಿಲ್ಲ. ತಾವು ವಾಸಿಸುವ, ತಮ್ಮದೇ ಜಾಗದಲ್ಲಿ, ತಾವು ಏರ್ಪಡಿಸುವ ಸಮಾರಂಭದಲ್ಲೇ ಹಕ್ಕು ಪತ್ರ ಪಡೆಯಬೇಕೆಂಬುದು ಕೃಷಿಕೂಲಿಕಾರರ ಬಯಕೆಯಾಗಿತ್ತು.

ಕೃಷಿಕೂಲಿಕಾರರ ಸ್ವಾಭಿಮಾನದ ಬದುಕಿಗೆ ದಾರಿ ದೀಪವಾದ ಪ್ರಾಂತ ಕೃಷಿಕೂಲಿಕಾರರ ಸಂಘಟನೆ ಮುಖಂಡರು ಸಚಿವರು ಭೇಟಿ ಮಾಡಿ ಕೂಲಿಕಾರರ ಇಚ್ಛೆಯನ್ನು ವ್ಯಕ್ತಪಡಿಸಿದ್ದಲ್ಲದೇ ಭೂಮಾಲೀಕರು ಏರ್ಪಡಿಸಿರುವ ಕಾರ್ಯಕ್ರಮದಲ್ಲಿ ಹಕ್ಕು ಪತ್ರಗಳನ್ನು ತಾವು ಸ್ವೀಕರಿಸುವುದಿಲ್ಲವೆಂದು ಘೋಷಿಸಿದರು. ಕೂಲಿಕಾರರ ಒತ್ತಡಕ್ಕೆ ಮಣಿದ ಸಚಿವರು 'ನಿಮ್ಮ ಕಾರ್ಯಕ್ರಮಕ್ಕೇ ಮೊದಲು ಬರುವೆ, ನಿಮ್ಮ ಪ್ರದೇಶದಲ್ಲಿ ಸಮಾರಂಭ ಏರ್ಪಡಿಸಿ. ಆಹ್ವಾನ ಪತ್ರಿಕೆ ಮುದ್ರಿಸಿ, ಜಿಲ್ಲಾಧಿಕಾರಿ ಗಳಿಗೆ ಮಾಹಿತಿ ಕೊಡಿ' ಎಂದು ತಿಳಿಸಿದರು. ಸಂತಸ ಗೊಂಡ ಕೂಲಿಕಾರರು ಒಂದೇ ದಿನದಲ್ಲಿ ಆಮಂತ್ರಣ ಪತ್ರ ಮುದ್ರಿಸಿ ಎಲ್ಲರಿಗೂ ಹಂಚಿಯೇ ಬಿಟ್ಟರು.

> **ಭೂಮಾಲೀಕರಿಂದ ದಮನಕ್ಕೊಳಗಾಗಿದ್ದ ಕೃಷಿಕೂಲಿಕಾರರು ಅವರ ವಿರುದ್ಧ ಸೆಟೆದು ನಿಂತು ದಶಕಗಳಿಗೂ ಹೆಚ್ಚು ಕಾಲದಿಂದ ಹೋರಾಟ ನಡೆಸಿ ಪಡೆದ ಸೌಲಭ್ಯವನ್ನು ಅವರ ಕೈಕೆಳಗಿನ ಕಾರ್ಯಕ್ರಮದಲ್ಲಿ ಸ್ವೀಕರಿಸಲು ಇಚ್ಛಿಸಲಿಲ್ಲ. ತಾವು ವಾಸಿಸುವ, ತಮ್ಮದೇ ಜಾಗದಲ್ಲಿ, ತಾವು ಏರ್ಪಡಿಸುವ ಸಮಾರಂಭದಲ್ಲೇ ಹಕ್ಕು ಪತ್ರ ಪಡೆಯಬೇಕೆಂಬುದು ಕೃಷಿಕೂಲಿಕಾರರ ಬಯಕೆಯಾಗಿತ್ತು.**

ಗಂಗಾವತಿ ತಾಲೂಕಿನ ನೂರಾರು ಎಕರೆ ನೀರಾವರಿ ಭೂಮಿಯ ಒಡೆತನ ಹೊಂದಿರುವ ಭೂಮಾಲೀಕರು ಸ್ವತಂತ್ರ ಬಂದು ಐದು ದಶಕ ಗತಿಸಿದರೂ ದಲಿತ, ಕೂಲಿಕಾರರ ಅಭಿವೃದ್ಧಿಗೆ ಕಿಂಚಿತ್ತೂ ಗಮನ ಹರಿಸಲಿಲ್ಲ. ಬದಲಾಗಿ ಸರ್ಕಾರದಿಂದ ಮಂಜೂರಾದ ಯೋಜನೆಗಳನ್ನು ತಮ್ಮ ಏಳಿಗೆಗಾಗಿಯೇ ಬಳಸಿಕೊಂಡರು. ದಯನೀಯ ಸ್ಥಿತಿ ತಲುಪಿದ್ದ ಕೂಲಿಕಾರರಿಗೆ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆ ಬೆನ್ನೆಲುಬಾಯಿತು. ಭೂಮಾಲಿಕರ ತಂತ್ರ-ಕುತಂತ್ರಗಳಿಗೆ ಪ್ರತಿರೋಧ ಒಡ್ಡಿದ ಸಂಘಟನೆ ಕೂಲಿಕಾರರಿಗೆ ವಸತಿ, ನೀರು, ಶೌಚಾಲಯ ಮತ್ತು ಭೂಮಿಗಾಗಿ ಹೋರಾಟ ನಡೆಸಿ ವಿಜಯ ಕಂಡಿತು.

ದೇವಸ್ಥಾನ ಏಳ್ಗೆಯ ನೆಪದಲ್ಲಿ ಹಣ ಲೂಟಿ, ಸ್ವಚ್ಛ ಗ್ರಾಮ ಯೋಜನೆಯಲ್ಲಿ ಬಡಕೂಲಿಕಾರರಿಗೆ ಅನ್ಯಾಯ ಮತ್ತು ದ್ವೇಷ ಸಾಧನೆಗಾಗಿ ಅವರ ಗುಡಿಸಲುಗಳಿಗೆ ಬೆಂಕಿ ಹಚ್ಚುವಂತಹ ಶ್ರೀಮಂತರ ಹೀನ ಕಾರ್ಯಗಳನ್ನು ಸಂಘಟನೆ ಬಯಲಿಗೆಳೆಯಿತು. ಇದರಿಂದ ಕುಪಿತಗೊಂಡ ಭೂಮಾಲೀಕರು ಕೂಲಿಕಾರರು ಮತ್ತು ಮುಖಂಡರ ಮೇಲೆ ಹಲ್ಲೆ, ಹತ್ಯೆ ಯತ್ನಗಳಿಗೆ ಮುಂದಾಗಿದ್ದಾರೆ. ಕೆಲವರಿಗೆ ಹಣ, ಹೆಂಡದ ಆಮಿಷವನ್ನೂ ಒಡ್ಡಿದೆ. ಇದಾವುದಕ್ಕೂ ಜಗ್ಗದ ಪ್ರಾಂತ ಕೃಷಿಕೂಲಿಕಾರರ ಸಂಘಟನೆ ಅವರೊಡನೆ ವರ್ಗ ಸಂಘರ್ಷಕ್ಕೆ ಇಳಿದಿದೆ. ಭೂಮಾಲೀಕರು ಅವರ ಮೇಲೆ ಕತ್ತಿ ಮಸೆಯುತ್ತಿದ್ದಾರೆ.

ಇಂತಹ ಸಂದರ್ಭದಲ್ಲೇ ಕೂಲಿಕಾರರು ತಮಗಿಂತ ಮೊದಲು ಕಾರ್ಯಕ್ರಮವನ್ನು ನಡೆಸುವುದನ್ನು ಸಹಿಸದ ಭೂಮಾಲೀಕರು ಇದನ್ನು ಹೇಗಾದರೂ ಮಾಡಿ ತಪ್ಪಿಸಬೇಕೆಂದು ತಂತ್ರ ಹೂಡಿದರು. ಒಂದು ಲಾರಿಯಷ್ಟು ಜನರನ್ನು ಸಂಘಟಿಸಿ, ಸಚಿವರಿಗೆ ತಮ್ಮ ಕಾರ್ಯಕ್ರಮದಲ್ಲಿ ಹೆಚ್ಚು ಜನ ಸೇರಿದ್ದಾರೆಂದು ತಿಳಿಸಿ ತಮ್ಮ ಸಮಾರಂಭಕ್ಕೆ ಕರೆದೊಯ್ದು, ಅಲ್ಲಿಯೇ ಸಮಯವನ್ನು ಕಳೆದು, ಕೂಲಿಕಾರರ ಸಮಾರಂಭ ರದ್ದಾಗುವಂತೆ ಮಾಡಬೇಕು ಎಂಬುದೇ ಅವರ ತಂತ್ರವಾಗಿತ್ತು.

ಭೂಮಾಲೀಕರ ಕುತಂತ್ರಗಳನ್ನು ಚೆನ್ನಾಗಿ ಅರಿತಿದ್ದ ಕೂಲಿಕಾರರು ಲಾರಿ ಸಮೇತ ಸಚಿವರನ್ನು ಅಡ್ಡಗಟ್ಟಿ ತಮ್ಮ ಸಮಾರಂಭಕ್ಕೆ ಮೊದಲು ಕರೆದೊಯ್ದರು. ಪೆಚ್ಚಾದ ಭೂಮಾಲೀಕರು ಕೈ ಕೈ ಹಿಸುಕಿಕೊಳ್ಳುವಂತಾಯಿತು. ಸಚಿವ ಮಲ್ಲಿಕಾರ್ಜುನ ನಾಗಪ್ಪನವರೊಂದಿಗೆ ಸ್ಥಳೀಯ ರಾಜಕೀಯ ಮುಖಂಡರು ಬೇರೆ ದಾರಿ ಕಾಣದೆ ವೇದಿಕೆ ಏರಬೇಕಾಗಿ ಬಂತು. ಕೃಷಿಕೂಲಿಕಾರರ ಮುಖಂಡರಾದ ಆರ್.ಕೆ.ದೇಸಾಯಿ, ಬಾಳಪ್ಪ, ಗಂಗಾಧರ, ಲಿಂಗಪ್ಪ ಹಣವಾಳ, ಅಮಿನಮ್ಮ ರಮೇಶ ಇನ್ನಿತರರು ಕೂಡ ವೇದಿಕೆ ಏರಿದರು.

ಸುಮಾರು 70 ಜನ ಕೃಷಿ ಕೂಲಿಕಾರಿಗೆ ನಿವೇಶನಗಳ ಹಕ್ಕು ಪತ್ರ ವಿತರಿಸಿ ಮಾತನಾಡುತ್ತಿದ್ದ ಸಚಿವ ಮಲ್ಲಿಕಾರ್ಜುನ ನಾಗಪ್ಪನವರು ಸ್ವಾತಂತ್ರ್ಯ ಬಂದು ಐವತ್ತು ವರ್ಷ ಕಳೆದರೂ ಬಡವರ ಸಮಸ್ಯೆಗಳ ಬಗೆ ಹರಿಯದಿರುವುದಕ್ಕೆ ವಿಷಾದ ವ್ಯಕ್ತಪಡಿಸಿದರು. ತಮ್ಮ ಸರ್ಕಾರ ಕೃಷಿಕೂಲಿಕಾರರಿಗೆ ಗುಂಪು ಮನೆ ಯೋಜನೆಯಡಿಯಲ್ಲಿ ಅವರು ವಾಸಿಸುವ ಸ್ಥಳದಲ್ಲೇ ಎಲ್ಲರಿಗೂ ಮನೆ ಕಟ್ಟಿಸಿಕೊಡುವ ಆಶ್ವಾಸನೆಯನ್ನು ಇದೇ ಸಂದರ್ಭದಲ್ಲಿ ಸಚಿವರು ನೀಡಿದರು. ಅವರ ಈ ಆಶ್ವಾಸನೆ ಕಾರ್ಯರೂಪಕ್ಕೆ ಯಾವಾಗ ಇಳಿಯುವುದೆಂದು ಕಾದು ನೋಡಬೇಕಾಗಿದೆ.

- ಚಂದ್ರಪ್ಪ ಹೊಸ್ಕೇರಾ

7ನೇ ರಾಜ್ಯ ಸಮ್ಮೇಳನದತ್ತ ಡಿ.ವೈ.ಎಫ್.ಐ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ಇದೀಗ ತನ್ನ 7ನೇ ರಾಜ್ಯ ಸಮ್ಮೇಳನದತ್ತ ಮುನ್ನಡೆಯತೊಡಗಿದೆ. ಸಮ್ಮೇಳನ ನಡೆಯುವ ಸ್ಥಳವಾದ ರಾಯಚೂರು ರಾಜ್ಯದ ಯುವಜನ ಚಳುವಳಿಗೆ ಸ್ಪಷ್ಟ ರೂಪವನ್ನು ನೀಡಿದ

ರಾಯಚೂರಿನಲ್ಲಿ ಸ್ವಾಗತ ಸಮಿತಿ ರಚನೆ

ಮಹತ್ವದ ಊರು. ಡಿ.ವೈ.ಎಫ್.ಐ ಎಂಬ ಹೊಸ ಹೆಸರಿನೊಂದಿಗೆ ನಾಮಕರಣಗೊಂಡು ಕೆಲಸವನ್ನು ಆರಂಭಿಸಿದ್ದು ರಾಯಚೂರಿನಿಂದಲೇ. ಅದುವರೆಗೂ ವಿವಿಧ ಪ್ರದೇಶಗಳಲ್ಲಿ Democretic Youth Organisation (DYO) ಎಂಬ ಹೆಸರಿನಿಂದ ಕೆಲಸ ಮಾಡುತ್ತಿದ್ದ ಸಂಗಾತಿಗಳೆಲ್ಲಾ 1980 ನವೆಂಬರ್ - 1ರಿಂದ 3ರವರೆಗೆ ಪಂಜಾಬಿನ ಲೂದಿಯಾನದಲ್ಲಿ ಜರುಗಿದ ಅಖಿಲ ಭಾರತ ಸಮ್ಮೇಳನ ಸಂವಿಧಾನವನ್ನು ಅಂಗೀಕರಿಸಿ ಘೋಷಿಸಿದ ಡಿ.ವೈ.ಎಫ್.ಐ ಕರ್ನಾಟಕದಲ್ಲಿ ಕಾರ್ಯಾರಂಭ ತನ್ನ ರಾಯಚೂರಿನಲ್ಲಿ ಸಂಘಟನಾ ಶಿಬಿರವನ್ನು ನಡೆಸುವುದರ ಮೂಲಕ ಕರ್ನಾಟಕದಲ್ಲಿ ಡಿ.ವೈ.ಎಫ.ಐ ಸಂಘಟನೆಗೆ ಚಾಲನೆ ನೀಡಿತು.

ಇದೀಗ ಡಿ.ವೈ.ಎಫ್.ಐ ತನ್ನ 7ನೇ ರಾಜ್ಯ ಸಮ್ಮೇಳನವನ್ನು ನಡೆಸಲು ನಿರ್ಧರಿಸಿರುವುದು ಅಲ್ಲಿಯ ಸಂಗಾತಿಗಳಿಗೆ ಸ್ಫೂರ್ತಿಯನ್ನುಂಟುಮಾಡಿದೆ. ಹಳೆಯ ನೆನಪುಗಳನ್ನು ಮೆಲುಕು ಹಾಕಲು ಸಹಾಯ ಮಾಡಿದೆ. ಅಂತಹ ಎಲ್ಲಾ ಗೆಳೆಯರ, ಹಿತೈಷಿಗಳ, ವಿವಿಧ ಸಂಘಟನೆಗಳ ಮುಖಂಡರುಗಳ ಸಮಾಲೋಚನಾ ಸಭೆಯೊಂದು 12-9-2002ರಂದು ರಾಯಚೂರಿನ ಕರ್ನಾಟಕ ಸಂಘದಲ್ಲಿ ಜರುಗಿತು.

ಸಭೆಯಲ್ಲಿ ಮಾಜಿ ಶಾಸಕರು, ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಖ್ಯಾತ ವಕೀಲರಾದ ಶ್ರೀ.ಎಂ.ನಾಗಪ್ಪನವರು ಮಾತನಾಡಿ ದೇಶದ ಇಂದಿನ ದುಸ್ಥಿತಿ ಬಗ್ಗೆ ಖೇದ ವ್ಯಕ್ತಪಡಿಸಿದರು. ಯುವಜನ ರಾಜ್ಯ ಸಮ್ಮೇಳನದ ಯಶಸ್ಸಿಗೆ ಎಲ್ಲಾ ರೀತಿಯ ಸಹಾಯ ನೀಡುವ ಭರವಸೆ ನೀಡಿದರು. ಸಭೆಯಲ್ಲಿ ಡಿ.ವೈ.ಎಫ್.ಐ ರಾಜ್ಯ ಉಪಾಧ್ಯಕ್ಷ ರಾದ ಎಸ್.ವೈ.ಗುರುಶಾಂತ್, ಕಾರ್ಯದರ್ಶಿ ಕೆ.ಮಹಾಂತೇಶ್, ನಿವೃತ್ತ ಪ್ರಾಚಾರ್ಯರಾದ ಎಸ್.ಕೆ.ಚಂದ್ರಶೇಖರಪ್ಪ, ವಿವಿಧ ತಾಲೂಕುಗಳಿಂದ ಆಗಮಿಸಿದವರು ಮಾತನಾಡಿ ಜಿಲ್ಲೆಯಲ್ಲಿ ನವೆಂಬರ್ 3ನೇ ವಾರದಲ್ಲಿ ನಡೆಯುವ ಯುವಜನರ ಸಮ್ಮೇಳನವನ್ನು ಯಶಸ್ವಿಗೊಳಿಸಲು ಶಕ್ತಿಮೀರಿ ಕೆಲಸ ಮಾಡುವ ಭರವಸೆ ನೀಡಿದರು. ಅಂದಾಜು ಖರ್ಚು-ವೆಚ್ಚ ಪಟ್ಟಿಯನ್ನು ಡಿ.ವೈ.ಎಫ್.ಐ ಜಿಲ್ಲಾ ಖಜಾಂಚಿ, ಸಿ.ಎಸ್.ನಾಡಗೌಡ ಸಭೆಯಲ್ಲಿ ಮಂಡಿಸಿದರು. ದೇವೇಂದ್ರಗೌಡ 'ಸ್ವಾಗತ ಸಮಿತಿ' ಪಟ್ಟಿಯನ್ನು ಮಂಡಿಸಿದರು. ಸಭೆಯು ಸುಮಾರು 150 ಕ್ಕೂ ಹೆಚ್ಚು ವಿವಿಧ ಕ್ಷೇತ್ರಗಳ ಗಣ್ಯರುಗಳನ್ನೊಳಗೊಂಡ ಸ್ವಾಗತ ಸಮಿತಿಯನ್ನು ಆಯ್ಕೆ ಮಾಡಿತು.

ಸ್ವಾಗತ ಸಮಿತಿ

ಗೌರವಾಧ್ಯಕ್ಷರು	ಶ್ರೀ.ಎಂ.ನಾಗಪ್ಪ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಮಾಜಿ ಶಾಸಕರು, ವಕೀಲರು
ಕಾರ್ಯಾಧ್ಯಕ್ಷರು	ಕೆ.ಸತ್ಯನಾರಾಯಣ, ಪತ್ರಕರ್ತರು
ಅಧ್ಯಕ್ಷರು	ಬಿ.ಲಿಂಗಪ್ಪ, ರೈತ ಮುಖಂಡರು
ಪ್ರಧಾನ ಕಾರ್ಯದರ್ಶಿ	ಜೆ.ಸುರೇಶ್, ವಿಮಾ ನೌಕರರ ಮುಖಂಡರು
ಸಂ.ಕಾರ್ಯದರ್ಶಿ	ಮಲ್ಲಯ್ಯಕಾಲಹಳ್ಳಿರೈತ ಮುಖಂಡರು
ಸಹ ಕಾರ್ಯದರ್ಶಿ	ಶಿವಮೂರ್ತಿ ತಿಡಿಗೋಳ್ ಡಿವೈಎಫ್‌ಐಜಿಲ್ಲಾ ಕಾರ್ಯದರ್ಶಿ
ಖಜಾಂಚಿ	ಹೆಚ್.ಶರ್ಫುದ್ದೀನ್ ಡಿವೈಎಫ್‌ಐ ಜಿಲ್ಲಾಧ್ಯಕ್ಷರು
ಸಹ ಖಜಾಂಚಿ	ಚನ್ನಬಸವಯ್ಯ ವಿಮಾ ನೌಕರರ ಮುಖಂಡರು

ರಾಜ್ಯದ ಪ್ರಥಮ ಕಮ್ಯುನಿಸ್ಟ್ ಸಿ.ಬಿ.ಮೊಣ್ಣಯ್ಯ ನಿಧನ

07.09.2002 ರಂದು ಬೆಂಗಳೂರಿನಲ್ಲಿ ಸಭೆ ಸೇರಿದ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ರಾಜ್ಯ ಕಾರ್ಯದರ್ಶಿ ಮಂಡಳಿಯು, ರಾಜ್ಯದ ಪ್ರಥಮ - ಕಮ್ಯುನಿಸ್ಟರಲ್ಲೊಬ್ಬರಾದ ಸಿ.ಬಿ.ಮೊಣ್ಣಯ್ಯನವರ ನಿಧನಕ್ಕೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಿತು.



ತನ್ನ 17ನೇ ವಯಸ್ಸಿನಲ್ಲಿ ಸ್ವಾತಂತ್ರ್ಯ ಚಳುವಳಿಲ್ಲಿ ಧುಮುಕಿದ ಸಿ.ಬಿ.ಮೊಣ್ಣಯ್ಯನವರು 1930 ರಲ್ಲಿ ಸ್ವಾತಂತ್ರ್ಯ ಚಳುವಳಿಯ ಭಾಗವಾಗಿ ಕೊಡಗು ಜಿಲ್ಲೆಯ ವಿರಾಜಪೇಟೆ, ಮಡಿಕೇರಿಗಳಲ್ಲಿ ಸೇಂದಿ, ಸಾರಾಯಿ ಅಂಗಡಿಗಳ ಪಿಕೆಟಿಂಗ್ ನಡೆಸಿದರು. ಆ ಸಂದರ್ಭದಲ್ಲಿ ಮೂವರು ಹೋರಾಟಗಾರರನ್ನು ಬಂಧಿಸಿದಾಗ, ಮಡಿಕೇರಿಯಲ್ಲಿ ಸಂಪೂರ್ಣ ಹರತಾಳವನ್ನು ನಡೆಸಿದುದು ಮಾತ್ರವಲ್ಲದೆ ಜೈಲಿಗೆ ಕರೆದುಕೊಂಡು ಹೋಗುವ ಹಾದಿಯಲ್ಲಿ ಅದ್ದೂರಿ ಸ್ವಾಗತ ಏರ್ಪಾಡು ಮಾಡಿದ್ದರು. ಇದಕ್ಕಾಗಿ ಅವರು ಶಾಲೆಯನ್ನೇ ತ್ಯಜಿಸಬೇಕಾಯಿತು. ಅವರನ್ನು ಶಾಲೆಯಿಂದಲೇ ತೆಗೆದು ಹಾಕಲಾಗಿತ್ತು.

ಆದರೂ ಧೃತಿಗೆಡದ ಮೊಣ್ಣಯ್ಯನವರು 1931, 32 ರಲ್ಲಿ ನಡೆದ ಅಸಹಕಾರ ಚಳುವಳಿಯಲ್ಲಿ ಸ್ವಯಂ ಸೇವಕರಾಗಿ ಹುಬ್ಬಳ್ಳಿ, ಶಿರಸಿ ಮೊದಲಾದ ಭಾಗಗಳಿಗೆ ತೆರಳಿ ಕರ ನಿರಾಕರಣೆಯಲ್ಲಿ ಭಾಗವಹಿಸುವಂತೆ ಜನರನ್ನು ಪ್ರೇರೇಪಿಸಿದರು. ಇದರಿಂದ ಜೈಲುವಾಸವನ್ನು ಅನುಭವಿಸಿದ ಅವರು ವಿಶ್ವವಿಖ್ಯಾತ ನಾಟಕಕಾರ ಜಾರ್ಜ್ ಬರ್ನಾಡ್ ಷಾ ಅವರ ಪುಸ್ತಕ ಓದಿ ಸಮಾಜವಾದದತ್ತ ಆಕರ್ಷಿತರಾದರು.

1936 ರ ಮಾರ್ಚಿಯಲ್ಲಿ ಲಕ್ನೋ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ ಮೊಣ್ಣಯ್ಯ ಅಲ್ಲಿ ದೊರೆತ 'ಕಮ್ಯುನಿಸ್ಟ್ ಪ್ರಣಾಳಿಕೆ'ಯ ಪ್ರತಿಗಳನ್ನು ಓದಿ, ಇತರರಿಗೆ ಹಂಚಿದರು. ಅಂದಿನ ಕಾಲದಲ್ಲಿ ಕಮ್ಯುನಿಸ್ಟ್ ಪ್ರಣಾಳಿಕೆ ಬಹಿಷ್ಕೃತ ಸಾಹಿತ್ಯವಾಗಿತ್ತು.

ಜನಜಾಗೃತಿ ಸಂಘ ಸ್ಥಾಪನೆ: 1937 ರಲ್ಲಿ ಬೆಂಗಳೂರಿನಲ್ಲಿ ನೆಲೆಸಿದ ಮೊಣ್ಣಯ್ಯನವರು ಕಮ್ಯುನಿಸ್ಟರಲ್ಲದೆ ಇತರರನ್ನು ಸೇರಿಸಿ ಹೋರಾಟ ನಡೆಸಲು ಜನಜಾಗೃತಿ ಸಂಘ ಸ್ಥಾಪಿಸಿದರು. ಹಾಗೂ ಅದರ ಕಾರ್ಯದರ್ಶಿಯಾದರು. ಬೆಂಗಳೂರು ಪುರಸಭೆ ಮನೆಗಂದಾಯ ಹೆಚ್ಚಿಸಿದಾಗ ಒಂದು ತಿಂಗಳ ಕಾಲ ನಗರದ ಎಲ್ಲಾ ಭಾಗಗಳಲ್ಲೂ ಜನಜಾಗೃತಿ ಸಂಘದ ವತಿಯಿಂದ ಸಭೆಗಳನ್ನು ಏರ್ಪಡಿಸಿದರು. ಕೊನೆಯಲ್ಲಿ ಪೌರ ಕಾರ್ಮಿಕರನ್ನೊಳಗೊಂಡ ಬೃಹತ್ ಮೆರವಣಿಗೆ ನಡೆಸಿ ಪುರಸಭಾ ಅಧ್ಯಕ್ಷರನ್ನು ಕಂಡು ಹೆಚ್ಚಿಸಿದ ಮನೆಗಂದಾಯ ಹಿಂತೆಗೆದು ಕೊಳ್ಳುವಂತೆ ಒತ್ತಾಯ ಮಾಡಬೇಕಾಗಿತ್ತು. ಅಷ್ಟರಲ್ಲಿ ಸರಕಾರವು ಆರು ತಿಂಗಳ ಕಾಲ ಸಭೆ, ಮೆರವಣಿಗೆಗಳ ಮೇಲೆ ಪ್ರತಿಬಂಧ ಹೇರಿತು.

ಅಂಡಮಾನ್‌ನಲ್ಲಿರುವ ರಾಜಕೀಯಕೈದಿಗಳನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿ 'ಅಂಡಮಾನ್ ಕೈದಿಗಳ ದಿನ'ವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಜನಜಾಗೃತಿ ಸಂಘದೊಂದಿಗೆ 'ನ್ಯಾಷನಲ್ ಯೂತ್ ಲೀಗ್' ಎಂಬ ಯುವಕ ಸಂಘವೂ ಸೇರಿ ಶಾಲಾ ಕಾಲೇಜುಗಳಲ್ಲಿ ಮುಷ್ಕರ ನಡೆಸಿದರು. ಈ ಸಂದರ್ಭದಲ್ಲಿ ಮೊಣ್ಣಯ್ಯ ಮತ್ತಿತರರು ಬಂಧಿತರಾದರು.

ಅತ್ಯಂತ ಕಠಿಣ ಸಂದರ್ಭದಲ್ಲಿ ಕಮ್ಯುನಿಸ್ಟ್ ಸಂಘಟನೆಯಲ್ಲಿ ತೊಡಗಿದ ಸಿ.ಬಿ.ಮೊಣ್ಣಯ್ಯನವರಿಗೆ ಸಿಪಿಐ(ಎಂ) ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಿದೆ. ಸಿಪಿಐ(ಎಂ) ನ ಕೊಡಗು ಜಿಲ್ಲಾ ಘಟಕ ಅವರ ಅಂತ್ಯಕ್ರಿಯೆಯ ಕಾರ್ಯಗಳಲ್ಲಿ ಭಾಗವಹಿಸಿದೆ.


- ರೇಖಾಚಿತ್ರ ನವಕರ್ನಾಟಕ

......ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟ

ಪುಟ 7 ರಿಂದ

ಎಂದು ನೀವು ಹೇಳಿದ್ದೀರಿ? ನೀವು ಈ ಬೇಡಿಕೆಯಿಡಲು ಕಾರಣವೇನು?

● ನಾನು ಹೇಳಿದಂತೆ, ರಾಜ್ಯದಲ್ಲಿ ಪರಿಸ್ಥಿತಿ ನಿಜವಾಗಿ ಕೆಟ್ಟಿದೆ. ಇನ್ನೊಂದು ಕಡೆ ಈಗಿನ ರಾಜ್ಯ ಸರಕಾರಕ್ಕೆ ಮುಕ್ತ ಹಾಗೂ ನ್ಯಾಯಪೂರ್ಣ ಚುನಾವಣೆ ನಡೆಸುವ ಸಾಮರ್ಥ್ಯವಿದೆಯೆಂಬ ನಂಬಿಕೆ ಜನಗಳಲ್ಲಿ ಇಲ್ಲ. ಕಳೆದ ಒಂದೂವರೆ ದಶಕಗಳಲ್ಲಿ ಮೋಸದ ಚುನಾವಣೆಗಳು ನಡೆದಿವೆ. 1987 ರ ವಿಧಾನ ಸಭಾ ಚುನಾವಣೆ ಗಳಲ್ಲಿ ಕೂಡಾ ಜಮ್ಮುಮತ್ತು ಪೂಂಚ್‌ನಲ್ಲಿ ಲೋಕಸಭಾ ಉಪ ಚುನಾವಣೆಗಳಲ್ಲೂ ಮೋಸವಾಗಿತ್ತು. ಈಗ ಆಳುವ ಪಕ್ಷ ಅಧಿಕಾರದಲ್ಲಿ ಮುಂದುವರೆಯಲು ಅದೇ ದುರಾಚರಣೆ ನಡೆಸಬಹುದು ಎಂಬ ಭಯವಿದೆ.



ಆದರೆ ಅದೇವೇಳೆಗೆ ಜಮ್ಮು-ಕಾಶ್ಮೀರ ಚುನಾವಣೆಯ ಮೇಲೆ ಅಂತರಾಷ್ಟ್ರೀಯ ಗಮನ ನೆಟ್ಟಿದೆ. ಆದ್ದರಿಂದ ನಮಗೆ ಭಯವಿರುವ ದುರಾಚರಣೆಗಳು ಈ ಚುನಾವಣೆಗಳ ವಿಶ್ವಾಸಾರ್ಹತೆಯನ್ನೇ ಕೊಂದು ಬಿಡಬಹುದು. ಇದು ದೇಶಕ್ಕೆ ಎಸಗುವ ಅತೀ ಕೆಟ್ಟ ಸೇವೆಯಾದೀತು. ಅದು ಪಾಕಿಸ್ತಾನ ಅಪಪ್ರಚಾರಕ್ಕೆ ಗ್ರಾಸ ಒದಗಿಸುತ್ತದೆ. ಮಧ್ಯಪ್ರವೇಶಿಸಲು ನೆಪಗಳನ್ನು ಹುಡುಕುತ್ತಿರುವ ಸಾಮ್ರಾಜ್ಯಶಾಹಿಗೆ ಅವಕಾಶ ಒದಗಿಸುತ್ತದೆ. ನಿಜ, ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರುವಂತದ್ದು ಅತ್ಯುತ್ತಮ ದಾರಿಯೇನೂ ಅಲ್ಲ. ಆದರೆ ಮೇಲೆ ಹೇಳಿದ ಸಂಗತಿಗಳು ಸಂಭವಿಸದಂತೆ ತಡೆಯಲು ಮತ್ತು ಆ ಮೂಲಕ ತನ್ನದೇ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳಲು ರಾಜ್ಯ ಸರ್ಕಾರವೇ ಅದನ್ನು ಕೇಳಬೇಕು.


ಪ್ರಶ್ನೆ: ಒಂದು ಕೊನೆಯ ಪ್ರಶ್ನೆ. ನೀವು ಎಷ್ಟು ಸ್ಥಾನಗಳಲ್ಲಿ ಸ್ಪರ್ಧಿಸುತ್ತೀರಿ, ಗೆಲ್ಲುವ ಸಂಭವಗಳೆಷ್ಟು?

● ಸದ್ಯಕ್ಕೆ ಎಷ್ಟು ಸ್ಥಾನಗಳಲ್ಲಿ ಸ್ಪರ್ಧಿಸಬೇಕು ಎಂದು ಸಿಪಿಐ(ಎಂ) ಇನ್ನೂ ನಿರ್ಧರಿಸಿಲ್ಲ. ಸುಮಾರು ಆರೇಳು ಇರಬಹುದು. ಆದರೆ ಒಂದು ವಿಷಯ ಸ್ಪಷ್ಟಪಡಿಸಬಯಸುತ್ತೇನೆ. ನಮ್ಮ ಪ್ರಭಾವದ ಸಣ್ಣ ಕ್ಷೇತ್ರಗಳಿದ್ದರೂ ಇಡೀ ರಾಜ್ಯವನ್ನು ತೆಗೆದುಕೊಂಡರೆ ನಾವೊಂದು ದುರ್ಬಲ ಶಕ್ತಿ. ಬೇರೆ ಎಡಶಕ್ತಿಗಳು ಸುಮಾರಾಗಿ ಇಲ್ಲವೇ ಇಲ್ಲ. ಆದರೂ 1999 ರ ಲೋಕಸಭಾ ಚುನಾವಣಾ ಫಲಿತಾಂಶಗಳನ್ನು ನೋಡಿದರೆ ನಾವು ಒಂದು ವಿಧಾನಸಭಾ ಸ್ಥಾನದಲ್ಲಿ ಮೊದಲ ಸ್ಥಾನದಲ್ಲಿದ್ದವು, ಐದಾರು ಕಡೆ ಎರಡನೇ ಸ್ಥಾನದಲ್ಲಿದ್ದವು. ಆದ್ದರಿಂದ ನಮ್ಮ ಮಧ್ಯ ಪ್ರವೇಶಕ್ಕೆ ಆಧಾರವೇ ಇಲ್ಲವೇ ಇಲ್ಲ ಎಂದಲ್ಲ. ನಮ್ಮ ಪಕ್ಷಕ್ಕೆ ಜನಗಳ ನಡುವೆ ಸ್ವಲ್ಪ ಪ್ರತಿಷ್ಠೆಯೂ ಇದೆ. ಏಕೆಂದರೆ ಭಯೋತ್ಪಾದಕರ ವಿರುದ್ಧ ರಾಜಕೀಯ ಹೋರಾಟ ನಡೆಸಿದ ಏಕೈಕ ಶಕ್ತಿ ನಾವು ಎಂದೂ ಹೇಳಬಹುದು. ಈ ಹೋರಾಟದಲ್ಲಿ ನಮ್ಮ ಅಮೂಲ್ಯ ಕಾರ್ಯಕರ್ತರನ್ನು ಕಳೆದುಕೊಂಡಿದ್ದೇವೆ. ಬಹಳ ಸ್ಥಾನಗಳನ್ನು ಗಳಿಸುತ್ತೇವೆ ಎಂಬ ಭ್ರಮೆಯೇನೂ ನಮಗಿಲ್ಲ. ಆದರೆ ಕೆಲವು ಪ್ರದೇಶಗಳಲ್ಲಿ ಖಂಡಿತಾ ತೀವ್ರ ಹೋರಾಟ ನೀಡುತ್ತೇವೆ. ಇನ್ನು ದೀರ್ಘಾವಧಿಯಲ್ಲಿ ನಮ್ಮ ನೀತಿಬದ್ಧ ರಾಜಕೀಯ ನಿಲುವಿಗಾಗಿ ಮತ್ತು ಜನಗಳನ್ನು ಬಾಧಿಸುವ ಪ್ರಶ್ನೆಗಳಿಗಾಗಿ ನಮ್ಮ ಹೋರಾಟವನ್ನು ಏನೇ ಬರಲಿ ಮುಂದುವರೆ ಸುತ್ತೇವೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ○

ಹೊಸಪೇಟೆ-ಕಮಲಾಪುರ

ಒಡೆದ ತುಂಗಭದ್ರಾ ಬಲದಂಡೆ ಕಾಲುವೆ ಸರ್ವನಾಶದತ್ತ ಬೆಳೆ

ಸೆಪ್ಟೆಂಬರ್ 3 ರಂದು ತುಂಗಭದ್ರ ಬಲದಂಡೆ ಕಾಲುವೆಯ ಮೇಲಟ್ಟದ ಕಾಲುವೆ(ಹೆಚ್‌ಎಲ್‌ಸಿ) ಎಡಭಾಗದಲ್ಲಿ 14.9 ಕಿ.ಮಿ.ಮೈಲಿಗಲ್ಲಿನ ಬಳಿ ಸುಮಾರು 50 ಅಡಿಗಳಷ್ಟು ಒಡೆದು ಹದಿನೈದು ದಿನಗಳಾದವು, ಅದಿನ್ನೂ ರಿಪೇರಿ ಆಗಿಲ್ಲ. ನೀರು ಹರಿಯಲಿಲ್ಲ. ಇಂದೋ ನಾಳೆಯೋ ನೀರ ಹನಿ ಸಿಕ್ಕಿತು, ಬೆಳೆ ದಕ್ಕೀತು ಎಂದು ಕಾದವರು ನಿಟ್ಟುಸಿರಿಡುತ್ತಿದ್ದಾರೆ. ಇನ್ನೂ ಒಂದೆರಡು ದಿನಗಳಲ್ಲಿ ಬೇರಿಗೆ ನೀರು ಸಿಗದೇ ಹೋದರೆ ನೆಲಕ್ಕೊರಗಿದ ಭತ್ತ, ಕಬ್ಬು ಇತರೆ ಸಸಿಗಳು ಕೊನೆಯುಸಿರು ಎಳೆಯಲಿದೆ. ಬರಗಾಲದ ಕೆಂಡದ ಕಾವಿಗೆ ಸುಟ್ಟುಹೋಗಲಿವೆ. ಹೇಗೋ.. ಈಗಲೇ (ಶನಿವಾರ) ನೀರು ಹರಿಸಿದರೂ ಗದ್ದೆಗೆ ನೀರು ಹತ್ತಲು ನಾಲ್ಕು ದಿನಗಳೇ ಬೇಕು. ಆಗ



ಉಳಿಸಬಹುದಾದ ಬೆಳೆ ಶೇ. 30 ಮಾತ್ರ. ಬೆಳೆ ನಾಶ ಶಾಶ್ವತ. ಒಂದೆರಡಲ್ಲಿ ಲಕ್ಷಾಂತರ, ಕನಿಷ್ಠ ಐದು ಲಕ್ಷ ಎಕರೆಯ ಬೆಲೆ ಸರ್ವನಾಶ. ಕಾಲುವೆ ಒಡೆದ ಪ್ರದೇಶದಲ್ಲೇ 80,000 ಎಕರೆ ಕೊಚ್ಚಿಹೋಗಿ ಬೆಳೆ ಬಯಲಾಗಿದೆ. ಅದರ ಪರಿಣಾಮ ಘೋರ. ಈಗಾಗಲೇ ಆತ್ಮಹತ್ಯೆಗಳ ಸಾವಿನ ಸರಣಿಯಲ್ಲಿ ದಾಖಲೆ ನಿರ್ಮಿಸಿದೆ ಬಳ್ಳಾರಿ ಜಿಲ್ಲೆ. ಬಳ್ಳಾರಿ ಕುರುಗೋಡಿನಿಂದ ಈಗ ಹೊಸಪೇಟೆ ಧರಣಿ ಮಕ್ಕಳ ಬದುಕು ಬಲು ಧಾರುಣ.

ತುಂಗಭದ್ರಾ ನದಿ ನೀರನ್ನವಲಂಬಿಸಿರುವ ಹೊಸಪೇಟೆ, ಕಮಲಾಪುರ ಪ್ರದೇಶದ ಹಾಗೇ ಮುಂದುವರೆದು ಆಂಧ್ರದ ಹಳ್ಳಿಗಳಿಗೆ ಹರಿದ ಕಾಲುವೆ ನೀರಿನ ಒತ್ತಡದಿಂದಾಗಿ ಒಡೆಯಿತು. (ಕಳಪೆಕಾಮಗಾರಿಗಳಿಂದ) ಆ ನೀರು ನುಗ್ಗಿ ಕಮಲಾಪುರ ಕೆರೆ ತುಂಬಿ ಅದೂ ಒತ್ತಡ ತಾಳದೆ ಬೆಳೆದು ನಿಂತ ಪೈರಿನತ್ತ ಧಾಳಿ ಇಟ್ಟು ಊರು ಹೊಲ ಗದ್ದೆಯನ್ನು ಆವರಿಸಿತು. ಅಲ್ಲಿಯೂ ಬೆಳೆಹಾಳು. ಹೀಗೆ ನೀರಿನಲ್ಲದೇ ಒಣಗುವ ಭೂಮಿ ಕರ್ನಾಟಕದ ಪಾಲಿಗೆ ಎರಡುವರೆ ಲಕ್ಷ ಎಕರೆ. ಆಂಧ್ರದ ಪಾಲು ಸುಮಾರು 2 ಲಕ್ಷ ಎಕರೆ, ಈಗ ಇದೆಲ್ಲಾ ಬೆಳೆ ನಾಶದ ಭೀತಿ. ಅತ್ತ ಆಂಧ್ರದ ಸಾಂಗಿ

ಹಾಗೂ ನೀರಾವರಿ ಸಚಿವರು ಭೇಟಿ ನೀಡಿ ಹೋಗಿದ್ದಾರೆ. ಆದರೆ ಕರ್ನಾಟಕ ಯಾವ ಮಂತ್ರಿಯೂ, ಅದರಲ್ಲೂ ಬಳ್ಳಾರಿಯಲ್ಲೇ ಇರುವ ಮಂತ್ರಿಗಳಾದ ಘೋರ್ಪಡೆ, ದಿವಾಕರಬಾಬು ತಲೆಯನ್ನು ಹಾಕಿಲ್ಲ. ಏನೆಂದೂ ನೋಡಲಿಲ್ಲ. ಇನ್ನೂ ಕಾಮಗಾರಿ ಚುರುಕುಗೊಳಿಸುವುದು, ಆತಂಕದಲ್ಲಿರುರುವವರಿಗೆ ಸಾಂತ್ವನ ಹೇಳುವ ಮಾತೇ ಇಲ್ಲ. ಹೀಗಿದ್ದಾರೆ ಜನ ಪ್ರತಿನಿಧಿಗಳು, ಅವರ ದರ್ಬಾರು. ಹಾನಿ ನಿರ್ವಹಿಸಬೇಕಾದ 'ತುಂಗಭದ್ರ ಮಂಡಳಿ' ತುರ್ತು ಸಭೆಯನ್ನೆ ಕರೆಯದಿರುವುದು ಗಂಭೀರ ವಿಚಾರ.ಇವರನ್ನು ಕೇಳುವವರಾರು?

ನೆರವಿಗೆ ಧಾವಿಸಿದ ಸಿಪಿಐ(ಎಂ)

ಇಂತಹ ಪರಿಸ್ಥಿತಿಯಲ್ಲಿ ಸಿಪಿಐ(ಎಂ), ಕರ್ನಾಟಕ ಪ್ರಾಂತ ರೈತ ಸಂಘದ ನಾಯಕರ ನಿಯೋಗ ಅಲ್ಲಿಗೆ ಭೆಟಿ ನೀಡಿದೆ. (ಕಾಂ| ಬಸವ ರಾಜ್, ಪ್ರಸನ್ನಕುಮಾರ್, ಶಿವಶಂಕರ್) ಜಿಲ್ಲಾಧಿಕಾರಿಗಳ ಕಛೇರಿ ಎದುರು ಪ್ರತಿಭಟನಾ ಧರಣಿ ನಡೆಸಿದೆ. ದೃಢವಾದ ಅಡಿಪಾಯ, ಕಾಲುವೆ ನಿರ್ಮಿಸಲು ಮತ್ತು ಹಾನಿಗೀಡಾದವರಿಗೆ ಪರಿಹಾರವನ್ನು ನೀಡಲು ಆಗ್ರಹಿಸಿದೆ. ಈ ತಕ್ಷಣ ಕಿವಿಗೊಡದಿದ್ದಲ್ಲಿ ಬಳ್ಳಾರಿ ಜಿಲ್ಲಾ ಬಂದ್‌ಗೆ ಕರೆ ನೀಡಲು ನಿರ್ಧರಿಸಲಾಗಿದೆ.

ಪ್ರತಿವರುಷವೂ ಕಾಲುವೆಗಳ ದುರಸ್ತಿಗೆ ಕೋಟ್ಯಾಂತರ ರೂಪಾಯಿಗಳನ್ನು ಸುರಿಯಲಾಗುತ್ತಿದೆ. ಕಾಮಗಾರಿ ಬಳಿಕ ನೀರು ಹರಿಯ ಬಿಡಲಾಗುತ್ತದೆ. ಆದರೆ ಕಳಪೆ ಕಾಮಗಾರಿಯಿಂದ ಹಣ ಭ್ರಷ್ಟ ಕಂಟ್ರಾಕ್ಟರ್, ಇಂಜನಿಯರ್, ಆಡಳಿತದ ರಾಜಕಾರಣಿಗಳು, ಸಚಿವರ ಜೇಬು ಸೇರುತ್ತದೆ. ಒಂದು ಋತುಗಾಲ ಉರುಳಿದರೆ ಅದೇ ಕಿತ್ತುಹೋದ ಕಾಲುವೆ ಬಜೆಟ್‌ನಲ್ಲಿ ಕೋಟ್ಯಾಂತರ ಹಣ ಮೀಸಲು ಇಷ್ಟೆಲ್ಲದರ ನಡುವೆ ನಜ್ಜುಗುಜ್ಜಾದ ರೈತರು ಈಗ ಸಂಘಟಿತರಾಗಿ ಪ್ರತಿಭಟಿಸುತ್ತಿದ್ದಾರೆ.

- ಎಸ್‌ವೈಜಿ

ನೈಜಿರಿಯಾದ ಗ್ರಾಮೀಣ ಮಹಿಳೆಯರು ತೈಲದೈತ್ಯನನ್ನು ಮಣಿಸಿದಾಗ

ಆಫ್ರಿಕಾದ ನೈಜೀರಿಯಾ ತೈಲ ಸಂಪತ್‌ಭರಿತ ದೇಶ. ತೈಲ ಸಂಪತ್‌ಭರಿತ ದೇಶವೆಂದರೆ ಅಮೇರಿಕಾದ ದೈತ್ಯ ತೈಲ ಕಂಪನಿಗಳು ಇರಲೇಬೇಕಲ್ಲ. ಶೆಪ್ರೊಟ್-ಟೆಕ್ಸಾಕೊ ಇಂತಹ ಒಂದು ದೈತ್ಯ ತೈಲ ಕಂಪನಿ. ಜಗತ್ತಿನ ಅತೀ ದೊಡ್ಡ ನಾಲ್ಕೈದು ಕಂಪನಿಗಳಲ್ಲಿ ಒಂದಾದ ಟೆಕ್ಸಾಕೋವನ್ನು ಕೇವಲ 10 ದಿನಗಳಲ್ಲಿ ಸ್ಥಳೀಯ ಬೇಡಿಕೆಗಳಿಗೆ ಒಪ್ಪುವಂತೆ ಮಾಡಿದ ಅದ್ಭುತ ಘಟನೆ ವರದಿಯಾಗಿದೆ. ಇದನ್ನು ಸಾಧಿಸಿದವರು ನಿಶ್ಶಸ್ತ್ರ ನೂರಾರು ಗ್ರಾಮೀಣ ಮಹಿಳೆಯರು. ಆಫ್ರಿಕಾದ ದೇಶಗಳ ಸರಕಾರಗಳನ್ನೇ ಇಡಿಯಾಗಿ ತಮ್ಮ ಜೇಬಿನಲ್ಲಿಟ್ಟು ಓಡಾಡುವ ತೈಲಕಂಪನಿಗಳನ್ನು ಮಣಿಸಿದ್ದು ಹೇಗೆ?

ಉದ್ಯೋಗಿಗಳನ್ನು 'ಒತ್ತೆಯಾಳುಗಳು' ಮಾಡಿದಾಗ

ನೂರಾರು ಮಹಿಳೆಯರು ಸೇರಿ ಟೆಕ್ಸಾಕೋದ ಇಂಜಿನೀಯರುಗಳು, ಕಾರ್ಮಿಕರುಗಳನ್ನು 'ಒತ್ತೆಯಾಳು'ಗಳನ್ನಾಗಿ ಮಾಡಿ, ಈ ಜನ ಸಾಧಿಸಿದ್ದಾರೆ. ಹತ್ತು ದಿನಗಳ ಕಾಲ ಟೆಕ್ಸಾಕೊದ ಉತ್ಪಾದನೆಗೆ ತೀವ್ರ ಪೆಟ್ಟಾಗಿತ್ತು. ಟೆಕ್ಸಾಕೋ ಸುಮಾರು 700 ಉದ್ಯೋಗಿಗಳು (ಅಮೇರಿಕನ್ನರು, ಬ್ರಿಟೀಷ್, ಕೆನಡಿಯನ್ನರು, ನೈಜೀರಿಯನ್ನರು) 'ಒತ್ತೆಯಾಳು'ಗಳಾಗ ಬೇಕಾಯಿತು. ಎಸ್ಕ್ರಾವೋಸ್ ಎಂಬ ಪ್ರದೇಶದ ಆರು ಹಳ್ಳಿಗಳ ಮಹಿಳೆಯರ ಕಾರ್ಯಾಚರಣೆಯಾಗಿತ್ತು. ಜುಲೈ 8ರಂದು ಈ ಕಾರ್ಯಾಚರಣೆ ಆರಂಭವಾಗಿತ್ತು. 50-60 ವರ್ಷದ 'ಅಮ್ಮಂದಿರು' ಈ ಮಹಿಳೆಯರ ತಂಡದ ನಾಯಕಿಯರಾಗಿದ್ದರು. 30ರಿಂದ 90 ವರ್ಷದವರೆಗಿನ ಮಹಿಳೆಯರು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಮೊದಲನೆಯ ದಿನವೇ ನೂರು ಮಹಿಳೆಯರು ಕಂಪನಿ ದೋಣಿಗಳಿಗೆ ಹತ್ತಿ, ತೈಲ ಸ್ಥಾವರಗಳಿಗೆ ಹೋಗಲು ಆಜ್ಞೆ ಮಾಡಿದ್ದರು. ತೈಲ ಸ್ಥಾವರಗಳಿಗೆ ತಲುಪಿದ ಮೇಲೆ ಅಲ್ಲಿನ ಉದ್ಯೋಗಿಗಳನ್ನು ವಶಕ್ಕೆ ತೆಗೆದುಕೊಂಡರು. ತೈಲ ಸ್ಥಾವರದ ಎಲ್ಲಾ ಆಯಕಟ್ಟಿನ ಜನಗಳ ಉದ್ಯೋಗಿಗಳನ್ನು ಮಹಿಳೆಯರು ವಶಕ್ಕೆ ತೆಗೆದುಕೊಂಡಿದ್ದರು. ಕಂಪನಿ ಅವರ ಎಲ್ಲಾ ಬೇಡಿಕೆಗಳಿಗೆ ಒಪ್ಪುವವರೆಗೆ 'ಒತ್ತೆಯಾಳು'ಗಳನ್ನು ಹಿಡಿದಿಟ್ಟಿದ್ದರು.

ಕೆಲವೇ ಗ್ರಾಮೀಣ ಮಹಿಳೆಯರು ಟೆಕ್ಸಾಕೋದಂತಹ ಕಂಪನಿಯನ್ನು ಮಣಿಸಿದ್ದು, ನೈಜೀರಿಯಾದ ದಟ್ಟದರಿದ್ರರಿಗೆ ರೋಮಾಂಚನ ಉಂಟು ಮಾಡಿದೆ. ಲ್ಯಾಟಿನ್ ಅಮೆರಿಕಾ ದೇಶಗಳಲ್ಲಿ ಇಂತಹ ಹೋರಾಟಗಳು ವಿಸ್ತೃತವಾಗಿ ಹಬ್ಬಿವೆ.

ಮಹಿಳೆಯರು ತಮ್ಮ ಬೇಡಿಕೆಗಳನ್ನು ಟೆಕ್ಸಾಕೋ ಕಂಪನಿಯ ಮುಂದಿಟ್ಟು ಮೂರು ವಾರಗಳವರೆಗೆ ಕಾದಿದ್ದರು. ಆ ಬಗ್ಗೆ ಏನೊಂದು ಉತ್ತರ ಬರದಿದ್ದಾಗ ಈ 'ನೇರ ಕಾರ್ಯಾಚರಣೆ'ಗೆ ಇಳಿದಿದ್ದರು. ಮಹಿಳೆಯರ ಬೇಡಿಕೆಗಳು ಬಹಳ ಸರಳವಾಗಿದ್ದವು. ತೈಲ ಸ್ಥಾವರದ ಸುತ್ತ ಇರುವ ಕೋಟೆಗಳನ್ನು ಒಳ್ಳೆಯ ಹಳ್ಳಿಗಳಾಗಿಯಾದರೂ ಬದಲಾಯಿಸಬೇಕು ಎಂದು ಅವರ ಬೇಡಿಕೆ. 25 ಸ್ಥಳೀಯರಿಗೆ ನೌಕರಿ, ಮೀನು ಮತ್ತು ಕೋಳಿ ಫಾರ್ಮು ಮಾಡಲು ಸಹಾಯ, ಶಾಲೆ, ಕ್ಲಿನಿಕ್, ವಿದ್ಯುತ್- ನೀರು ಸರಬರಾಜು - ಇವುಗಳಿಗೆ ವ್ಯವಸ್ಥೆ ಮಾಡಬೇಕು ಇವೆಲ್ಲ ಸರ್ಕಾರದ ಜವಾಬ್ದಾರಿ. ಕಂಪನಿಗಳ ಜವಾಬ್ದಾರಿಯಲ್ಲ ಎಂದು ದಿವ್ಯ ನಿರ್ಲಕ್ಷ್ಯ ತೋರಿಸಿದ ಈ ಕಂಪನಿಗಳಿಗೆ ಈ 'ನೇರ ಕಾರ್ಯಾಚರಣೆ' ದುಃಸ್ವಪ್ನದಂತೆ ಆಗಿದೆ.

'ಕಾಪಿ' ಕಾರ್ಯಾಚರಣೆಗಳು

ಈ ಕಾರ್ಯಾಚರಣೆಯ ವಿಜಯಿಯಾದ ನಂತರ, ಇದರ 'ಕಾಪಿ'ಗಳು ನೈಜರೀಯಾದ ತೈಲ ಪ್ರದೇಶದ ತುಂಬಾ ನಡೆದಿವೆ. ನೈಜರ್ ತ್ರಿಕೋಣ ತೈಲ ಸಂಪತ್‌ಭರಿತವಾಗಿದ್ದರೂ ಬಡತನದಿಂದ ನರಳುತ್ತಿರುವ ಪ್ರದೇಶ 1958ರಲ್ಲಿ ತೈಲ ದೈತ್ಯ ಕಂಪನಿ 'ಶೆಲ್' ತನ್ನ ವಹಿವಾಟು ಆರಂಭಿಸಿದಾಗಿನಿಂದ, ತೈಲ ಕಂಪನಿ ಈ ಪ್ರದೇಶದ ಲೂಟಿ ಮಾಡಿವೆ. ಇದಕ್ಕೆ ಬದಲಾಗಿ ಏನೂ ಕೊಟ್ಟಿಲ್ಲ. ಈ ಕಂಪನಿಗಳು ಸೂಪರ್ ಲಾಭ ಹೊಡೆಯುತ್ತಿದ್ದರೂ, ಈ ಪ್ರದೇಶಗಳಿಗಾಗಿ ಏನೂ ಮಾಡಿಲ್ಲ. ಇದರ ವಿರುದ್ಧ ಹಲವು ಪ್ರತಿಭಟನೆಗಳು ನಡೆದಿವೆ. ಈ ಪ್ರದೇಶಗಳ ಬೆಳವಣಿಗೆಗೆ ತೀವ್ರ ಬೇಡಿಕೆಗಳನ್ನು ಎತ್ತಲಾಗಿದೆ. ಅವುಗಳನ್ನು ಕಂಪನಿಗಳು ಅವುಗಳ ಜೇಬಿನಲ್ಲಿರುವ ನೈಜೀರಿಯಾದ ಸರ್ಕಾರಗಳ ನೆರವಿನಿಂದ ಕೊಚ್ಚಿ ಹಾಕಿವೆ. ಹಿಂದೆ ಕ್ರೂರ, ಭ್ರಷ್ಟ ಮಿಲಿಟರಿ ಸರ್ವಾಧಿಕಾರಿಗಳನ್ನು ಕಂಪನಿಗಳು ಸಾಕಿಕೊಂಡಿದ್ದವು. ತೀವ್ರ ಪ್ರತಿಭಟನೆ ಮಾಡಿದ್ದ ಕೆನ್ ಸರೋಮಿೂ ಮತ್ತು ಎಂಟು ಇತರರನ್ನು ಕೊಲೆ ಮಾಡಲಾಗಿದೆ. ಅವರನ್ನು ಫೆಡರಲ್ ಸರ್ಕಾರ ರಚಿಸಿದ ನಾಗರೀಕ ಅವ್ಯವಸ್ಥೆ ಟ್ರಿಬ್ಯುನಲ್ ಈ ಶಿಕ್ಷೆಗೆ ಗುರಿಪಡಿಸಿತ್ತು.

ನೈಜೀರಿಯಾದಲ್ಲಿ ಈಗ ಪ್ರಜಾಸತ್ತಾತ್ಮಕ ಸರ್ಕಾರದ ಅಡಿಯಲ್ಲಿಯೂ, ತೈಲ ಕಂಪನಿಗಳು ತಮ್ಮ ಲಿಟಾಟೋನ್ ಮುಂದುವರೆಸಿವೆ. ಅವರ ರೋಲ್ ಮಾತ್ರ ಬದಲಾಗಿದೆ. ಇತ್ತೀಚೆಗೆ ಶೆಲ್ ಕಂಪನಿ ತನ್ನ ಸ್ಥಾವರಗಳನ್ನು ಕೆಲವು ಯುವಕರು ದಾಳಿ ಮಾಡಿ ಹಾಳುಗೆಡವಿದರು ಎಂದು ಆರೋಪಿಸಿ ಹೈಕೋರ್ಟ್‌ಗೆ ಹೋಗಿವೆ. ಆ ಯುವಕರು ಕಂಪನಿಗೆ ಸುಮಾರು 5 ಕೋಟಿ ಡಾಲರು ಪರಿಹಾರ ಕೊಡಬೇಕು ಎಂದು ಮೊಕದ್ದಮೆ ಹೂಡಿದೆ. ಈಗ ಕಾರ್ಯಾಚರಣೆ ನಡೆದಿರುವ ಪ್ರದೇಶದಲ್ಲೇ ಕಳೆದ ವರ್ಷ 32 ವರ್ಷದ ನಿರುದ್ಯೋಗಿ ಯುವಕನ ನಾಯಕತ್ವದಲ್ಲಿ ನಡೆದ ಪ್ರತಿಭಟನೆ ವಿರುದ್ಧ ಕ್ರೂರ ಕ್ರಮ ಕೈಗೊಳ್ಳಲಾಗಿತ್ತು. ಅಶ್ರುವಾಯು ಶೆಲ್, ಗೋಳಿಬಾರು, ಬೆತ್ತ ಕೊರಳಿಯೇಟುಗಳನ್ನು ಕೊಟ್ಟು ಯುವಕರನ್ನು ಮಣಿಸಲಾಗಿತ್ತು.

ಇಂತಹ ಹಿನ್ನೆಲೆಯಲ್ಲಿ ಕೆಲವೇ ಗ್ರಾಮೀಣ ಮಹಿಳೆಯರು ಟೆಕ್ಸಾಕೋದಂತಹ ಕಂಪನಿಯನ್ನು ಮಣಿಸಿದ್ದು, ನೈಜೀರಿಯಾದ ದಟ್ಟದರಿದ್ರರಿಗೆ ರೋಮಾಂಚನ ಉಂಟು ಮಾಡಿದೆ. ಕಂಪನಿಗಳನ್ನು ಜನರಿಗೆ ಮೋಸ ಮಾಡಲು ಬಿಡಬೇಡಿ. ನೇರ ಕಾರ್ಯಾಚರಣೆ ಮಾಡಿದರೆ ಅವನ್ನು ಮುಗಿಸ ಬಹುದು ಎಂದು ಎಲ್ಲಾ ದೇಶದ ಮಹಿಳೆಯರು ಕಲಿತುಕೊಳ್ಳಬೇಕು ಎನ್ನುತ್ತಾರೆ. ಮಹಿಳಾ ನಾಯಕಿಯಲ್ಲಿ ಒಬ್ಬಳಾದ ಅನುನು ಬಿವಾವಾಳ.

- ಶರತ್

ಪ್ರೀತಿ ಬೆಸೆದ ಕಾರಂತ....

ಪುಟ 12 ರಿಂದ

ಸಂಬಂಧ ಬಹಳ ಹಳೆಯದೂ ಹತ್ತಿರದ್ದೂ ಇರಬಹುದು. ಆದರೆ ನನಗೆ ಅದು ಅತ್ತೆ ಮನೆಯೇ ಆಗಿತ್ತು. ಆಗ ನಾನು ಕಂಡಂತೆ ಅಯ್ಯರ್ ಅವರದು ವಿಸ್ತಾರವಾದ, ಸಮರ್ಥ ವಾದ, ಕಠಿಣವಾದ ವ್ಯಕ್ತಿತ್ವ. ಮೊದಲನೋಟಕ್ಕೆ ನೋಡಿದರೆ ಭಯವಾಗುತ್ತಿತ್ತು. ಎಂಥಾ ಕಷ್ಟನಷ್ಟಗಳು ಬಂದರೂ ಧೃತಿಗೆಡದಂತಹ ವ್ಯಕ್ತಿತ್ವ. ಜೀವನದ ಸಮಸ್ಯೆಗಳನ್ನು, ಆಸೆ ಆಕಾಂಕ್ಷೆಗಳನ್ನು ಆಳವಾಗಿ ಅರ್ಥಮಾಡಿಕೊಂಡ ವ್ಯಕ್ತಿ ಅದರಿಂದಾಗೇ ಅವರಲ್ಲಿರುವ ಆತ್ಮವಿಶ್ವಾಸ, ಮನೋಸ್ಥೈರ್ಯ ಬಹಳ ಕಮ್ಮಿ ಜನಗಳಲ್ಲಿ ಕಾಣಸಿಗುತ್ತೆ.

ಅವರ ಮನೆಯಲ್ಲಿದ್ದಾಗ ನನಗೆ ಯಾವುದಕ್ಕೂ ಕಡಿಮೆಯಾಗದ ಹಾಗೆ ನೋಡಿಕೊಂಡರು. ಆದರೂ ಸುಂದರಮ್ಮ ಒಮ್ಮೊಮ್ಮೆ ಅತ್ತೆಯ ಹಾಗೆ ವ್ಯವಹರಿಸುತ್ತಿದ್ದರು. ಹೊಸದಾಗಿ ಮದುವೆಯಾದ ಹುಡುಗಿಯಾದ್ದರಿಂದ ಆ ರೀತಿ ನಡೆದುಕೊಳ್ಳುತ್ತಿದ್ದಾರೆಂದುಕೊಳ್ಳುತ್ತಿದ್ದೆ. ಆದರೆ ಕಾರಂತರನ್ನು ಬಿಟ್ಟಿರುವುದು ತುಂಬಾ ಕಷ್ಟವಾಗುತ್ತಿತ್ತು. ದೊರೆ-ಭಗವಾನ್ ಜೋಡಿ ಅಯ್ಯರ್ ಮನೆಗೆ ಆಗಾಗ ಬರುತ್ತಿದ್ದರು. ದೊರೆಯ ಮದುವೆ ತಿರುಪತಿಯಲ್ಲಿ ಆದಾಗ ನಾವೆಲ್ಲಾ ಹೋಗಿದ್ದೆವು. ತುಂಬಾ ಜನ ಚಿತ್ರ ನಟ ನಟಿಯರು ಅಯ್ಯರ್ ಮನೆಗೆ ಬಂದು ಹೋಗಿ ಮಾಡುತ್ತಿದ್ದರು. ಅಲ್ಲೇ ನಾನು ಭಾರತಿ, ಲೀಲಾವತಿ, ವಂದನಾ ಇವರನ್ನೆಲ್ಲಾ ಸಂಧಿಸಿದ್ದು.

ಕಾಶಿಗೆ ಹೋಗುವ ಹಂಬಲ ದಿನದಿನಕ್ಕೂ ಹೆಚ್ಚಾಗುತ್ತಿತ್ತು. ಅಯ್ಯರ್ ಮುಂದೆ ಹೇಳೋಕ್ಕೆ ಭಯ. ಅಂತೂ ಧೈರ್ಯ ಮಾಡಿ ಅಜ್ಜಿ, ತಾತನ ಮನೆಗೆ ಹೋಗಿ ಬರುತ್ತೇನೆಂದು ಹೇಳಿ, ಸ್ಟೇಷನ್ನಿಗೆ ಹೊರಟೆ. ಅಲ್ಲಿ ಟಿಕೆಟ್ ತೆಗೆದುಕೊಂಡಿದ್ದು ಕಾಶಿಗೆ! ಕಾಶಿ ಟ್ರೇನ್‌ನ ಪ್ಲಾಟ್ ಫಾರಂ ಹುಡುಕುತ್ತಿದ್ದಾಗ, ಬೆಂಗಳೂರು ರೈಲಿನಿಂದ ಇಳಿದ ಭಗವಾನ್ ಸಿಕ್ಕಬೇಕೇ? ಇದೇನು? ಪ್ರೇಮಾ ಬೆಂಗಳೂರಿಗೆ ಹೋಗುತ್ತಿದ್ದೀಯಾ?' ಅಂದರು. ನಾನು ಕೂಡಲೇ ಈಗ ಬರುತ್ತೇನೆಂದು ಹೇಳಿ ಲೇಡೀಸ್ ವೇಟಿಂಗ್ ರೂಂಗೆ ನುಗ್ಗಿದೆ. ನನ್ನನ್ನು ಹುಡುಕಿ ಸಾಕಾಗಿ ಭಗವಾನ್ ಸೀದಾ ಅಯ್ಯರ್ ಮನೆಗೆ ಹೋಗಿ ಸುದ್ದಿ ತಿಳಿಸಿರಬೇಕು.

ಅಂತೂ ನಾನು ಕಾಶೀ ಟ್ರೇನ್ ಹತ್ತಿ ಕುಳಿತೆ. ಖಾಲಿ ಕಂಪಾರ್ಟ್ ಮೆಂಟ್. ನನ್ನ ಹತ್ತಿರ ಇದ್ದದ್ದು ಹತ್ತು ರೂ. ಅದರಲ್ಲಿ ಏನು ತಿನ್ನುವುದು, ಏನು ಬಿಡುವುದು ಗೊತ್ತಾಗಲಿಲ್ಲ. ರಾತ್ರಿಯಾಯಿತು. ಒಬ್ಬ ಬೆಂಗಾಲಿ ಹೆಂಗಸು ಹತ್ತಿದಳು. ನನ್ನ ಪಕ್ಕದಲ್ಲೇ ಕುಳಿತಳು. 'ತುಮಿಕೋಥಾಯ್ ಜಾಚ್ಛೋ?' ಅಂದಳು. ಕೇಳಿದ್ದು ಅರ್ಥವಾಗಿ ಕಾಶಿ, ಕಾಶಿ ಅಂದೆ. ಸುಮಾರಾದ ಬೆಂಗಾಲಿಯನ್ನು ಕಾಶಿಯಲ್ಲಿ ಕಲಿತಿದ್ದೆ. ನಾನೊಬ್ಬಳೇ ಪ್ರಯಾಣ ಮಾಡುತ್ತಿರುವ ಬಗ್ಗೆ ಅವಳಿಗೆ ಕುತೂಹಲ ಉಂಟಾಯಿತು. ನೂರಾರು ಪ್ರಶ್ನೆಗಳನ್ನು ಕೇಳಿದಳು. 'ಕಾಶಿಯಲ್ಲಿ ನಿನ್ನ ಗಂಡ ನಿನ್ನನ್ನು ಕರೆದೊಯ್ಯಲು ಬರದಿದ್ದರೆ, ನಾನು ನಿನ್ನನ್ನು ನಿನ್ನ ಸ್ಥಳಕ್ಕೆ ಕರೆದೊಯ್ಯುತ್ತೇನೆ' ಎಂದಳು. ನನಗೆ ತಕ್ಷಣ ಓಹೋ ನಾನು ಬರುತ್ತಿರುವ ವಿಷಯ ಕಾರಂತರಿಗೆ ತಿಳಿಸೇ ಇಲ್ಲ ಎಂದು ನೆನಪಾಯಿತು. ಈ ಹೆಂಗಸಿನ ಮೇಲೆ ಅನುಮಾನ ಬರುವುದಕ್ಕೂ ಶುರುವಾಯಿತು. ಮುಂದಿನ ಜಂಕ್ಷನ್‌ನಲ್ಲಿ ಗಾಡಿ ನಿಂತಾಗ ಇಳಿದು ಜಂಟ್ಸ್ ಕಂಪಾರ್ಟ್‌ಮೆಂಟ್‌ನಲ್ಲಿ ಹತ್ತಿ ಕುಳಿತು, ಆ ಜಂಕ್ಷನ್‌ನಿಂದಲೇ ನಾನು ಬರುತ್ತಿರುವ ವಿಷಯ ಕಾರಂತ್‌ಗೆ ಟೆಲಿಗ್ರಾಂ ಮೂಲಕ ತಿಳಿಸಿದೆ. ಸ್ಟೇಷನ್‌ಗೆ ಕಾರಂತ್ ಬಂದಿದ್ದರು. ಆ ಹೆಂಗಸು ನನ್ನನ್ನೇ ದುರುಗುಟ್ಟಿ ನೋಡುತ್ತಿದ್ದಳು. ಮನೆ ಸೇರಿದ್ದಾಯಿತು.



ಪಿಎಚ್.ಡಿ ಮುಗಿಸಿದ ನಂತರ ಕಾರಂತರು ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಗೆ ಅರ್ಜಿ ಹಾಕಿಕೊಂಡರು. "ನಾನು ದೆಹಲಿಗೆ ಹೋಗಬೇಕಾಗುತ್ತೆ. ನೀನು ಅಯ್ಯರ್ ಮನೆಗೇ ಹೋಗಿರು" ಎಂದರು. ನನಗೆ ಪುನಃ ಅಲ್ಲಿಗೆ ಹೋಗಲು ಮನಸ್ಸಿಲ್ಲದೆ ಒದ್ದಾಡುತ್ತಿದ್ದೆ. ದಿನಪತ್ರಿಕೆ ಓದುತ್ತಿದ್ದಾಗ, ದೆಹಲಿಯ ಅರವಿಂದೋ ಮದರ್ಸ್ ಶಾಲೆಯ ಅಧ್ಯಾಪಕಿ ಹುದ್ದೆಗೆ ಅರ್ಜಿ ಕರೆದಿದ್ದ ಜಾಹೀರಾತು ಕಣ್ಣಿಗೆ ಬಿತ್ತು. ಧೈರ್ಯ ಮಾಡಿ ಕಾರಂತರಿಗೆ ಗೊತ್ತಾಗದಂತೆ ಅರ್ಜಿ ಗುಜರಾಯಿಸಿದೆ. ಇಂಟರ್‌ವ್ಯೂಗೆ ಕರೆ ಬಂತು. ನನಗೆಲ್ಲಿ ಕೆಲಸ ಸಿಕ್ಕೀತು ಎಂಬ ಅಳುಕು ಇದ್ದೇ ಇತ್ತು. ಅದೂ ದೆಹಲಿಯಲ್ಲಿ! ಮೊದಲ ಬಾರಿಗೆ ನಮ್ಮ ರಾಜಧಾನಿ ನೋಡುತ್ತಿದ್ದೇನೆಂಬ ಜಂಭ ಬೇರೆ. ಹೋದೆ. ಕಾಶಿಯ ಸ್ನೇಹಿತರೊಬ್ಬರ ಮನೆಯಲ್ಲಿ ಇಳಿದುಕೊಂಡೆ. ಇಂಟರ್‌ವ್ಯೂ ಮಾಡಿದವರು "ದಕ್ಷಿಣ ಭಾರತದವರಿಗೆ ನಾವು ಪ್ರಾಶಸ್ತ್ಯ ಕೊಡುತ್ತೇವೆ. ಈ ಹುದ್ದೆಗೆ ನಿಮ್ಮನ್ನು ತೆಗೆದುಕೊಳ್ಳುತ್ತೇವೆ" ಎಂದರು. ನನಗೆ ನಂಬುವುದೇ ಕಷ್ಟವಾಯಿತು. ಮತ್ತೊಂದು ಆಶ್ಚರ್ಯದ ಸಂಗತಿಯೆಂದರೆ ನನಗೆ, ಕಾರಂತರಿಗೆ ಇಬ್ಬರಿಗೂ ಒಂದೇ ಅಂಚೆಯಲ್ಲಿ ದಿಲ್ಲಿಯಿಂದ ನೇಮಕಾತಿ ಪತ್ರಿ ಬಂದದ್ದು!

ಆದರೆ ನಾನೇ ಮೊದಲು ಕೆಲಸಕ್ಕೆ ರಿಪೋರ್ಟ್ ಮಾಡಿಕೊಳ್ಳಬೇಕಾಗಿತ್ತು. ದಿಲ್ಲಿಯಲ್ಲಿ ಕಾರಂತರ ಸ್ನೇಹಿತ ಕವಿಯೊಬ್ಬರಿದ್ದರು. ಅವರ ಹೆಸರು ವಿಷ್ಣುಶರ್ಮ ಎಂದು. ಕರ್ಜನ್ ರಸ್ತೆಯಲ್ಲಿರತಕ್ಕಂಥ ದೊಡ್ಡ ಬಂಗಲೆಯೊಂದು ಅವರಿಗೆ ಸಿಕ್ಕಿತ್ತು. ಕಾರಂತರು ಅವರಿಗೆ ಪತ್ರ ಮುಖೇನ ನಾನು ಬರುತ್ತಿರುವ ವಿಷಯ ತಿಳಿಸಿ, ಮನೆ ಸಿಕ್ಕುವವರೆಗೂ ಪ್ರೇಮಾ ನಿಮ್ಮಲ್ಲಿರುತ್ತಾಳೆ ಎಂದು ತಿಳಿಸಿದರು. ನೀನು ಧೈರ್ಯವಾಗಿ ಅವರ ಮನೆಯಲ್ಲಿರಬಹುದು, ತುಂಬಾ ಒಳ್ಳೆಯ ವ್ಯಕ್ತಿ ಎಂದರು. ಸರಿ ನಾನು ದಿಲ್ಲಿಗೆ ಹೊರಟೆ. ಸ್ಟೇಷನ್ನಿಗೆ ವಿಷ್ಣುಶರ್ಮ ಬಂದು ನನ್ನನ್ನು ಕರೆದುಕೊಂಡು ಹೋದರು. ಮಾರನೆಯ ದಿನ ನಾನು ಶಾಲೆಗೆ ಸೇರಿಕೊಂಡಿದ್ದಾಯಿತು.


ಮಕ್ಕಳ ರಂಗಭೂಮಿಯ ಬಗ್ಗೆ ಕೆಲಸ ಮಾಡಲು ಅರವಿಂದೋ ಆಶ್ರಮ ಸಾಕಷ್ಟು ಅನುಭವಗಳನ್ನು ಕೂಡಿಟ್ಟುಕೊಟ್ಟಿತು. ನನಗೊಂದು orientation course ರೀತಿ ಆಯಿತು.

ಇಷ್ಟರಲ್ಲಿ ಕಾರಂತರ ನಾಟಕಶಾಲೆ ಡಿಪ್ಲೊಮೋ ಮುಗಿದು ಅವರು ಸರ್ದಾರ್ ಪಟೇಲ್ ವಿದ್ಯಾಲಯದಲ್ಲಿ drama instructor ಆಗಿ ಸೇರಿಕೊಂಡು, ನಾಟಕಗಳನ್ನು ಮಾಡಿಸಲು ಶುರು ಮಾಡಿದ್ದರು. ನಾನಿನ್ನೂ ಅರವಿಂದೋ ಆಶ್ರಮದಲ್ಲೇ ಕೆಲಸ ಮಾಡುತ್ತಿದ್ದೆ. ಆಗಿನ ಕಾಲದಲ್ಲಿ ನಾಟಕ ಶಾಲೆಯಲ್ಲೂ ಕಾರಂತರಿಗೆ 150 ರೂ. ಸ್ಕಾಲರ್ ಶಿಪ್ ಮಾತ್ರ ಸಿಕ್ಕುತ್ತಿತ್ತು. ನನ್ನ ಕೆಲಸ ಆರ್ಥಿಕ ದೃಷ್ಟಿಯಿಂದ ಒಂದು ರೀತಿ ಸಹಾಯಕ ವಾಗುತ್ತಿತ್ತು. ಕಾರಂತರು ಸರ್ದಾರ್ ಪಟೇಲ್ ಸ್ಕೂಲಿನಲ್ಲಿ ಎರಡು ವರುಷ ಕೆಲಸ ಮಾಡಿದ ನಂತರ "ನಾವಿಬ್ಬರೂ ಒಂದೇ ಫೀಲ್ಡ್‌ನಲ್ಲಿ ಕೆಲಸ ಮಾಡೋದು ಒಳ್ಳೇದು, ನೀನು ಸಹ ಡ್ರಾಮಾ ಸ್ಕೂಲಿಗೆ ಸೇರಿಕೋ" ಎಂದರು. ಅರವಿಂದೋ ಆಶ್ರಮದ ಅನುಭವಗಳಿಂದಾಗಿ ನನಗೂ ನಾಟಕದ ಚಪಲ ಹತ್ತಿತ್ತು. ತಕ್ಷಣ ಅರ್ಜಿ ಹಾಕಿದೆ. ಸ್ಕೂಲಿನವರು ನನ್ನನ್ನು ಬಿಡಲು ತಯಾರಿರಲಿಲ್ಲ. ಅಂತೂ ನಾನು ಡ್ರಾಮಾ ಸ್ಕೂಲ್ ಸೇರಿದೆ. ಕಾರಂತರ ಕಾಲದ 150 ರೂ. ಸ್ಕಾಲರ್‌ಶಿಪ್. ನಾನು ಸೇರುವ ಹೊತ್ತಿಗೆ 250 ರೂ. ಆಗಿತ್ತು. ಈಗ ಮೂರು ಸಾವಿರ ಆಗಿದೆ!

ಕೃಪೆ: 'ಸಂಕುಲ' ಮಾಸಪತ್ರಿಕೆ, 1999 ಅಕ್ಟೋಬರ್

ಸಂಪಾದಕಿ - ಡಾ.ವಿಜಯಾ

ಪ್ರೀತಿಗೆ ಪ್ರೇಮ ಬೆಸೆದ ಕಾರಂತ




ದೇಶದ ರಂಗಭೂಮಿಯಲ್ಲಿ ಆಯಸ್ಕಾಂತದಂತಿದ್ದ ಪ್ರಖ್ಯಾತ ಬಿ.ವಿ.ಕಾರಂತ ಮತ್ತು ಪ್ರೇಮಾ ಕಾರಂತ ಪ್ರೀತಿಗೆ ಪ್ರೀತಿ ಬೆಸೆದ ಜೋಡಿ. ಕಡು ಬಡತನದಲ್ಲೇ ಬೆಳೆದ ಪ್ರೇಮಾರವರು ಬಿ.ವಿ.ಕಾರಂತರೊಂದಿಗೆ ವಿವಾಹದ ಪ್ರಸ್ತಾಪ ಬಂದಾಗ ಪರಸ್ಪರ ಚರ್ಚಿಸಿ ದೀರ್ಘವಾಗಿ ಆಲೋಚಿಸಿ ಅವರು ಒಪ್ಪಿಗೆ ನೀಡಿದರು. ಹೀಗೆ ಪ್ರೇಮಾ-ಕಾರಂತರ ಜೊತೆಗೂಡಿ ಬದುಕಿನ ಹಲವು ವಿರಿಕತಗಳ್ಲಿ 'ಸಾಥಿ'ಯಾದವರು. ತಮ್ಮ ನೆನಪುಗಳಲ್ಲಿ ಕೆಲವನ್ನು ಹಂಚಿಕೊಂಡಿದ್ದಾರೆ ಪ್ರೇಮಾ ಕಾರಂತರು

ಪ್ರೇಮಾ ಕಾರಂತ ನೆನಪು

ಚಿಕ್ಕಮ್ಮನ ಮನೆಯಲ್ಲಿದ್ದಾಗಲೇ, ನನ್ನ ಜೀವನದಲ್ಲಾದ ದೊಡ್ಡ ತಿರುವು ಕಾರಂತರ ಭೇಟಿ. ನನ್ನ, ಕಾರಂತರ ಪ್ರಥಮ ಭೇಟಿಯಾದದ್ದು ನಮ್ಮಿಬ್ಬರಿಗೂ ಸ್ನೇಹಿತರಾದ ಎನ್.ಡಿ. ಕೃಷ್ಣಮೂರ್ತಿ, ಚಂಪಾ ಕೃಷ್ಣಮೂರ್ತಿಯವರ ಮನೆಯಲ್ಲಿ. ಬಿಳಿಯ ಜುಬ್ಬ, ಪಾಯಿಜಾಮ ಧರಿಸಿ ಉದ್ದಗಡ್ಡಧಾರಿಯಾಗಿದ್ದ ಕಾರಂತ ಆಗ ನನಗೆ ಕಂಡದ್ದು ಗಂಭೀರ ವ್ಯಕ್ತಿಯಾಗಿ. ಮೊದಲ ನೋಟದಲ್ಲೇ 'ಇವರೇ ನನಗೆ ಸರಿಯಾದ ವ್ಯಕ್ತಿ' ಅನ್ನಿಸಿತು. ಆ ಅನ್ನಿಸಿಕೆ ಈಗಲೂ ನನ್ನನ್ನು ಅಚ್ಚರಿಯಲ್ಲಿ ಮುಳುಗಿಸಿ ಬಿಡುತ್ತೆ. ನಮ್ಮಿಬ್ಬರನ್ನೂ ಪರಿಚಯ ಮಾಡಿಸಿದ ಕೃಷ್ಣಮೂರ್ತಿ ದಂಪತಿಗಳು "ಇವನ ಹೆಸರು ಕಾರಂತ ಅಂತ, ಕಾಶಿ ಹಿಂದೂ ವಿಶ್ವವಿದ್ಯಾಲಯದಲ್ಲಿ ಎಂ.ಎ ಓದುತ್ತಿದ್ದಾನೆ. ಬಹಳ ಚೆನ್ನಾಗಿ ಹಾಡುತ್ತಾನೆ. ಲೋ ಕಾರಂತ, ಒಂದು ಹಾಡು ಹೇಳೋ" ಅಂದರು. ನನ್ನನ್ನೇ ಓರೆಗಣ್ಣಿನಿಂದ ನೋಡುತ್ತಿದ್ದ ಕಾರಂತ ಅಂದು ಹಾಡಿದ್ದು ಕಬೀರ್‌ದಾಸರ ದೋಹ. ಆಗ ನನಗೆ ಕಬೀರದಾಸನ ಪರಿಚಯವೂ ಇರಲಿಲ್ಲ; ದೋಹ ಅಂದರೇನೂ ಅಂತಲೂ ತಿಳಿದಿರಲಿಲ್ಲ. "ಪ್ರೀತ್ ಕೋ ಪ್ರೀತ್ ಲಗಾಯಿರೆ ಮನುವಾ" ಎನ್ನುವ ಬದಲು "ಪ್ರೇಂ ಕೋ ಪ್ರೇಂ ಲಗಾಯಿರೆ ಮನುವಾ" ಎಂದು ಹಾಡಿದರು. ಹಾಡು ನನಗೆ ಗೊತ್ತಿದ್ದರೆ ತಾನೆ ವ್ಯತ್ಯಾಸ ಕಂಡುಹಿಡಿಯಲು? ಮದುವೆಯಾದ ನಂತರ ಎಲ್ಲೋ ಇದೇ ದೋಹ ಹಾಡಿದಾಗ ನನಗರ್ಥವಾಯಿತು, ಬೇಕಂತಲೇ ಹಾಗೆ ಹಾಡಿದ್ದರೆಂದು.



ಮರುದಿನ ಸುಮಾರು 5 ಗಂಟೆಗೆ ಚಂಪಾ ನಮ್ಮ ಮನೆಗೆ ಬಂದರು. "ಬಾರೆ ಪ್ರೇಮಾ ಬ್ಯೂಗಲ್ ರಾಕ್‌ಗೆ ಹೋಗೋಣ" ಅಂದರು. ಬ್ಯೂಗಲ್‌ರಾಕ್ ನನಗೆ ಬಹಳ ಪ್ರಿಯವಾದ ತಾಣ. ಕೂಡಲೇ ಹೊರಟೆ. ಅಲ್ಲಿ ಬಂಡೆಗಳ ಮಧ್ಯೆ ಕುಳಿತ ನಂತರ ಚಂಪಾ ಶುರು ಮಾಡಿಕೊಂಡರು. "ಪ್ರೇಮಾ ನಿನ್ನೆ ನೀನು ನಮ್ಮ ಮನೆಯಲ್ಲಿ ಭೇಟಿಯಾದೆಯಲ್ಲ ಕಾಶಿಯ ಕಾರಂತ. ಅವನು ನಿನ್ನನ್ನು ತುಂಬಾ ಮೆಚ್ಚಿಕೊಂಡಿದ್ದಾನೆ. ಮದುವೆಯಾಗಲು ಇಚ್ಛಿಸುತ್ತಾನೆ, ನಿನ್ನ ಅಭಿಪ್ರಾಯಯವೇನು?" ಎಂದರು. ನನ್ನದೇ ಆದ ದಿಟ್ಟತನದಿಂದ "ನಾನವರನ್ನು ಭೇಟಿಯಾಗಿ ಮಾತನಾಡಬೇಕು. ಮಾತನಾಡಿದ ನಂತರ ನನ್ನ ಅಭಿಪ್ರಾಯ ತಿಳಿಸುತ್ತೇನೆ" ಎಂದೆ. ಮುಗುಳ್ನಕ್ಕ ಚಂಪಾ "ಆಯಿತು, ಲಾಲ್‌ಬಾಗ್‌ನಲ್ಲಿ ಭೇಟಿ ಮಾಡಿಸುತ್ತೇನೆ" ಎಂದರು. ಮಾರನೇ ದಿನವೇ ನಾವು ಲಾಲ್‌ಬಾಗ್‌ನಲ್ಲಿ ಭೇಟಿಯಾದೆವು. ಅವರು ತಮ್ಮ ಸ್ಥಿತಿಗತಿಯನ್ನು ವಿವರಿಸಿ, "ನನಗೆ ಯಾವ ಕಷ್ಟವನ್ನಾದರೂ ಎದುರಿಸುವಂಥ ಹೆಂಡತಿ ಬೇಕು. ಹಿಂದೀ, ಬೆಂಗಾಲಿ ಭಾಷೆಗಳನ್ನು ಕಲಿಯಬೇಕು" ಎಂದರು. ನಾನೂ ನನ್ನ ಸ್ಥಿತಿಗತಿ ವಿವರಿಸಿ, "ಕಷ್ಟದಲ್ಲೇ ಬೆಳೆದು ಪಳಗಿದ ನನಗೆ ಇದ್ಯಾವುದೂ ದೊಡ್ಡದಲ್ಲ. ಆದರೆ ಮದುವೆಯ ಬಗ್ಗೆ ಕೊಂಚ ಯೋಚಿಸಿ ಪತ್ರ ಮುಖೇನ ತಿಳಿಸುತ್ತೇನೆ" ಎಂದೆ ಕಾರಂತರು ಪೆಚ್ಚಾದರು. ಕೇಳಿದ ಕೂಡಲೇ ಒಪ್ಪಿಕೊಳ್ಳುತ್ತಾಳೆ ಎಂದುಕೊಂಡಿದ್ದರೇನೋ! ಮನೆಗೆ ಬಂದು ಚೆನ್ನಾಗಿ ಯೋಚಿಸಿದೆ. ಒಂದು ಸಾರಿ ಅನ್ನಿಸಿತು. ಇಷ್ಟು ದಿನವೂ ಕಷ್ಟದಲ್ಲೇ ಕಳೆದಿದ್ದಾಯಿತು. ಮದುವೆ ನಂತರವೂ ಅದೇ ಬಾಳಾದರೆ? ಈ ಮದುವೆ ಬೇಡ ಅನ್ನಿಸಿತು. ಮತ್ತೊಮ್ಮೆ ಕಾಶಿ, ದಿಲ್ಲೀ ನೋಡುವ ಆಸೆ. ರಾತ್ರಿಯೆಲ್ಲಾ ನಿದ್ರೆ ಮಾಡದೆ ಯೋಚಿಸಿ, ಕೊನೆಗೆ ನನಗೆ ಸರಿಯಾದ ವ್ಯಕ್ತಿ ಈತನೇ ಎಂದು ನಿರ್ಧರಿಸಿದೆ. ಅಷ್ಟರಲ್ಲಿ ಕಾರಂತ್ ಕಾಶಿ ಸೇರಿಯಾಗಿತ್ತು. ಇಂಗ್ಲಿಷ್‌ನಲ್ಲಿ ಪತ್ರ ಬರೆದು ನನ್ನ ಒಪ್ಪಿಗೆ ನೀಡಿದೆ. ನಂತರ ಒಂದು ವರುಷದಲ್ಲಿ ನಾವು ಬರೆದ ಪತ್ರಗಳು ನೂರಾರು. ಪ್ರೇಮ ಪತ್ರಗಳೆನ್ನುವ ಬದಲು ನಾನಾ ವಿಷಯಗಳ, ಸಮಸ್ಯೆಗಳ ಬಗ್ಗೆ ಚರ್ಚೆಯೇ ನಡೆಯುತ್ತಿತ್ತು.



ನಂತರ ಅಜ್ಜಿ, ತಾತನಿಗೆ ವಿಷಯ ತಿಳಿಸಲು ನಾನು ಶಿಡ್ಲಘಟ್ಟಕ್ಕೆ ಹೋದೆ. ಅಲ್ಲಿಂದ ವೈ.ಎನ್.ಕೆ.ಗೆ ಪತ್ರ ಬರೆದೆ. ಕಾರಂತರ ಬಗ್ಗೆ ನಿನ್ನ ಅಭಿಪ್ರಾಯವೇನೆಂದು? ಅವನು ಬರೆದ ಪತ್ರ ಇಂದಿಗೂ ನನ್ನಲ್ಲಿದೆ.

"ಕಾರಂತ ಬುದ್ಧಿಜೀವಿ, ಶ್ರಮ ಪಡುವ ವ್ಯಕ್ತಿ ಕಾಡಲ್ಲಿರಲಿ, ಬೆಟ್ಟದ ತುದಿಯಲ್ಲಿರಲಿ, ನಿನ್ನನ್ನು ಸಾಕಬಲ್ಲ ಶಕ್ತಿ ಅವನಲ್ಲಿದೆ! ಧೈರ್ಯವಾಗಿ ಮದುವೆಯಾಗು" ಎಂದು.

1954 ಜೂನ್ 6 ರಂದು ಆರ್ಯ ಸಮಾಜ ಪದ್ಧತಿಯಂತೆ ಮದುವೆ ನಡೆಯಿತು. ನಮ್ಮ ಮದುವೆಗೆ ಬಿದ್ದ ಒಟ್ಟು ಖರ್ಚು 4,000/-ರೂ. ನನ್ನ ಕರಾರಿನಂತೆ ಮದುವೆಗೆ ಮುಂಚೆ ಕಾರಂತರ ಉದ್ದ ಗಡ್ಡ ಮಾಯವಾಗಿತ್ತು.

ಮದುವೆಯಾದ ಕೂಡಲೆ ಹೆಂಗಸರು ತಮ್ಮ ಕೆಲಸದಲ್ಲಿ ಪ್ರಾಮಾಣಿಕತೆಯನ್ನು ಕಳೆದುಕೊಳ್ಳುತ್ತಾರೆಂದು ಹೋಮ್ ಸ್ಕೂಲ್ ನಡೆಸುತ್ತಿದ್ದ ಅಮೆರಿಕನ್ ಹೆಂಗಸರ ಅಭಿಪ್ರಾಯ. ನನ್ನನ್ನು ಕೂಡಲೇ ಶಾಲೆಯಿಂದ ಕಳುಹಿಸಿಬಿಟ್ಟರು. ಆಗ ನನಗೆ ಅವಮಾನವಾದಂತಾಗಿ ಅಳುವೇ ಬಂದು ಬಿಟ್ಟಿತು. ಆ ಸಮಯದಲ್ಲಿ ವೈ.ಎನ್.ಕೆ.ಯವರ ತಮ್ಮ ಕೇಶವಮೂರ್ತಿ ಕಲ್ಕತ್ತೆಯಲ್ಲಿದ್ದ ಚಿಕ್ಕಮ್ಮ ನನ್ನನ್ನು ಅವರ ಜೊತೆ ಕಲ್ಕತ್ತೆಗೆ ಕರೆದೊಯ್ದರು. ಕಾಶಿಗೆ ಹತ್ತಿರದಲ್ಲಿರುತ್ತೇನೆಂದು ನೆಮ್ಮದಿಯಿಂದ ಕಲ್ಕತ್ತೆಗೆ ಹೊರಟೆ.

ಕಲ್ಕತ್ತೆ ಕಾಶಿ - ಸಂಸಾರ!

ಕಲ್ಕತ್ತಾದಲ್ಲಿ ಅಣ್ಣನ ಮನೆಯಲ್ಲಿದ್ದುದರಿಂದ ನನಗಾದ ಅನುಭವ ಬಹಳ ದೊಡ್ಡದು. ಆಗ ಬೆಂಗಾಲೀ ಥಿಯೇಟರ್ ಉತ್ತುಂಗ ಮಟ್ಟದಲ್ಲಿ ಇಲ್ಲದಿದ್ದರೂ ಬಹಳ ನಾಟಕಗಳು ನಡೆಯುತ್ತಿದ್ದುವು. ಕಾರಂತ ಕಾಶಿಯಿಂದ ಕಲ್ಕತ್ತೆಗೆ ಬಂದಾಗಲೆಲ್ಲಾ ಅವರ ಜೊತೆ ಬೆಂಗಾಲೀ ಥಿಯೇಟರ್ ನೋಡುತ್ತಿದ್ದೆ. ಶಂಭುಮಿತ್ರ, ತೃಪ್ತಿಮೈತ್ರ ಅವರ ನಾಟಕಗಳನ್ನು ಅಲ್ಲೇ ನೋಡಿದ್ದು. ರಿವಾಲ್ವಿಂಗ್ ರಂಗಭೂಮಿಯನ್ನೂ ಸಹ ನೋಡಿ ಆಶ್ಚರ್ಯಪಟ್ಟಿದ್ದೆ. ನಾಟಕದ ಅಭಿರುಚಿ ನನಗೆ ಶುರುವಾದದ್ದು ಕಲ್ಕತ್ತೆಯಿಂದಲೇ.

ಕಲ್ಕತ್ತೆಯಲ್ಲಿ ಆರು ತಿಂಗಳು ಕಳೆದ ನಂತರ, ನಾನು ಕಾಶಿಗೆ ಹೊರಟೆ. ಕಾಶಿಯ ಗಂಗಾನದಿಯ ದಡದಲ್ಲೆ ಒಂದು ಉದ್ದವಾದ ಕೊಠಡಿಯಲ್ಲಿ ನಮ್ಮ ಸಂಸಾರ ಪ್ರಾರಂಭವಾಯಿತು. 12 ರೂ. ಬಾಡಿಗೆ. ಅಡ್ಡ ಪರದೆ ಹಾಕಿ ಅಡಿಗೆ ಮನೆ ಮಾಡಿಕೊಂಡಿದ್ದಾಯಿತು. ಕಾರಂತರಿಗಾಗ ಬರುತ್ತಿದ್ದ ಸ್ಟೈಫಂಡ್ 150 ರೂ ಮಾತ್ರ ಆದರೆ ಕಾಶಿಯಲ್ಲಿ ಆಗ ಎಲ್ಲಾ ಬಹಳ ಅಗ್ಗ. ನಮ್ಮ ಅವಶ್ಯಕತೆಗಳೂ ಬಹಳ ಕಡಿಮೆ. ಕಾಶಿಯ ಸುಖ ಜೀವನ ನಾನೆಂದಿಗೂ ಮರೆಯಲಾರೆ. ಕಾಶಿಯಲ್ಲೇ ನಾನು ಎಫ್.ಎ.ಪಾಸ್ ಮಾಡಿಕೊಂಡು ಟೈಪ್‌ರೈಟಿಂಗ್ ಕ್ಲಾಸಿಗೆ ಸೇರಿಕೊಂಡೆ. ಆಗ ನಾನು ಟೈಪಿಂಗ್ ಕಲಿಯಲು ಸಹಾಯ ಮಾಡಿದವರು ವೈ.ಎನ್.ಕೆ.ಯ ಎರಡನೇ ತಮ್ಮ ಡಾ. ಶ್ರೀನಿವಾಸ ಮೂರ್ತಿ, ತಿಂಗಳಿಗೆ ನನಗೆ 40ರೂ ಕಳುಹಿಸುತ್ತಿದ್ದ. ವೈ.ಎನ್.ಕೆ. ಅವನ ಇಬ್ಬರು ತಮ್ಮಂದಿರೂ ನಾನು ಮುಂದೆ ಬರಲು ಒಂದಲ್ಲ ಒಂದು ರೀತಿ ಸಹಾಯ ಮಾಡಿದರು.

ಹೀಗೆ ಒಂದೂವರೆ ವರುಷ ಕಾಶಿಯ ಮಾನಸ ಸರೋವರ ಘಾಟ್‌ನಲ್ಲಿದ್ದ ಮನೆಯಲ್ಲಿ ಸಂತೋಷವಾಗಿದ್ದೆ. ಇದ್ದಕ್ಕಿದ್ದಂತೆ ಕಾರಂತರಿಗೆ ಬರುತ್ತಿದ್ದ 150 ರೂ. ಸ್ಟೈಫಂಡ್ ನಿಂತುಹೋಯಿತು. ಆಗ ದಿಕ್ಕೇ ತೋಚದಂತಾಯಿತು. ಕಾರಂತ ನನ್ನನ್ನು ಮದ್ರಾಸಿನಲ್ಲಿದ್ದ ಜಿ.ವಿ. ಅಯ್ಯರ್ ಮನೆಗೆ ಕಳುಹಿಸಿಬಿಟ್ಟರು. ಕಾರಂತ್ ಮತ್ತು ಅಯ್ಯರ್ ನಾಟಕ ಕಂಪನಿ

ಪುಟ 11 ಕ್ಕೆ

ರಂಗಭೂಮಿಯಲ್ಲಿ ಹೊಸ ಸಂಚಲನ ಮೂಡಿಸಿದ ಕಾರಂತರು

ಸಿ.ಪಿ.ಐ(ಎಂ) ಕಂಬನಿ

ಕರ್ನಾಟಕದ ರಂಗಭೂಮಿಯಲ್ಲಿ ಹೊಸ ಸಂಚಲನವನ್ನು ಮೂಡಿಸಿ, ದೇಶಾದ್ಯಂತ ರಂಗಭೂಮಿಯ ಮೇಲೆ ಅಚ್ಚಳಿಯದ ಪರಿಣಾಮ ಬೀರಿದ ಅಪ್ರತಿಮ ರಂಗ ನಿರ್ದೇಶಕ, ಚಲನ ಚಿತ್ರ ನಿರ್ದೇಶಕ ಬಿ.ವಿ ಕಾರಂತರಿಗೆ ಸಿಪಿಐ(ಎಂ) ರಾಜ್ಯಸಮಿತಿ ದುಃಖತಪ್ತ ಹೃದಯದಿಂದ ತನ್ನ ಅಶ್ರುತರ್ಪಣ ಸಲ್ಲಿಸಿದೆ.

ನೂರಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡು ಇತಿಹಾಸ ನಿರ್ಮಿಸಿದ "ಸತ್ತವರ ನೆರಳು" ನಾಟಕದ ಮೂಲಕ, ಪಾವಿತ್ರ್ಯದ ಮುಸುಕಿನಲ್ಲಿ ಸಂಪತ್ತಿಗಾಗಿ ನಡೆಯುವ ಮಠಮಾನ್ಯಗಳ ಬಡಿದಾಟಗಳನ್ನು ನಿಚ್ಚಳವಾಗಿ ತೆರೆದಿಟ್ಟ ಕಾರಂತರು ಪ್ರಗತಿಪರ ಚಿಂತನೆಗೆ ಇಂತಹ ಅನೇಕ ಪ್ರಮುಖ ಕೊಡುಗೆಗಳನ್ನು ಸಲ್ಲಿಸಿದ್ದಾರೆ.

ರಾಷ್ಟ್ರ ಪ್ರಶಸ್ತಿ ವಿಜೇತ ಚೋಮನದುಡಿ ಚಲನಚಿತ್ರದ ಮೂಲಕ ದಲಿತರ ನೋವು ಸಂಕಟಗಳನ್ನು, ಅಸ್ಪೃಶ್ಯತೆ, ಜೀತಗಾರಿಕೆ ಮತ್ತು ಭೂವಂಚನೆಯ ನಡುವಿನ ಸಂಕೀರ್ಣ ಸಂಬಂಧಗಳನ್ನು ತೆರೆದಿಟ್ಟು ಚಲನಚಿತ್ರರಂಗಕ್ಕೆ ಕಾರಂತರು ನೀಡಿದ ಕೊಡುಗೆ ಚಿರಸ್ಮರಣೀಯ. ರಂಗಸಂಗೀತ ಹಾಗೂ ಚಲನಚಿತ್ರ ಸಂಗೀತಗಳ ಮೂಲಕ ಸಂಗೀತ ಪ್ರಪಂಚಕ್ಕೆ ಅವರು ನೀಡಿದ ಕೊಡುಗೆ ಹಾಗೂ ರಂಗಭೂಮಿಯ ಆಧಾರ ಸಂಸ್ಥೆಗಳಾಗಿರುವ ದೆಹಲಿ ನಾಟಕ ಶಾಲೆ ಭೂಪಾಲ್‌ನ ಭಾರತ ಭವನ, ಕರ್ನಾಟಕದ ರಂಗಾಯಣ, ಮೊದಲಾದ ಸಂಸ್ಥೆಗಳಿಗೆ ಜೀವ ತುಂಬಿದ್ದು, ಅವುಗಳ ಮೂಲಕ ಸಾವಿರಾರು ರಂಗ ಪ್ರತಿಭೆಗಳು ಬೆಳಕಿಗೆ ಬರಲು ಕಾರಣರಾಗಿದ್ದಾರೆ.

ಕಾರಂತರನ್ನು ಕಳೆದುಕೊಂಡ ಕರ್ನಾಟಕದ ರಂಗಭೂಮಿ, ಚಲನಚಿತ್ರರಂಗ ಹಾಗೂ ಭಾರತದ ರಂಗಭೂಮಿ ಬಡವಾಗಿದೆ ಎಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ತನ್ನ ಶೋಕವನ್ನು ವ್ಯಕ್ತಪಡಿಸಿದೆ.

ಬಿ.ವಿ ಕಾರಂತರ ಅಗಲಿಕೆಯ ನೋವನ್ನು ಸೈರಿಸಿಕೊಳ್ಳಲು ಪತ್ನಿ ಹಾಗೂ ರಂಗನಿರ್ದೇಶಕಿ ಪ್ರೇಮಕಾರಂತ, ಅವರ ಕುಟುಂಬ ಹಾಗೂ ಅಸಂಖ್ಯಾತ ಅಭಿಮಾನಿಗಳಿಗೆ ಸಾಧ್ಯವಾಗಲಿ ಎಂದು ಸಿಪಿಐ(ಎಂ) ಆಶಿಸಿದೆ. ಅವರ ಪಾರ್ಥೀವ ಶರೀರ ಇರಿಸಲಾಗಿದ್ದ ಸಂಸರಂಗ ಮಂದಿರಕ್ಕೆ ಪಕ್ಷದ ಮುಖಂಡರಾದ ಜಿ.ಎನ್.ನಾಗರಾಜ್, ನಿತ್ಯಾನಂದ ಸ್ವಾಮಿ ತೆರಳಿದ್ದರು. ಕಾರಂತರಿಗೆ ಐಕ್ಯರಂಗ ಶ್ರದ್ಧಾಂಜಲಿ ಸಲ್ಲಿಸಿದೆ.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು

ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,

ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH